ಅಗ್ಗಂಕ

ಎಸ್. ಆರ್. ಚಂದ್ರ

ಹರಾವುಕೆಗಳು

ಅಗ್ಗ೦೪

ಎಸ್. ಆರ್. ಚಂದ್ರ

ಕರಾಮೋಸಗಾರಿ

ಒಗ್ಗರಣೆ

(ವಿನೋದಪ್ರಬಂಧಗಳು)

ಬರೆದವ:— ಎಸ್. ಆರ್. ಚಂದ್ರ,
ಮಂಗಳೂರು.

PUBLISHERS:
BALA SAHITYA MANDALA LIMITED,
Codialbail, Mangalore.

(ಪ್ರಥಮ ಮುದ್ರಣ—ಒಂದುಸಾವಿರ ಪ್ರತಿಗಳು)

1947

ಬೆಲೆ: ೧—೦—೦

Printed at
The Saraswathi Printing Works, Ltd., Mangalore,
P.I.C. No. S.K. 23.
Published by
Bala Sahitya Mandala Limited, Mangalore,
P.I.C. No. S.K. 5. 10-11-47/1000 Copies.

ಒಂದು ಮಾತು

ಏನೋ ಬರೆದಿದ್ದೇನೆ, ಅಷ್ಟೆ. ಏನು, ಏಕೆ—ಎಂಬ ಪ್ರಶ್ನೆಗಳಿಗೆ ಉತ್ತರ—"ಉಂ-ಹುಂ". ಉತ್ತರ ಕೊಡಲೇಬೇಕಾದರೆ,—"ವಿನೋದವೇ ಗುರಿಯಲ್ಲದೆ ವಿರೋಧವಲ್ಲ, ವೈಯಕ್ತಿಕ-ವ್ಯಂಗ್ಯವಲ್ಲ"— ಎಂದಿಷ್ಟು ಮಾತ್ರ ಹೇಳಬಲ್ಲೆ.

"ಒಗ್ಗರಣೆ"ಯಲ್ಲಿ ಸೇರಿದ ನವಧಾನ್ಯಗಳಲ್ಲಿ ಜಳ್ಳು-ಪೊಳ್ಳು, ಕಲ್ಲು-ಕಸಗಳೇ ಹೆಚ್ಚು ಇರಬಹುದು; ಅದೇಕೆಂದರೆ, ಒಗ್ಗರಣೆಯ ಪಾಕಕ್ಕೆ ನನ್ನದೇನೂ ಪಳಗಿದ ಕೈಯಲ್ಲ, ಹೊಸಕೈ. ರುಚಿ-ಮಿತಿ-ಗತಿ ತಪ್ಪಿದಲ್ಲಿ ಕ್ಷಮೆಯೇ ಗತಿ; ಕ್ಷಮೆಗಾಗಿ ಕೈಯೊಡ್ಡುವೆನು.

ಒಗ್ಗರಣೆಯ ಸಿದ್ಧತೆಯಲ್ಲಿ ಯೋಗ್ಯ ಸಲಹೆ-ಪ್ರೋತ್ಸಾಹಗಳನ್ನಿತ್ತ ವಿದ್ವಾನ್ ಶ್ರೀ। ಕೆ. ಪುಟ್ಟಣ್ಣ ಗೌಡ, ಮತ್ತು ವಿದ್ವಾನ್ ಶ್ರೀ। ಎಮ್. ಶಂಕರನಾರಾಯಣ ಭಟ್ಟ—ಇವರಿಗೆ ನನ್ನ ಸವಿನಯ ವಂದನೆಗಳಿವೆ. "ಒಗ್ಗರಣೆ"ಗೆ ಮುನ್ನುಡಿಯ ಕಂಪನ್ನು ದಯೆಪಾಲಿಸಿದ ಶ್ರೀ। ಕೆ. ವಿ. ಕೃಷ್ಣಭಟ್ಟ, ಬಿ. ಎ., ಬಿ. ಒ. ಎಲ್.— ಇವರಿಗೆ ಚಿರಋಣಿಯಾಗಿರುವೆನು.

ಈ ಪುಸ್ತಕದ ಪ್ರಕಾಶಕರಾದ ಬಾಲಸಾಹಿತ್ಯ ಮಂಡಲದ ಮೆನೇಜರ್, ಶ್ರೀ। ಉಳ್ಳಾಲ ಸುಮಿತ್ರ ಭಟ್ಟ— ಇವರಿಗೆ ಮನಃಪೂರ್ವಕವಾದ ಕೃತಜ್ಞತೆಯನ್ನು ಸಲ್ಲಿಸದಿರಲಾರೆ.

ಮಂಗಳೂರು,
೧೯೩೮.

ಎಸ್. ಆರ್. ಚಂದ್ರ.

॥ ಶ್ರೀರಸ್ತು ॥

ಮುನ್ನುಡಿ

"Laugh, and the world laughs with you;
Weep, and you weep alone;
For the sad old earth must borrow its mirth,
But has trouble enough of its own."

—*E. W. Wilcox (Solitude).*

"ತನ್ನ ಜೀವಮಾನದಲ್ಲಿ ಒಮ್ಮೆಯಾದರೂ ನಗದಿದ್ದವನ ವಿಷಯದಲ್ಲಿ ಜಾಗರೂಕನಾಗಿರು" ಎಂದು ಯಾವನೋ ಒಬ್ಬ ಸಾಹಿತಿಯು ಬರೆದಿದ್ದುದನ್ನು ಹಿಂದೊಮ್ಮೆ ಓದಿದ ನೆನಪು ನನಗಿದೆ. ನಕ್ಕು ನಕ್ಕು ಆರೋಗ್ಯವಂತನಾಗೆಂಬುದನ್ನು ವಿಶದಪಡಿಸುವ ಉದ್ದೇಶದಿಂದ "Laugh and grow fat" ಎಂದು ಹೇಳಿದವನೂ ತಥ್ಯಾಂಶವನ್ನೇ ನುಡಿದಿದ್ದಾನೆಂದು ನನ್ನ ಅಭಿಪ್ರಾಯವು. "The loud laugh that spoke the vacant mind" ಎಂದು ಹೇಳಿದ ಕವಿಯ ಭಾವವು, ನಗುವವನ ನಿರ್ವಿಕಾರಚಿತ್ತವೃತ್ತಿಯ ಸಂತುಷ್ಟಿಯನ್ನೇ ವ್ಯಕ್ತಗೊಳಿಸುತ್ತದೆಂಬುದರಲ್ಲಿ ಸಂಶಯವಿಲ್ಲ. "ಹಾಸವಿದು ಸಂತೋಷವಲ್ಲಿಯ ಭಾಸ-ಸೂನ-ವಿಕಾಸವು । ಬೇಸರವ ನೊಗೆದಾಡಿಪುದು ಮೃದುಹಾಸದೊಂದು ವಿಲಾಸವು ॥" ಎಂದು ಹಾಡಿದ ಕವಿ ಕಿಟ್ಟಣ್ಣನ ಮಾತಿನಲ್ಲಿ ತುಂಬ ಸ್ವಾರಸ್ಯವಿದೆ. ನಗುವವರೊಡನೆ ಲೋಕವು ನಗುವುದೂ, ನಗದವರನ್ನು ನೋಡಿ ನಕ್ಕು ಲೋಕವು ನಗೆಗೀಡಾಗಿಸುವುದೂ, ಲೋಕದ ವಿನೋದಪ್ರಿಯತೆಗೆ ಸಾಕ್ಷಿ. ಬೇಸರ ಹಿಡಿಸುವ ಜಗತ್ತಿನಲ್ಲಿ, ಒಂದಿಷ್ಟಾದರೂ ನಗೆಯಿಲ್ಲದ ಜೀವನವು ನಿಸ್ಸಾರವಾದುದು ಎಂತಲೆ "ಸಂತೋಷಂ ಜನಯೇತ್ ಪ್ರಾಜ್ಞಃ" ಎಂಬ ಸುಭಾಷಿತವುಂಟಾಗಿದೆ.

ಮಾನವ ಮನೋಧರ್ಮದಲ್ಲಿ ಎಂದುವರೆಗೆ ಹಾಸ (ನಗುವಿನ ಬೀಜ?)ವೆಂಬ ಸ್ಥಾಯಿಭಾವಕ್ಕೆ ಅಸ್ತಿತ್ವವಿರುವುದೋ ಅಂದುವರೆಗೆ

ಮಾನವವ್ಯವಹಾರದಲ್ಲಿ ಹಾಸ್ಯಪ್ರವೃತ್ತಿಗೂ ಎಡೆಯಿದೆಯೆಂಬುದು ನಿರ್ವಿವಾದ ವಿಷಯುವೇ ಸೈ. ವಿನೋದಮಯ ಪ್ರಪಂಚದ ಕೆಲ ವಿಶಿಷ್ಟಸನ್ನಿವೇಶಗಳ ಆಲಂಬನೋದ್ದೀಪನಗಳಿಂದ ಮನುಷ್ಯನ ಹಾಸವಿಶಿಷ್ಟಮನೋವೃತ್ತಿಯಲ್ಲಿ ಸಂತೋಷವು ಉದ್ಬುದ್ಧವಾಗಿ ಹಾಸ್ಯರೂಪಚೇಷ್ಟೆಯು ಅಭಿವ್ಯಕ್ತವಾಗುವ ರೀತಿಯು, ಒಂದಿಲ್ಲೊಂದು ವಿಧದಿಂದ ಮನುಷ್ಯನು ನಗುವುದನ್ನೂ ನಗಿಸುವುದನ್ನೂ ಲೋಕದಲ್ಲಿ ರೂಢಮೂಲವಾಗಿ ಮಾಡಿದೆ. ಕೇವಲ ಸಂಜಾತಾಂತಃಸ್ಮಿತದಿಂದಲೇ ಅಂತಸ್ಸಂತುಷ್ಟಿಯ ಧ್ವನಿಯನ್ನು ವ್ಯಕ್ತಗೊಳಿಸುವ ಸುಸಂಸ್ಕೃತ (Refined) ಸುಶಿಕ್ಷಿತ (Well-trained) ಸುಗಂಭೀರ (Dignified) ಮಂದಹಾಸವು ಮೊದಲ್ಗೊಂಡು, "ಪಳ್ಳದ ಕೇದಗೆಗೆ ಪಾಯ್ದು ಪತ್ತಿದಕೆಯ್ಯಂ ಮುಳ್ಳುರ್ಚೆ ತೆರೆದು ಪಲ್ಲಂಘೊಳ್ಳೆನೆ ನಗಿಸಿದುದು ಕಟಕಮಂ ಮರ್ಕಟಕಂ" ಎಂಬ ಬೆಳ್ನಗೆಯ ವರೆಗಿನ ಎಲ್ಲಾ ಚೇಷ್ಟೆಗಳೂ ಹಾಸ್ಯಪ್ರಪಂಚದ ವಿರಾಡ್ರೂಪವನ್ನೇ ಪುಷ್ಟಿಗೊಳಿಸುತ್ತವೆ. ನಮ್ಮ ನಿತ್ಯವ್ಯವಹಾರದಲ್ಲಿ ಇದಕ್ಕೆ ಸಿಗುವ ಉದಾಹರಣೆಗಳೆಂದರೆ,— ಸರ್ಕಸಿನ "Clown" ಎಂಬ ವಿದೂಷಕನು, ನಾಟಕಗಳಲ್ಲಿಯ ವಿದೂಷಕನು, ಬಯಲಾಟಗಳಲ್ಲಿಯ ಹಾಸ್ಯಗಾರ-ಕೋಡಂಗಿಗಳು. ಒಂದು ಬಗೆಯ ವಿನೋದದೃಷ್ಟಿಯಿಂದ, ಇವರ ಅಸ್ತಿತ್ವವು "ಬೆಲ್ಲದ ಬೈಲ ಬೆರ್ಚಪ್ಪ ಇದ್ದ ಹಾಗೆ" ಎನ್ನಬಹುದಾದರೂ "ವಿಕೃತಾಂಗವೇಷಭಾಷಾಪ್ರಕಾರಕೃತಹಾಸಹೇತುಕ"ವಾದ ಹಾಸ್ಯಚೇಷ್ಟೆಯಿಂದ ಯಾವ ರೀತಿಯಿಂದಾದರೂ ಪ್ರಯತ್ನಪೂರ್ವಕವಾಗಿ ಸಭಿಕ ಸಮುದಾಯವನ್ನು ನಗಿಸುವುದೇ ಇವರ ಉದ್ದೇಶವು. ಪ್ರೇಕ್ಷಕರು ಹೇಗಾದರೂ ಮಾಡಿ ಘೊಳ್ಳೆಂದು ನಕ್ಕರೆ, ಸೈ, ಇವರ ಉದ್ದೇಶವು ಅಲ್ಲಿಗೆ ಮುಗಿಯಿತು. ಸಾಹಿತ್ಯದಲ್ಲಿಯೂ ಇಂತಹ ಕೃತಿಗಳು ಇಲ್ಲದಿಲ್ಲ. ಪ್ರಹಸನಗಳಲ್ಲಿ "ಅರ್ಕಕ್ಷೀರಂ ವಟಕ್ಷೀರಂ ಸ್ನುಹೀಕ್ಷೀರಂ ತಥೈವ ಚ । ಅಂಜನಂ ತಿಲಮಾತ್ರೇಣ ಪರ್ವತೋಪಿ ನ ದೃಶ್ಯತೇ ॥" ಎಂದು ಮುಂತಾಗಿ ಅಸಂಬದ್ಧಪ್ರಲಾಪದ ವಿಕಟಾವತಾರದಿಂದ ಸಭಿಕರಲ್ಲಿ ಹಾಸ್ಯತರಂಗಗಳನ್ನೆಬ್ಬಿಸಿದರೆ "ಲಟಕ ಮೇಲಕ"ದ ಉದ್ದೇಶ್ಯವು ಸಿದ್ಧಿಸಿದಂತಾಯ್ತೆನ್ನಬಹುದು. ಕಡಲಲ್ಲಿ ಮುಳುಗಿದರೂ ನಗುತ್ತಲೇ ಪ್ರಾಣವನ್ನು ಇರಗೊಡಿಸುವ "ನಗೆಗಡಲು, ಹಾಸ್ಯರತ್ನಾಕರ"ಗಳೂ, ಜೀವಹಿಂಡಿದರೂ ಒಂದಿ

ಷ್ಟಾದರೂ ನಗೆಯನ್ನು ಪ್ರಚೋದಿಸದೆ ನಗೆಗೀಡಾಗಬಹುದಾದ "ನಗದವರನ್ನು ನಗಿಸುವ ಕಥೆ"ಗಳೂ, ವಿಕಟಪ್ರತಾಪ-ವಿಕಟವಿನೋದಿನಿಯರೂ ನಮ್ಮಲ್ಲಿ ಹಾಸ್ಯಪ್ರಪಂಚದ ಪರಿಚಯವನ್ನು ಮಾಡಿಕೊಡದೆ ಇಲ್ಲ. ಕೀರಾ ಚಿಕ್ಕಮಕ್ಕಳಿಗೆ ಸಾಲೆಯಲ್ಲಿ "ಓನಾಮ"ದ ಪರಿಚಯವಾಗುವುದರೊಂದಿಗೆ ನಗುಬಾರದಿದ್ದರೂ, "ನಗು ಮಗು ನಗು, ಬಿದ್ದು ಎದ್ದು ನಗು, ಹುಚ್ಚು ಹುಚ್ಚು ನಗು, ನಗು ಮಗು ನಗು" ಎಂದು ನಗುವಿನ ಹಾಡಿನ ನಗುವಿಲ್ಲದ ಬಾಯಿಪಾಠವಾರಂಭವಾಗಿ, ಕೊನೆಗೆ, ಹಳೆಯ ಮಾಸ್ತರರೊಬ್ಬರು ಶಾಲಾ ಇನ್ಸ್ಪೆಕ್ಟರರ ಸಂದರ್ಶಣೆಯ ಅವಸರದಲ್ಲಿ ಹಾಡಿದಂತೆ, "ಶಾಲಾ ಇನ್ನಸ್‌ಪೆಕ್ಟರ ಸ್ವಾರಿಯು ಚಿತ್ತೈಸಿದುದಕ್ಕೆ ವ್ಹಾ! ವ್ಹಾ! ವ್ಹಾ!" ಎಂದು ಸಂತೋಷದಿಂದಲೋ ಒತ್ತಾಯದಿಂದಲೋ ಮಕ್ಕಳಿಂದ "ವ್ಹಾ! ವ್ಹಾ! ವ್ಹಾ!" ಎಂದು ನಗಿಸಿ, ಪ್ರಕಟಿಸಿದ ಹಾಸ್ಯಪ್ರವೃತ್ತಿಯನ್ನೂ; ನಾನು ವಿನೋದಪ್ರಪಂಚದಲ್ಲಿ ಕಂಡಿದ್ದೇನೆ. ನಗುವ ವಿಶಿಷ್ಟ ಮನೋವೃತ್ತಿಯುಳ್ಳವರಿಗೆ, ಒಂದು ಬಗೆಯ ತಾತ್ತ್ವಿಕದೃಷ್ಟಿಯಿಂದ, ಇಡೀ ಪ್ರಪಂಚವೇ "ವಿನೋದಮಂದಿರ" (House of Mirth)ವಾಗಿ ಕಾಣುತ್ತದಂತೆ. ಕಾವ್ಯರಂಗದಲ್ಲಿ "ಅಳುತ್ತುಂ ಬಂದವರಂ ನಗುತ್ತುಂ ಪೋಪಂತೆ ಮಾಳ್ಪ" ಸಾಮರ್ಥ್ಯವುಳ್ಳ "ಪರಿಹಾಸಕೇಳೀಶೀಲ"ರಾದ ವಿದೂಷಕರು ಕಾಣಸಿಗುವಂತೆ, ಕಾರ್ಯರಂಗದಲ್ಲಿ ಕೂಡ ಅಂತಹರು ಕಾಣಸಿಗುವುದು ದುರ್ಲಭವಲ್ಲ. ಚೆಪ್ಪುತಕ್ಕಡಿಯ ಸ್ವಸ್ಥಾನದಿಂದ ತೊಡಗಿ, ಅರಸನಾಗಿಯೂ ಸರಸನೆನಿಸುವ ರಾಜನ ಆಸ್ಥಾನದ ವರೆಗೆ ರಾಜ್ಯವನ್ನೇ ತಲೆಕೆಳಗು ಮಾಡುವ ವಿನೋದಸಾಮರ್ಥ್ಯವುಳ್ಳ ವಿಕಟಕವಿಗಳೂ ನಮ್ಮಲ್ಲಿ ಇಲ್ಲದೆ ಇಲ್ಲ. ನಿಜವಾಗಿ ನೋಡಿದರೆ, "ತೆನ್ನಾಲರಾಮಕೃಷ್ಣ-ಬೀರ್‌ಬಲ" ಮುಂತಾದವರು "ವಿನೋದಾವತಾರ"ಗಳೆಂದು ನನ್ನ ಅಭಿಪ್ರಾಯವು. ವಿಜಯನಗರದ ಕೃಷ್ಣದೇವರಾಯ, ಮೊಗಲಾಯಿ ಬಾದಷಹ ಅಕ್ಬರ—ಇವರಂತಹ ವಿನೋದಪ್ರಿಯರಾದ ಭೂಪತಿಗಳ ಆಶ್ರಯವಿಲ್ಲದಿರುತ್ತಿದ್ದರೆ, ತೆನ್ನಾಲರಾಮಕೃಷ್ಣ-ಬೀರಬಲರಂತಹ "ನಗೆಗಾರರು" ಪ್ರಸಿದ್ಧಿಗೆ ಬರುತ್ತಿದ್ದರೇ? ನಗಿಸುವವರ ನಗಿಸುವ ಬಗೆಯಂತೆ ಸವಿಯರಿತು ನಗುವ ಸಹೃದಯರು ಬೇಕು; ಹೀಗಿದ್ದರೂ ನಗುವುದು ಸುಲಭ, ಅನುವರಿತು ನಗಿಸುವುದು ಬಹುಕಷ್ಟ.

ಹಾಸ್ಯಪ್ರವೃತ್ತಿಯ ಬೃಹದಾಕಾರವೇ "ವಿಕಟ"ವು. "ವಿಕೃತಾಂಗವೇಷಭಾಷಾಪ್ರಕಾರಕೃತಹಾಸಹೇತುಕಂ ಹಾಸ್ಯಂ"— ಎಂಬ ಲಕ್ಷಣವು ಈ ವೃತ್ತಿಗೆ ಚೆನ್ನಾಗಿ ಒಪ್ಪುತ್ತದೆ. ಪ್ರಾಯಶಃ ನಮ್ಮ ಜನಾಂಗದ ಹಾಸ್ಯಪ್ರಪಂಚದಲ್ಲಿ ಈ ವಿಕಟನಿಗೇ ಈ ತನಕ ಅಗ್ರಸ್ಥಾನವು ಸಲ್ಲುತ್ತಿದ್ದಿತೆನ್ನಬಹುದು. "ಹಾಸ್ಯರಸಕ್ಕೆ ಗಣನಾಥನು ಅಧಿದೇವತೆ"ಯೆಂಬ ನಮ್ಮ ಶಾಸ್ತ್ರಕಾರರ ಸಿದ್ಧಾಂತವೂ ಇದಕ್ಕೆ ಪುಷ್ಟಿಕೊಡುತ್ತದೆ. ಡೊಳ್ಳುಹೊಟ್ಟೆ, ಡೊಂಕಾದ ಉದ್ದಮೂಗು, ಕೋರೆದಾಡೆ, ಗೆರಸೆಯಂತಹ ಕಿವಿ— ಇವೇ ಪ್ರಧಾನವಾಗಿಯುಳ್ಳ "ವಿಕಟ" ಸ್ವರೂಪವೇ ಹಾಸ್ಯಕ್ಕೆ ಮೂಲವೆಂಬುದರಿಂದಲೋ, ಏನೋ— ಹಾಸ್ಯಮಯ ಪತ್ರಿಕೆಗಳ ಮುಖಪತ್ರಗಳಲ್ಲಿ ಕೂಡಾ ವಿಕಟನ ರೂಪವನ್ನು ವಿಕೃತವಾಗಿಯೇ ಚಿತ್ರಿಸಿರುವುದನ್ನು ನಾವು ನೋಡಬಹುದು. ಲಂಡನಿನ ಸುಪ್ರಸಿದ್ಧ ವಿನೋದಪತ್ರಿಕೆಯಾದ "ಪಂಚ್" ("Punch")ನ ರಕ್ಷಾಪತ್ರದಲ್ಲಿಯೂ ಈ ವಿಕಟನ ಚಿತ್ರವನ್ನು ನೋಡಿದರೆ,— ಪಾಶ್ಚಾತ್ಯರಲ್ಲಿಯೂ ಈ ಭಾವನೆಯು ಇದ್ದಂತೆ ತೋರುತ್ತದೆ. ಪ್ರಾಯಶಃ ಉತ್ತಮವಸ್ತುಗಳ ಮೇಲೆ ಬೀಳುವ ದೃಷ್ಟಿಬಾಧೆ (Evil-eye)ಯನ್ನು ತಿರುಗಿಸುವ ಉದ್ದೇಶದಿಂದ ಈ ವಿಕಟರೂಪವನ್ನು ಕಲ್ಪಿಸಿದ್ದಾಗಿರಬೇಕು. ಹೊಸಕಟ್ಟಡಗಳನ್ನು ಕಟ್ಟುವಲ್ಲಿ ವಿಕೃತ ಗೊಂಬೆಗಳನ್ನು ಇಡುವ ಪದ್ಧತಿಯು ಯಾರಿಗೆ ತಿಳಿದಿಲ್ಲ? ಅದು ಹೇಗೂ ಇರಲಿ. ವಿಕಟಹಾಸ್ಯವು, ಹಾಸ್ಯವೃತ್ತಿಯ ಬೃಹದ್ರೂಪವಾದರೆ,— ಪರಿಹಾಸವು ಅದರ ವ್ಯಸ್ತರೂಪವು. ಅಪಹಾಸ್ಯವು ಅದರ ಘೋರವಿಕೃತ ರೂಪವು. ಮಂದಹಾಸವೇ ಅದರ ಸೂಕ್ಷ್ಮರೂಪವೆಂದರೂ ಎನ್ನಬಹುದು.

ಯಥೇಷ್ಟವಾಗಿ ನಗುವ ಸ್ವಭಾವವುಳ್ಳವರಿಗೆ "ಸರ್ವಂ ವಿಕಟಮಯಂ ಜಗತ್" ಎಂಬುದೇನೋ ನಿಜವೇ! ಆದರೆ "ನಿಷ್ಕಾರಣವಾಗಿ ನಗುವುದು ಹೆಡ್ಡನ ಲಕ್ಷಣ" ಎಂಬ ಅರ್ಥಬರುವ "ಬೆರುದೆ ಚಿರಿಚ್ಚಾಲ್ ಬೋಸಲಕ್ಷಣಂ" ಎಂದು ಮಲಯಾಳ ಭಾಷೆಯಲ್ಲಿ ನನ್ನ ಕೇರಳದ ಬಂಧುಗಳೊಬ್ಬರು, "ಉದ್ಯೋಗಂ ಪುರುಷಲಕ್ಷಣಂ" ಎಂಬ ಮಾತಿಗೆ, ಸಂವಾದಿಯಾಗಿ ಹೇಳಿದುದನ್ನು ಕೇಳಿದ್ದೇನೆ. ನಿಷ್ಕಾರಣವಾಗಿ, ಅತಿಯಾಗಿ ನಗುವುದರ ನಿಷೇಧಕ್ಕಾಗಿ ಮಾತ್ರ ಈ ಮಾತನ್ನು ಹೇಳಿದುದೆಂದು ತಿಳಿ

ಯುಬೇಕು. "ಅತಿ ಸರ್ವತ್ರ ವರ್ಜಯೇತ್" ಎಂಬ ಸೂತ್ರವನ್ನು ನಗುವುದರಲ್ಲಿಯೂ ಅನ್ವಯಿಸದಿದ್ದರೆ, ಹಾಸ ಹೋಗಿ ತ್ರಾಸವಾಗುವುದರೊಂದಿಗೆ ಹಾಸಾಭಾಸವೂ ಆಗಿ ಬಿಡುವುದು ನಿಶ್ಚಯವು. "ಯುಕ್ತಾಹಾರವಿಹಾರಸ್ಯ ಯುಕ್ತ ಚೇಷ್ಟಸ್ಯ ಕರ್ಮಸು । ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ ॥" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದಂತೆ, "ಯುಕ್ತ ಹಾಸ-ಪ್ರಹಾಸಸ್ಯ, ಸುಕುಚೇಷ್ಟಸ್ಯ ಕರ್ಮಸು । ಯುಕ್ತಿಯುಕ್ತ ವಿನೋದಸ್ಯ ಹಾಸ್ಯೋ ಭವತಿ ದುಃಖಹಾ ॥" ಎಂದೇನೋ ಈ ಸಂದರ್ಭದಲ್ಲಿ ಹೇಳಿಬಿಡೋಣವೆಂದೆನಿಸುತ್ತದೆ. ಔಚಿತ್ಯವರಿತು ಹಿತವಾಗಿ ಮಿತವಾಗಿ ನಗುವುದು ಎಷ್ಟು ಯೋಗ್ಯವೋ, ಅಷ್ಟೇ ನಗಿಸುವುದೂ ಯೋಗ್ಯವೇ. ಆದರೆ ಹಾಗೆ ನಗುವುದಕ್ಕೆ ಒಂದು ಸಂಸ್ಕೃತಿ ಬೇಕು; ನಗಿಸುವುದಕ್ಕಂತೂ ಒಳ್ಳೇ ಸಾಮರ್ಥ್ಯವೂ ಬೇಕು.

ಇದಿಷ್ಟು ನಗುವ-ನಗಿಸುವ ವಿಚಾರ; "ಹಾಸ್ಯ"ದ ಮಾತು. "ಹಾಸ್ಯ"ದ ಮಾತಾದರೂ ಹಾಸ್ಯದ ಮಾತಲ್ಲವೆಂಬುದನ್ನು ಜೊತೆಗೆ ಹೇಳದಿದ್ದರೆ, ಅಪಾರ್ಥಕ್ಕೆಡೆಯಾದೀತೆಂಬ ಭಯ. ಒಟ್ಟಾರೆ ಪ್ರಪಂಚದಲ್ಲಿ ಹಾಸ್ಯವು ಬಹುಮಹಿಮೆಯುಳ್ಳುದೆಂಬುದು ಸ್ವಯಂವೇದ್ಯವು.

ಸಾಹಿತ್ಯದಲ್ಲಿ ಇತ್ತೀಚೆಗೆ ಹಾಸ್ಯಪ್ರಕಾರದಲ್ಲಿ ತೀವ್ರ ಸುಧಾರಣೆಗಳಾಗುತ್ತ ಬರುತ್ತಿರುವುದನ್ನು ನಾವು ಕಾಣಬಹುದು. ಈ ಸುಧಾರಣೆಗಳಲ್ಲಿ ನಮಗೆ ಕಂಡುಬರುತ್ತಿರುವುದು ಒಂದು ನಾವೀನ್ಯವು. ಈ ನವೀನ ಪ್ರಕಾರದಲ್ಲಿ ವಿಕಟಕ್ಕೆಡೆಯಿಲ್ಲ; ಇಲ್ಲಿ ಕಾಣುತ್ತಿರುವುದು "ಕಾಂತಾಸಮ್ಮಿತವಾದ ಉಪದೇಶ"ದ ಮಾದರಿಯನ್ನು. "ಹರಟೆಮಲ್ಲ"ರಿಂದ ತೊಡಗಿ "ಘನವಿಡಂಬನಕಾರ"ರ ತನಕ ಎಲ್ಲ ತರಗತಿಯ ವಿನೋದ ಲೇಖಕರ ನಗೆಯ ಬರೆಹಗಳಲ್ಲಿ, ವ್ಯಂಗ್ಯವಿನೋದಲೇಖಗಳಲ್ಲಿ, ಹರಟೆಗಳಲ್ಲಿ, ವಿಡಂಬನೆಗಳಲ್ಲಿ, ವಿನೋದಕಥೆಗಳಲ್ಲಿ,—ಈ ಸೌಮ್ಯರೂಪದ ಹಾಸ್ಯಪ್ರವೃತ್ತಿಯ ರೂಪರೇಷೆಗಳನ್ನು ನಾವು ಕಂಡುಕೊಳ್ಳಬಹುದಾಗಿದೆ. ಇಂತಹ ವಿನೋದಪ್ರಬಂಧಗಳ ಸಾಮ್ರಾಜ್ಯಕ್ಕೆ ಪಾಶ್ಚಾತ್ಯಭಾಷಾಸಾಹಿತ್ಯಗಳಲ್ಲಿ ಗಣ್ಯಸ್ಥಾನವು ಹಿಂದೆಯೇ ಕಲ್ಪಿಸಲ್ಪಟ್ಟಿದೆ. ಆಂಗ್ಲಸಾಹಿತ್ಯದಲ್ಲಿ, "ಡಿಕನ್ಸ್" (Dickens) ಎಂಬಾತನು "ಪಿಕ್‌ವಿಕ್" (Pickwick)

ಎಂಬ ಪಾತ್ರಸೃಷ್ಟಿಯಿಂದ ಅಮರನಾಗಿದ್ದಾನೆ; ಗೋಲ್ಡ್‌ಸ್ಮಿತ್ (Goldsmith)ನು "ಬೋ ಟಿಬ್ಸ್" (Beau Tibbs)ನ್ನು ನಿರ್ಮಿಸಿ ಕೀರ್ತಿ ಗಳಿಸಿದ್ದಾನೆ; ಸ್ವಿಫ್ಟ್ (Swift) ಎಂಬಾತನು "ಲಿಲ್ಲಿಪುಟ್" (Lilliput) ಎಂಬ ಪ್ರಪಂಚವನ್ನೇ ಕಲ್ಪಿಸಿ ಪ್ರಸಿದ್ಧನಾಗಿದ್ದಾನೆ. ಆಂಗ್ಲಸಾಹಿತ್ಯದಲ್ಲಿ "ವಿನೋದಪ್ರಬಂಧ" (Humourous Essays)ಗಳು ಎಷ್ಟೋ ಇವೆ. ಅವುಗಳಲ್ಲಿ ತೋರಿಬರುವ "Humour" (ಹ್ಯೂಮರ್-ಮೃದುವಿನೋದ) ಎಂಬ ವರ್ಗಕ್ಕೆ ಸೇರುವ ನಗೆಯ ಬರೆಹಗಳು ನಮ್ಮಲ್ಲಿ ಕಡಿಮೆ. ಏಕೆಂದರೆ, ಇಂಗ್ಲಿಷು ಜನರು "ಹ್ಯೂಮರ್" ಎಂಬುದರಿಂದ ಸವಿಯುವ ಅನುಭವಕ್ಕೂ, ನಮ್ಮ ಹಾಸ್ಯರಸದ ಅನುಭವಕ್ಕೂ ಅಭ್ಯಂತರವಿದೆಯೆನ್ನ ಬೇಕಾಗುತ್ತದೆ. ಆ ವರ್ಗಕ್ಕೆ ಸೇರಬಹುದಾದ ಉತ್ತಮ ವಿನೋದ ಪ್ರಬಂಧಗಳು ನಮ್ಮಲ್ಲಿ ಇನ್ನೂ ಹೆಚ್ಚು ಹೆಚ್ಚಾಗಿ ಬೆಳಕಿಗೆ ಬರಬೇಕಾ ಗಿದೆ. ಕನ್ನಡ ಸಾಹಿತ್ಯದಲ್ಲಿ ಅಂತಹ ವಿನೋದಸಾಮ್ರಾಜ್ಯದ ನೆಲೆಗಟ್ಟು ಈಗಾಗಲೇ ಆರಂಭವಾಗಿದೆಯೆಂಬುದು ಸಂತೋಷದ ವಿಷಯವು.

ನಗೆಯ ಬರೆಹಗಳಲ್ಲಿ ಕೆಲವು ಸಲ ಸ್ವಲ್ಪ ಕಟುವಾದುದೆಂದರೆ, ವ್ಯಂಗ್ಯ ವಿನೋದಪ್ರಬಂಧವು—ವ್ಯಕ್ತಿಯ, ಅಥವಾ ಸಮಾಜದ ಕುಂದು ಕೊರತೆಗಳನ್ನು ಆಯ್ದುಕೊಂಡು "ನಕಲಿ" ಮಾಡಿ "ಗೇಲಿ" ಮಾಡುವುದು ಅದರ ಸ್ಥೂಲರೂಪವಾದರೂ, ಗಂಭೀರವಾದ ಮೃದುಹಾಸದ ಸಮ್ಮಿಶ್ರಣ ದಿಂದ ಹದಗೊಂಡು, ಸದಮಲಾಂತಃಕರಣರಿಗೆ ಸಮ್ಮುದವನೊದವಿಪ ಬಗೆಯಿಂದ ಅದು ನಗೆಯನ್ನು ಚಿಮ್ಮಿಸುವುದಾದರೆ, ಅದು ಉತ್ತಮ ವ್ಯಂಗ್ಯವಿನೋದವೆನಿಸುವುದು. ಸಮಾಜದ ಅಭ್ಯುದಯಕ್ಕೆ ಅದು ರನ್ನ ಗನ್ನಡಿಯಂತಿರುವುದು. "ಕನ್ನಡಿಯಂ ತೋರಿದೊಡತ್ಯುನ್ನತಸಲ್ಲಕ್ಷಣಂಗೆ ಮುನಿಸಾಗದು, ಮ ॥ ತ್ತೆನ್ನದೆ ಮೂಕೊರೆಯಂಗಾ । ಕನ್ನಡಿಯಂ ತೋರೆ ಬಡಿಗುಮಿರಿಗುಂ ಕೊಲ್ಗುಂ ॥" ಎಂಬ ನೀತಿಯು ಅಕ್ಷರಶಃ, ಕೆಲವರ ದೃಷ್ಟಿಯಲ್ಲಿ, ಕಟುಶೈಲಿಯ ವ್ಯಂಗ್ಯ ವಿನೋದಪ್ರಬಂಧಗಳಿಗೂ ಅನ್ವಯಿಸ ಬಹುದು. ಚಿತ್ರಕಾರರಲ್ಲಿ ವ್ಯಂಗ್ಯ ಚಿತ್ರಕಾರನು ಹೇಗೋ, ಹಾಗೆ ಪ್ರಬಂಧಕಾರರಲ್ಲಿ ವ್ಯಂಗ್ಯ ಲೇಖಕನು (Satirist). ಒಬ್ಬನು ರೇಖಾ ಮೂಲಕ ಚಿತ್ರಿಸುವನಾದರೆ, ಮತ್ತೊಬ್ಬನು ಮಾತುಗಳ ಮೂಲಕ ಚಿತ್ರಿ

ಸುವನು. ಇಷ್ಟೇ ಅವರೊಳಗಣ ಭೇದ. ಇವರಿಬ್ಬರ ದೃಷ್ಟಿಗೂ ಕಾಣುವ ದೃಶ್ಯವೊಂದೇ ತರದ್ದು. ಇಂದಿನ ಸಾಹಿತ್ಯಯುಗದಲ್ಲಿ ಇಂತಹ ವ್ಯಂಗ್ಯ ಲೇಖಕರಿಗೆ ಒಳ್ಳೇ ಪುರಸ್ಕಾರವಿದೆಯೆಂಬುದರಲ್ಲಿ ಸಂಶಯವಿಲ್ಲ. ವ್ಯಂಗ್ಯ ವಿನೋದಲೇಖಕರು ಒಳ್ಳೇ ನುರಿತ ಕುಶಲಲೇಖಕರಾಗಿರಬೇಕೆಂಬುದನ್ನು ಪ್ರತ್ಯೇಕ ಹೇಳುವ ಕಾರಣವಿಲ್ಲ. "ಕಂಡದ್ದು ಹೇಳಿದರೆ ಕೆಂಡದಂತಹ ಕೋಪ ಬರುವ" ಜಗತ್ತಿನ ಮುಂದೆ ಸೈಗುಟ್ಟಿಸಿಕೊಳ್ಳುವ ವ್ಯಂಗ್ಯವಿನೋದ ಲೇಖಕನ ಯೋಗ್ಯತೆಯು ಅಷ್ಟಿಷ್ಟಲ್ಲ. ನಿಜವಾದ ವಿನೋದಸ್ವಭಾವವು "ಹೇಳಿಕೊಟ್ಟು ಕಲಿತು ಬರುವ" ಗುಣವಲ್ಲ ಎಂಬುದನ್ನು ಯಾರೂ ಮರೆಯಲಾಗದು.

ಕನ್ನಡ ಸಾಹಿತ್ಯದಲ್ಲಿ ವಿನೋದಪ್ರಪಂಚವು ಇನ್ನೂ ನಿರ್ಮಾಣಾವಸ್ಥೆಯಲ್ಲಿ (Still in the making) ಇರುವುದರಿಂದ, ಪ್ರಸ್ತುತವಾಗಿ ನಾಲ್ಕುಮಾತುಗಳನ್ನು ಪೀಠಿಕಾರೂಪವಾಗಿ ಮಾತ್ರ ಬರೆದಿರುವೆನಲ್ಲದೆ, ವಿನೋದಪ್ರಪಂಚದಲ್ಲಿ ಇದೇ ಕೊನೆಯ ಮಾತು ಎಂಬ ಭಾವನೆಯಿಂದಲ್ಲ.

ಪ್ರಸ್ತುತ ಗ್ರಂಥಕರ್ತರು ಕನ್ನಡನಾಡಿನ ವಿನೋದಿಗಳ ಅವಗಾಹನೆಗೆಂದು ಮುಂದಿರಿಸಿರುವ "ಒಗ್ಗರಣೆ"ಯೆಂಬ ಈ ವಿನೋದಪ್ರಬಂಧಗಳ ಸಂಕಲನವು,— ವಿನೋದಪ್ರಬಂಧದ ಕೆಲವು ಮಾದರಿಗಳನ್ನೊಳಗೊಂಡಿದೆ. ಇದರಲ್ಲಿ ಬಂದಿರುವ "ಪರೀಕ್ಷೆಗೆ ಓದುವುದು", "ಕನ್ನಡಿ", "ಸಂಭಾಷಣೆ", "ತಾಳಮದ್ದಲೆ" ಎಂಬವುಗಳನ್ನು ಓದಿ, ನಾನು ಚೆನ್ನಾಗಿ ನಕ್ಕಿದ್ದೇನೆ. ಈ ಗ್ರಂಥಕರ್ತರು ಎಷ್ಟು ಒಳ್ಳೆಯ ನಗೆಗಾರರಾಗಬಲ್ಲರೆಂಬುದನ್ನು ತೋರಿಸುವುದಕ್ಕೆ ಈ ಮೇಲೆ ಹೇಳಿದ ಪ್ರಬಂಧಗಳೇ ಸಾಕಾಗಿವೆ. ಇನ್ನುಳಿದ ಪ್ರಬಂಧಗಳಲ್ಲಿ "ಹೊಸಭಾವ" "ಪಂಡಿತರ ಕೂಟ" ಎಂಬಿವುಗಳ ಮಾದರಿಯೇ ಬೇರೆಯೆಂಬುದು ಸ್ಪಷ್ಟ. ಓದುಗರು ದೊಡ್ಡ ಮನಸ್ಸಿನಿಂದ, ಹಂಸಕ್ಷೀರನ್ಯಾಯದಿಂದ ಗ್ರಂಥಕರ್ತರ ವಿನೋದಪ್ರಬಂಧಗಳಿಗೆ ಪುರಸ್ಕಾರವನ್ನು ಕೊಡುವರೆಂದು ನಂಬುತ್ತೇನೆ. ಮೇಲೋಗರಕ್ಕೆ ಒಗ್ಗರಣೆಯು ಹೇಗೆ ಕಂಪು ನೀಡುವುದೋ, ಹಾಗೆಯೇ ಕನ್ನಡ ಸಾಹಿತ್ಯದ ಮೇಲೋಗರಕ್ಕೆ ಈ "ನಗೆಗಾರ" ಗ್ರಂಥಕರ್ತರ "ಒಗ್ಗರಣೆ"ಯಿಂದ ಒಂದಿಷ್ಟಾದರೂ ಕಂಪು ತಟ್ಟಿತೆಂದರೆ ಅವರ ಈ ಪರಿಶ್ರಮವು ಸಾರ್ಥಕವಾಯ್ತೆಂದೆ

ಣಿಸಬಹುದು. ಒಗ್ಗರಣೆಯಿಕ್ಕುವುದು ಮಾತ್ರ ಅಡುಗೆಯವನ ಕೆಲಸ; ಒಗ್ಗರಣೆಯ ರುಚಿಯನ್ನು ನೋಡುವುದು ಉಣ್ಣುವವರ ಕೆಲಸ! ಇನ್ನು,—ಕೆಲವರ ದೃಷ್ಟಿಯಲ್ಲಿ ಒಂದು ವೇಳೆ ಇದರಲ್ಲಿ ಕಹಿಯಾಗಿ ತೋರುವ ಕೆಲ ವಂಶಗಳಿದ್ದರೆ,—ಆ ಕುರಿತು—ಆಂಗ್ಲ ಕವಿಶ್ರೇಷ್ಠನಾದ ಆಲಿವರ್ ಗೋಲ್ಡ್‌ಸ್ಮಿತ್ (Oliver Goldsmith)ನು ಹೇಳುವಂತೆ,—"All his faults are such that one loves him still the better for them"* ಎಂದಿಷ್ಟು ಮಾತ್ರ ನಾನು ಹೇಳಬಯಸುತ್ತೇನೆ.

4—11—1947.

ಕೆ. ವಿ. ಕೃಷ್ಣಭಟ್ಟ,
ಕಾವೇರಿಕಾನ.

---

*"ಆತನ ತಪ್ಪುಗಳೆಲ್ಲವೂ ಮತ್ತಷ್ಟು ಪ್ರೀತ್ಯಾಸ್ಪದಗಳಾದಂಥವುಗಳೇ"— ಎಂದು ಈ ಮಾತಿನ ತಾತ್ಪರ್ಯವು. The Good-Natur'd Man I.

೧. ಪರೀಕ್ಷೆಗೆ ಓದುವುದು

ಪರೀಕ್ಷೆಗೆ ಓದುವುದೆಂದರೆ ದೊಡ್ಡ ಬೇಸರದ ಕೆಲಸ. ಓದಲು ಕುಳಿತರೆ ಉಳಿದ ಎಲ್ಲಾ ಕೆಲಸಗಳೂ ಹಾಳು. ಬೆಳಗ್ಗೆ ಏಳಬೇಕು; ಮಧ್ಯರಾತ್ರೆ ತನಕ ಓದಬೇಕು, ಅಯ್ಯೋ ಅವಸ್ಥೆಯೆ! ಈ ಕೆಲಸ ಯಾರಿಗೆ ಬೇಕಿತ್ತು? ಪರೀಕ್ಷೆಗಳೇ ಇಲ್ಲದಿರುತ್ತಿದ್ದರೆ, ಎಷ್ಟು ಒಳ್ಳೆಯದಿತ್ತು! ಲೋಕಕ್ಕೆ ಎಷ್ಟು ಉಪಕಾರವಾಗುತ್ತಿತ್ತು! ಎಷ್ಟು ಹಣ, ಸಮಯ, ಶಕ್ತಿ, ಆಯುಷ್ಯ ಉಳಿಯುತ್ತಿತ್ತು! ಬರೀ ಶಾಲೆಗೆ ಹೋಗುವುದು, ಬರುವುದು, ಊಟ ಮಾಡುವುದು, ಕಾಫಿ ಕುಡಿಯುವುದು, ತಿರುಗಾಡುವುದು—ಇತ್ಯಾದಿ, ಇತ್ಯಾದಿ........ಇಷ್ಟಿದ್ದರೆ ಸಾಲದೆ? "ಪರೀಕ್ಷೆ, ಪರೀಕ್ಷೆ" ಎಂದುಕೊಂಡು ಓದಿ ಓದಿ ತಲೆ ಹಾಳು ಮಾಡಿಕೊಳ್ಳುವುದೆಂದರೆ ಏನು ಹುಚ್ಚು! ದೇವರು ಕೊಟ್ಟ ತಲೆ, ಪ್ರತಿದಿನವೂ ಜಾಗ್ರತೆಯಿಂದ ಉಜ್ಜಿ, ಸವರಿ, ಮಾಲೀಸು ಮಾಡಿ, ಬಾಚಿ, ಸಾಕಿ ಸಲಹಿದ ತಲೆ! ಅಯ್ಯೋ, ಓದುಗಲ್ಲಿಗೆ ಜಜ್ಜಿ ಕೊಂಡು ಒಡೆದುಕೊಳ್ಳಬೇಕಲ್ಲ!........ತಲೆ ಬರೆಹ!

"ಬೆಳಗ್ಗೆ ಬೇಗನೇ ಎದ್ದು ಓದಬೇಕು, ಆಗ ತಲೆ ಸರಿಯಿರುತ್ತದೆ, ಓದಿದ್ದೆಲ್ಲಾ ತಲೆಗೆ ಹತ್ತುತ್ತದೆ, ಆರೋಗ್ಯಕ್ಕೂ ಒಳ್ಳೆಯದು" ಎಂದು ಹಲವರು ಹೇಳುತ್ತಾರಲ್ಲ—ನನಗೇಕೋ ಈ ಮಾತಿನ ಅರ್ಥವೇ ಮಂಡೆಗೆ ಹತ್ತುವುದಿಲ್ಲ. ಬೆಳಗ್ಗೆ ಬೇಗನೇ ಎದ್ದು ಆಗಬೇಕಾದ ಲಾಭವೇನೋ ನಾನರಿಯೆ; ನನ್ನ ತಲೆ ಓದದೆ ಇದ್ದರೆ ಸರಿಯಾಗಿರುತ್ತದೆ; ನನ್ನ ತಲೆಗೆ ಯಾವಾಗಲೂ ಹತ್ತುತ್ತದೆ—ಒಂದು ಸಲ ಹತ್ತಿದರೆ, ಇಳಿಯುವ ಮಾತೇ ಇಲ್ಲ; ಏನೂ ಓದದಿದ್ದರೂ, ನಾನು ಆರೋಗ್ಯವಂತನಾಗಿರಬಲ್ಲೆ—ಈ ವಿಷಯಗಳಿಗಾಗಿ ಬೆಳಗ್ಗೆ ಏಳಬೇಕಾದ ಅಗತ್ಯವೇ ನನಗೆ ತೋರುವುದಿಲ್ಲ. ವಿದ್ಯಾರ್ಥಿಗೆ ನಿದ್ದೆಯು ಹೆಚ್ಚು ಅಗತ್ಯವೋ, ಅಥವಾ ಪರೀಕ್ಷೆಯು ಹೆಚ್ಚು ಅಗತ್ಯವೋ ಎಂಬುದು ಇನ್ನೊಂದು "ಪೈಂಟು". ಬೆಳಗ್ಗಿನ ಸಮಯವು ಅತ್ಯುತ್ತಮ ಸಮಯವೆಂದಾದರೆ, ಅಷ್ಟು ಒಳ್ಳೆಯ ಸಮಯ ವನ್ನು ನಿದ್ದೆಗೆ ಉಪಯೋಗಿಸಬೇಕೊ, ಯಾ—ಪರೀಕ್ಷೆಗೆ ಓದಲು ಉಪ

ಯೋಗಿಸಬೇಕೊ? ನಿದ್ದೆ ಬಿಟ್ಟು ಪರೀಕ್ಷೆಗೆ ಓದಬೇಕೆನ್ನುವವರಿಗೆ ಒಂದಿಷ್ಟು ಮುಂಡೆಯಿಲ್ಲವೆನ್ನಬೇಕಾಗಿದೆ........ಅಂತೂ, ಹಿರಿಯರ ಮಾತಿಗಾದರೂ ಬೆಲೆ ಕೊಡೋಣವೆಂದು "ತಲೆ ಕೆಳಗೆ ಮಾಡಿ"ಯಾದರೂ ಬೆಳಗ್ಗೆ ಏಳಲೇ ಬೇಕೆಂದು ನಿಶ್ಚಯಿಸಿ, "ಟೈಮ್-ಪೀಸಿ"ಗೆ "ಅಲಾರಾಂ ಕೀ" ಕೊಟ್ಟು, ತಲೆಯ ಬಳಿಯಲ್ಲೇ ಇಟ್ಟುಕೊಂಡರೂ, ಎಚ್ಚರವೇ ಆಗಲೊಲ್ಲದು; ಒಂದೊಂದು ವೇಳೆ ಎಚ್ಚರವಾದರೂ, "ಅಲಾರಾಂ" ನಿಲ್ಲಿಸಿ, ಪುನಃ ನಿದ್ರಾರಂಭ. ಕೆಲವು ಸಲ ಗೊರಕೆಯ ಘನಘರ್ಜನೆಯಲ್ಲಿ "ಅಲಾರಾಂ" ಶಬ್ದವೇ ಕಿವಿಗೆ ನಾಟಲೊಲ್ಲದು. ಹೀಗೆ ನನ್ನೊಡನೆ ಸ್ಪರ್ಧಿಸಲಾರದೆ "ಟೈಮ್-ಪೀಸು" ಕೂಡಾ ನನ್ನ ಜತೆಯಲ್ಲಿ ನಿದ್ದೆ ಮಾಡತೊಡಗಿತ್ತು. "ಅಲಾರಾಮಿ"ನ ಕಿರಿಕಿರಿಯನ್ನು ಕೇಳಲಾರದೆ, ಅರೆನಿದ್ದೆಯ ಸಿಟ್ಟಿನಿಂದ ಹೊಡೆದ ಏಟಿಗೆ "ವಾಚು-ರಿಪೇರಿ"ಯವರನ್ನು ಸಂದರ್ಶಿಸುವ ಸಂದರ್ಭವು ಬಂದು, ಎರಡು ಮೂರು ರೂಪಾಯಿಗಳಿಗೆ "ಗಸಿ"ಯೂ ಬಂದಿತ್ತು. ಚಳಿಗಾಲ, ಮಳೆಗಾಲಗಳಲ್ಲಿ ಬೆಳಗ್ಗೆ ಹಾಸಿಗೆ ಬಿಟ್ಟು ಏಳುವುದೆಂದರೆ, ಭಗೀರಥನಿಗೂ ಅಸಾಧ್ಯ. ಹಾಗೆ ಏಳುವ ಮಹಾಸಾಹಸದಲ್ಲಿ ಮನಸ್ಸಿನೊಳಗೆ—"ಏಳು-ಏಳಬೇಡ" ಎಂಬ ಎರಡು "ಪಾರ್ಟಿ"ಗಳೊಳಗೆ ಮಹಾ ಯುದ್ಧವೇ ಪ್ರಾರಂಭವಾಗಿ, ಕೈಗೆ ಕೈ ಹತ್ತಿ ಜಟಾಪಟಿಯಾಗುವುದು. ಈ ಮಧ್ಯೆ, ಮನೆಯವರು ಯಾರಾದರೂ ಬಂದು ಮೈಹಿಡಿದು ಆಚೆಯಿೀಚೆ ಅಲುಗಾಡಿಸಿ ಎಬ್ಬಿಸತೊಡಗಿದರೆಂದರೆ, ಅವರಿಗೆ "ಏಳಬೇಡ" ಎಂಬ ಮಹಾರಾಯನ ಕಡೆಯಿಂದ ಒಂದೆರಡು "ಥಪರಾಕು"ಗಳು ಬಿದ್ದೇ ಬೀಳುವುವು. ಒಂದೆರಡು ಸಲ ಹೀಗೆ ಲತ್ತೆಯ ರುಚಿನೋಡಿದ ಕಾರಣ ನನ್ನನ್ನು ಎಬ್ಬಿಸುವ ಸಾಹಸಕ್ಕೆ ಯಾರೂ ಬರುತ್ತಿರಲಿಲ್ಲ.

ಅಂತೂ ಭಗೀರಥಪ್ರಯತ್ನಮಾಡಿ, ಒಂದೆರಡು ಸಲ ನಾನು ಪ್ರಯೋಗ(Experiment)ಕ್ಕಾಗಿ ಬೆಳಗ್ಗೆ ಎದ್ದಿದ್ದೆ. ಆದರೆ, ದೀಪಹಚ್ಚಿ ಓದಲು ಕುಳಿತುಕೊಂಡರೆ, ಆ "ಫಜೀತಿ" ಯಾರಿಗೆ ಬೇಕು! ಪುಸ್ತಕದಲ್ಲಿ ಬರೆದುದೆಲ್ಲಾ "ಹೌದು, ಸರಿ" ಎಂದು ಸಮ್ಮತಿಯನ್ನು ಸೂಚಿಸುವಂತೆ ತಲೆಯನ್ನು ತೂಕಡಿಸುವುದೇ ಕೆಲಸ. ಆದರೂ, ಈ ನಿದ್ದೆಯೊಡನೆ "ಒಂದು ಕೈ ನೋಡಲೇ ಬೇಕೆ"ಂಬ ಹಟ; ಅದರ ಮಹತ್ವವನ್ನು ತೂಗಿಯೇ ನೋಡ

ಬೇಕೆಂಬ ಆಗ್ರಹ. ನಿದ್ದೆಯ ತಕ್ಕಡಿಯು ಭಾರವಾಗಿ ಕೆಳಗೆ ಜಗ್ಗುವಾಗ, ಪುಸ್ತಕದ ತಕ್ಕಡಿಯು ಹಗುರವಾಗಿ ಮೇಲಕ್ಕೆ ಹಾರಿಬಿಡುವುದು. ಈ ಮಧ್ಯೆ ಪುಸ್ತಕಕ್ಕೂ ಮುಖಕ್ಕೂ ಪರಸ್ಪರ ಚುಂಬನ; ಪುಸ್ತಕವು ಜಾರಿ ತಪ್ಪಿ ಹೋಯಿತೆಂದರೆ, ಮುತ್ತಿನ ಮುದ್ರೆ ಮೇಜಿನ ಮೇಲೆ—ಮುಖಕ್ಕೂ ಮೇಜಿಗೂ "ಝಟಾಪಟಿ!" ನನ್ನ ಇಷ್ಟೆಲ್ಲಾ ಸಾಹಸಗಳನ್ನೂ, ಧ್ಯಾನ-ತಪಸ್ಸುಗಳನ್ನೂ ಕಂಡು ಮೆಚ್ಚಿ, ಕೆಲವೇ ಮಿನಿಟುಗಳಲ್ಲಿ ನಿದ್ರಾದೇವಿಯು ಪೂರ್ಣವಾಗಿ ಪ್ರತ್ಯಕ್ಷಳಾಗಿ ಬಿಡುವಳು. ತಪಸ್ವಿಗಳು ದೇವಿ-ದೇವತೆಯರನ್ನೊಲಿಸಲು ಸಾವಿರಗಟ್ಟಲೆ ವರ್ಷಗಳ ವರೆಗೆ ತಪಸ್ಸು ಮಾಡುತ್ತಿದ್ದರಂತೆ! ಆದರೆ, ನನಗೆ ಇದು ಮಿನಿಟಿನ ಕೆಲಸ! ನಾನು ಇಷ್ಟೊಂದು ನಿದ್ದೆ ತೂಗುವುದನ್ನು ಕಂಡು, ಮನೆಯವರು ನನಗೆ "ತೂಕೇಲು ಮಮ್ಮಿ" ಎಂದು ಹೆಸರಿಟ್ಟಿದ್ದರು. "ಮಮ್ಮಿ" ಎಂದರೆ ನಮ್ಮೂರಿನ ಒಬ್ಬ ಮಾಪಿಳೆ ಸಾಹುಕಾರ; ಅವನಿಗೆ ಇಡೀ ದಿನ ಮೀನು ತೂಗುವುದೇ ಕೆಲಸವಾದುದರಿಂದ, ಅವನಿಗೂ ನನಗೂ ಒಂದೇ ನಾಮಕರಣವಾಯಿತು! ವಿಷ್ಣುವು ನಿದ್ದೆಯನ್ನೊಲಿಸಿ "ಕ್ಷೀರಸಾಗರಶಯನ"ನೆಂದು ಹೆಸರು ಪಡೆದನಂತೆ; ನಾನು ಕುರ್ಸಿಯಲ್ಲಿ ಒರಗಿ "ಕುರ್ಸೀಶಯನ"ನೆಂಬ ಹೆಸರು ಪಡೆಯಲಾರೆನೆ? ವಿಷ್ಣುವು ಬೇಕಾದರೆ ನನ್ನ ಈ ಹನ್ನೊಂದನೆಯ ಅವತಾರವನ್ನು ನೋಡಲಿ!—"ಪುಸ್ತಕ ಅತ್ತ, ಮಸ್ತಕ ಇತ್ತ, ಕೈಕಾಲು ಕುತ್ತ—ಮೇಜಿನ ಮೇಲೆ!"........ಅಂತೂ, ನಿದ್ದೆಯನ್ನು ತೂಗಿ ನೋಡಿ, "ಕೈಯ ಪುಸ್ತಕದ ಭಾರಕ್ಕಿಂತ ತಲೆಯ ನಿದ್ದೆಯ ಭಾರವೇ ಹೆಚ್ಚು" ಎಂಬ ನಿರ್ಣಯಕ್ಕೆ ಬಂದಿದ್ದೇನೆ. ಆದುದರಿಂದ,

> "ನಿನ್ನ ಭಾರಕೆ ಜನರು ತಲೆದೂಗುತಿಹರೂ ।
> ನಿನ್ನನೇ ಕಣ್ಮುಚ್ಚಿ ಧ್ಯಾನಿಸುತಲಿಹರೂ" ॥

ಎಂದು ನಿದ್ದೆಯನ್ನು ಹೊಗಳಿದ ಕವಿಗೆ "ಪ್ರೈಸ್" (Prize) ಕೊಟ್ಟರೆ ಅದರಲ್ಲೇನೂ "ಸರ್‌ಪ್ರೈಸ್" (Surprise) ಇಲ್ಲ.

ನಿದ್ದೆಯ ಮಹಿಮೆಯು ಸರಿಯಾಗಿ ತಿಳಿದು ಬರುವುದು ಪರೀಕ್ಷೆಗೆ ಓದುವಾಗ ಮಾತ್ರ. ಕಳೆದ ಸಲ ಪರೀಕ್ಷೆಯು ಮೂಗಿನ ಬಳಿಗೆ ಬಂದಾಗ "ಇನ್ನು ಬಚಾವಿಲ್ಲ" ಎಂದುಕೊಂಡು, ನಿದ್ರಾದೇವಿಗೆ ಕೂಡಲೇ "ಕ್ವಿಟ್-

ನೋಟೀಸು" (Quit notice) ಕೊಟ್ಟೆ. "ಚಲೇ ಜಾವೋ, ಇಲ್ಲವಾದರೆ ಕರೇಂಗೇ–ಯಾ–ಮರೇಂಗೇ" ಎಂದು ಬಾಯಿಬಿಟ್ಟು ಹೇಳಿದೆ. ಆದರೂ ಅವಳಿಗೆ ನಾಚಿಗೆಯಿಲ್ಲ. "ಡೈವರ್ಸ್–ನೋಟೀಸು" (divorce notice) ಕೊಟ್ಟರೂ ಬಿಡುವಂತೆ ತೋರಲಿಲ್ಲ. ನಾನೆಂದರೆ, ಅವಳ ಪ್ರಾಣ; ಅವಳೆಂದರೆ ನನ್ನ ಪ್ರಾಣ. ನಮಗೆ ದೇಹವೆರಡು, ಜೀವವೊಂದೇ. ಹೀಗಿರುವಾಗ ನಿದ್ದೆ ಬಿಡುವುದೆಂದರೆ, ಪ್ರಾಣಬಿಡುವುದೆಂದೇ ಅರ್ಥ. ಆದರೂ, ಪರೀಕ್ಷೆಗಾಗಿ "ಪ್ರಾಣ ಬಿಡಲೇ"ಬೇಕಾಯಿತು. ಇದಕ್ಕಾಗಿ "ಚಾ-ಹೋಟೆಲಿ"ನವನಿಗೆ ದಕ್ಷಿಣೆ ಕೊಟ್ಟದ್ದು ಒಂದೆರಡು ಸಲವಲ್ಲ; ಅವನ "ಕೈ ಬಿಸಿಮಾಡಿ"ದರೆ ಮಾತ್ರ ಬಿಸಿ-ಚಾ ಕೊಡುತ್ತಾನೆ. ನನಗೆ ಬಿಸಿ-ಚಾ ಎಂದರೆ ಹೆಚ್ಚು "ಖಾಯಿಸಿ". ಅದೇಕೆಂದರೆ, ನಿದ್ರಾದೇವಿಯನ್ನು ಬಿಸಿಯಾದ ಚಾ-ದಲ್ಲಿ ಒಮ್ಮೆ ಮುಳುಗಿಸಿಬಿಟ್ಟರೆ ಸರಿ—"ಪದ್ರಾಡು!" ಏಕೆಂಬುದು ಗೊತ್ತೇ ಇದೆ: ಚಾದೇವಿಗೂ ನಿದ್ರಾದೇವಿಗೂ, ಸ್ವಲ್ಪ ಹಾಗೆ ಹಾಗೆ; ನಿದ್ರಾದೇವಿಗೂ, ಶಾರದಾದೇವಿಗೂ, ಒಳಗಿಂದೊಳಗೆ ಸರಿಯಿಲ್ಲ; ಆದುದರಿಂದಲೇ ಶಾರದಾದೇವಿಗೂ ಚಾದೇವಿಗೂ ಬಹಳ "ದೋಸ್ತಿ". ''Minus into minus is plus'' ಎಂಬ ಬೀಜಗಣಿತದ ಒಂದು ಸೂತ್ರವನ್ನು, ನಮ್ಮ "ಮಾಷ್ಟ್ರು ಲೆಕ್ಕಕ್ಕೆ" (teacher for mathematics—ಎಂದರೆ ಲೆಕ್ಕಕ್ಕೆ ಮಾತ್ರ ಮಾಷ್ಟ್ರು) ಒಂದು ಸಲ ಹೀಗೆಂದು ಸಮರ್ಥಿಸಿದ್ದರು—''The enemy of your enemy is your friend''... ಇರಲಿ, ಚಾದೇವಿಗೂ ಶಾರದಾದೇವಿಗೂ "ಕುತ್ತಿಗೆಯಲ್ಲೇ ಪ್ರಾಣ"; ಏಕೆಂದರೆ, ಚಾದೇವಿಯು ತಲೆಗೆ ಏರದ ಹೊರತು, ಶಾರದಾದೇವಿಯು ತಲೆಗೆ ಹತ್ತಲೊಲ್ಲಳು: ಎಂದರೆ, ಓದಿದ್ದು ತಲೆಗೆ ಹಿಡಿಯಬೇಕಾದರೆ, ಕುಡಿದ ಚಾ ತಲೆಗೆ ಏರಬೇಕು; ಕುಡಿದ ಚಾ ತಲೆಗೆ ಏರಬೇಕಾದರೆ, ಅದು "ಗರಂ" ಆಗಿರಬೇಕು.

ಪರೀಕ್ಷೆಗಳನ್ನುಂಟುಮಾಡಿದ "ಸೃಷ್ಟಿಕರ್ತ"ನಿಗೆ ಬಹುಶಃ ನಾಲ್ಕು ತಲೆಗಳ ಮೈಕಿ ಒಂದು ಕೂಡ ಸರಿಯಿಲ್ಲವೆನ್ನಬೇಕಾಗಿದೆ. ಆದರೆ ಪಾಪ, ನಮಗೆ ಒಂದೊಂದು ತಲೆಯಿದ್ದೇ ನಿದ್ದೆಯನ್ನು ತಡೆಯಲಾಗುವುದಿಲ್ಲ; ಪ್ರಮಾತ್ಮ, ನಾಲ್ಕು ತಲೆಗಳ ನಿದ್ದೆಯನ್ನು ಹೇಗೆ ತಾನೇ ಸಹಿಸಿಕೊಳ್ಳ

ಬೇಕು? ಬರೀ ಓಮುಬರೆಹದಲ್ಲಿ ಮಾತ್ರ ಪರೀಕ್ಷೆಮಾಡುವುದೆಂದರೆ, ಇದ ರಲ್ಲಿ ಅರ್ಥವೇನಿದೆ? ಕಾಫಿ-ಚಾಗಳಲ್ಲಿ, ಬೀಡಿ-ಸಿಗರೇಟುಗಳಲ್ಲಿ ಕೂಡ ವಿದ್ಯಾರ್ಥಿಗಳ ಶಕ್ತಿಪರೀಕ್ಷೆ ಮಾಡುತ್ತಿದ್ದರೆ ಆತನ ತಲೆಗೆ "ಮೆಡಲ್" ಕೊಡಬಹುದಿತ್ತು. "ಸಿನಿಮಾ-ಸ್ಟಾರ್"ಗಳಲ್ಲಿ ಉತ್ತಮರಾರೆಂದು ನನ್ನೊ ಡನೆ ಕೇಳಲಿ; ಕ್ಲಾಸಿನ, ಅಥವಾ ಹೊರಗಿನ ಹುಡುಗಿಯರಲ್ಲಿ "The most beautiful" ಯಾರೆಂದು ನನಗೆ ಸವಾಲು ಹಾಕಲಿ; ನಾನು ಈ ಪ್ರಶ್ನೆಗಳಿಗೆಲ್ಲಾ ನೂರಕ್ಕೆ ನೂರು ಸರಿಯಾದ ಉತ್ತರ ಕೊಡಲಿಲ್ಲ ವೆಂತಾದರೆ ನನ್ನ ಹೆಸರು ತೆಗೆದು ಬೇರೆ ಹಾಕಲಿ. ಇದಕ್ಕೆಲ್ಲಾ ಓದ ಬೇಕೆ, ನಿದ್ದೆಕೆಡಬೇಕೆ, ಇಷ್ಟು ಕಷ್ಟಪಡಬೇಕೆ?

ಪರೀಕ್ಷೆಗಳಿಗೆಲ್ಲಾ "ಟೋಕರು" ಕೊಟ್ಟುಬಿಡೋಣವೆಂದು ನಾನು ಹೂಡಿದ ಉಪಾಯಗಳೆಲ್ಲ ವ್ಯರ್ಥ. "ಸ್ವಾಮಿ, ನನ್ನ ಅಜ್ಜಿಗೆ ಕಠಿಣ ಕಾಯಿಲೆ; ಆದುದರಿಂದ ಪರೀಕ್ಷೆಗೆ ಬರಲು ಸಾಧ್ಯವಿಲ್ಲ, ರಜೆಕೊಡ ಬೇಕು" ಎಂದು ರಜೆ-ಚೀಟು ಬರೆದು ಕಳುಹಿಸಿದ್ದಕ್ಕೆ ಹೆಡ್-ಮಾಸ್ಟರ್ ಮಹಾಶಯರು ಪೇದೆಯ ಕೈಯಲ್ಲಿ "ವಾರಂಟು" ಕೊಟ್ಟು ಮನೆಗೇ ಕಳುಹಿಸಿದರೇನೆಂದರೆ—"ನಿನ್ನ ಅರ್ಜಿಯು ಅರ್ಥವಾಯಿತು. ಅಜ್ಜಿಗೆ ಕಾಯಿಲೆಯಾದುದರಿಂದ ಅವಳಿಗೆ ಬರಲು ಸಾಧ್ಯವಿಲ್ಲದುದೇನೋ ಸರಿ, ಆದರೆ, ಅವಳು ಬರಬೇಕಾಗಿಲ್ಲ, ನೀನು ಮಾತ್ರ ಕೂಡಲೇ ಬರತಕ್ಕದ್ದು" ಮತ್ತೊಂದು ಸಲ ಅಜ್ಜಿಯು ಸತ್ತಳೆಂದೇ ಬರೆದಿದ್ದೆ. ಆ ಸಲ ರಜೆಯೂ ಸಿಕ್ಕಿತು, ಪರೀಕ್ಷೆಯೂ ತಪ್ಪಿತು. ಇದೇ ಉಪಾಯವೆಂದು ಬಗೆದು, ಎರಡನೇ ಸಲವೂ ಹಾಗೆಯೇ ಬರೆದೆ. ಪಾಪ, ನನ್ನ ಪರೀಕ್ಷೆಗಾಗಿ ಅಜ್ಜಿ ಎರಡು ಮೂರು ಸಲ ಸಾಯಬೇಕಾಯಿತು. ಆದರೆ, ಗ್ರಹಚಾರಕ್ಕೆ ಹೆಡ್-ಮಾಸ್ಟರರಿಗೆ ಸ್ವಲ್ಪ ಸಂಶಯ ಬಂದು, ಸ್ವತಃ ನಮ್ಮ ಮನೆಗೆ "ಸರ್ಪ್ರೈಸ್ ವಿಸಿಟ್" (Surprise visit) ಕೊಟ್ಟರು. ಅವರು ಬಂದಾಗ ಅಜ್ಜಿ ಮಜ್ಜಿಗೆ ಕಡೆಯುತ್ತಿದ್ದಳು!........ಒಟ್ಟಿನ ಮೇಲೆ, ಪರೀ ಕ್ಷೆಯ ಬಾಯಿಯಿಂದ ಬಿಡಿಸಿಕೊಳ್ಳುವುದೆಂದರೆ, ಕಪ್ಪೆ ಹಾವಿನ ಬಾಯಿ ಯಿಂದ ಬಿಡಿಸಿಕೊಂಡಂತೆಯೇ ಸರಿ!

ಶಾಲಾ ಪರೀಕ್ಷೆಗಿಂತಲೂ ಸರಕಾರೀ ಪರೀಕ್ಷೆ ಇನ್ನೂ ಕಠಿಣ; ಅದು

ಕತ್ತಿಯ ಬಾಯಿ, ಇದು ಖಡ್ಗದ ಬಾಯಿ; ಅದು ಕಡೆಯುವ ಕಲ್ಲು, ಇದು ಬೀಸುವ ಕಲ್ಲು. ಶಾಲಾ ಪರೀಕ್ಷೆಗೆ ಹನ್ನೊಂದು ಪುಸ್ತಕಗಳಿದ್ದರೆ, ಸರಕಾರೀ ಪರೀಕ್ಷೆಗೆ ನೂರೊಂದು. ಒಂದೆರಡು ಪುಸ್ತಕಗಳನ್ನಾದರೆ, ಅರೆದಾದರೂ ನುಂಗಿಬಿಡಬಹುದು; ಪುಸ್ತಕಗಳ ರಾಶಿರಾಶಿಗಳೇ ಇದ್ದರೆ ಅವೇ ವಿದ್ಯಾರ್ಥಿಯನ್ನು ನುಂಗಿಬಿಡುವುವು. ಲೋಕದಲ್ಲಿ ಎಲ್ಲರೂ ಪುಸ್ತಕಗಳನ್ನು ಬರೆಯತೊಡಗಿದರೆ, ಓದುವವರು ಹೇಗೆ ಸಿಗಬೇಕು? ಹಲವರು ಪುಸ್ತಕಗಳನ್ನು ಓದಿ ಓದಿ ರಾಶಿಹಾಕಿರುವರಂತೆ; ಆದರೆ, ನನಗೆ ಪುಸ್ತಕಗಳ ರಾಶಿರಾಶಿ ಓದಲಿಕ್ಕಿದೆ ಎಂದು ಅವರಿಗೇನು ಗೊತ್ತು? ನನ್ನ ಪರವಾಗಿ ಓದುವ ವಕಾಲತನ್ನು ಯಾರಾದರೂ ತೆಗೆದುಕೊಳ್ಳುತ್ತಿದ್ದರೆ, ನಾನು ಎಲ್ಲಾ ಪುಸ್ತಕಗಳನ್ನೂ ಮುಗಿಸಿಬಿಡುತ್ತಿದ್ದೆ. ಬರೆಯುವ ಮಹಾನುಭಾವರೇನೋ ಕಣ್ಣುಮುಚ್ಚಿ ಬರೆದುಬಿಡುತ್ತಾರೆ. ಆದರೆ, ಓದುವವರ ತಲೆಗಳ ಪರಿಚಯು ಅವರಿಗೆ ಒಂದಿಷ್ಟಾದರೂ ಇಲ್ಲ. ಅಂಥವರು ಬರೆದರೆ, ಎಷ್ಟು ಬರೆದಾರು, ಏನು ಬರೆದಾರು? ಲೇಖಕರು ಒಂದು ವೇಳೆ ಹುಚ್ಚರಾಗಿದ್ದರೆ, ಅವರ ಪುಸ್ತಕಗಳನ್ನೋದುವ ಜನರು ಹುಚ್ಚರಾಗದೆ ಇದ್ದಾರೆ? "ಕವಿಗಳೆಲ್ಲರೂ ಹುಚ್ಚರು" ಎಂದು ನನ್ನ ಉಪಾಧ್ಯಾಯರೊಮ್ಮೆ ಹೇಳಿದ್ದು ನೆನಪಿದೆ. ಅಂತಹ ಹುಚ್ಚರ ಪುಸ್ತಕಗಳನ್ನು ಓದಿದರೆ, ಪರೀಕ್ಷೆಯಲ್ಲಿ ಬರೆಯುವುದೆಲ್ಲಾ ಹುಚ್ಚು ಹುಚ್ಚು. ಓದಿ ಓದಿ ಕೋಚ ಭಟ್ಟನೊಬ್ಬ ಮರುಳಾಗಿದ್ದಾನಂತೆ; ನಾನೇಕೆ ಕೋಚಭಟ್ಟನಾಗಬೇಕು?

ಬರೇ ನೀರಸವಿಷಯ (Dry matter)ವನ್ನು ಓದಿದರೆ, ತಲೆ ಕೆಡದೆ ಇದ್ದೀತೆ? ಪರೀಕ್ಷೆಗೆ ಓದಲಿಕ್ಕಿರುವ ವಿಷಯ-ಭಾಗವು (Portion) ಹೆಚ್ಚಾಗಿ ನೀರಸವಾಗಿಯೇ ಇರುವುದು. ಯಾರಿಗೂ ಮೆಚ್ಚದ ವಿಷಯಗಳನ್ನೇ ಪರೀಕ್ಷೆಗೆ ಆರಿಸಿ ಇಡುವುದು ಪದ್ಧತಿ. "ಸತ್ತು ಮಣ್ಣು ತಿಂದು ಹೋದವರ" ವಿಷಯಗಳನ್ನೆಲ್ಲಾ ಓದಬೇಕಂತೆ; ಬರೇ ಅವರ ವಿಷಯವನ್ನಲ್ಲ—ಅವರ ಅಪ್ಪ, ಅಜ್ಜ, ಅಣ್ಣ ತಮ್ಮ, ಹೆಂಡತಿ-ಮಕ್ಕಳ ವಿಚಾರ ಕೂಡ! ಏನು ಹುಚ್ಚು!.......ಬಾಯಿಪಾಠ ಮಾಡೋಣವೆಂದರೆ, ಅದೂ ಅಸಾಧ್ಯ. ಈಗ ತಾನೇ ಬಿಸಿಬಿಸಿ ಮದುವೆಯಾದ, ಪ್ರಣಯವಿಲಾಸಾತುರನಾದ ನವಯುವಕನು, ತನ್ನ ನಲ್ಲೆಯ ಪ್ರಥಮದರ್ಶನ ಕಾಲದಲ್ಲಿ

ಅವಳೊಡನೆ—"ಇಂತಿಂತಹ ಪ್ರೇಮದ ಮಾತುಗಳನ್ನಾಡಬೇಕು, ಹೀಗೆ ಅವಳನ್ನು ನೋಡಬೇಕು, ಹಾಗೆ ಕರೆಯಬೇಕು, ಹೇಗೆ ನಗಿಸಬೇಕು" ಎಂದು, ಮೊದಲೇ ಹಲವು ಸಲ ಮನಸ್ಸಿನಲ್ಲಿ "ಕಸರತ್ತು-ಪ್ರೇಕ್ಟಿಸ್" ಮಾಡಿಕೊಂಡರೂ, ಕೊನೆಗೆ ಭೇಟಿಯಾಗುವ ಕಾಲದಲ್ಲಿ ಗಾಬರಿಯಿಂದ ಎಲ್ಲವನ್ನೂ ಮರೆತುಬಿಡುವಂತೆ, ಪರೀಕ್ಷೆಗಾಗಿ—"ಟೋಕಿಯೊ ಜಪಾನಿನಲ್ಲಿ, ಟೋಕಿಯೊ ಜಪಾನಿನಲ್ಲಿ" ಎಂದು ಹಲವು ಸಲ ಬಾಯಿಪಾಠ ಮಾಡಿದರೂ, ಕೊನೆಗೆ ಪರೀಕ್ಷೆಯ "ಹಾಲ"ನ್ನು (Hall) ನುಗ್ಗುವಾಗ—

"ಟೋಕಿಯೊ ಜಪಾನಿನ ಒಳಗೊ?
ಜಪಾನು ಟೋಕಿಯದೊಳಗೊ?
ಟೋಕಿಯೊ—ಜಪಾನುಗಳೆರಡು ಎಟ್ಲಾಸಿನೊಳಗೊ........॥

ಎಂದು ಸಂಶಯ ಬಂದು, ತಲೆತುರಿಸುತ್ತಾ ಕನಕದಾಸರ ಅನುಕರಣ ಮಾಡಬೇಕಾಗಿ ಬರುವುದು. ಇನ್ನು, ಹಾಳಾದ ಬೀಜಗಣಿತದ ಸೂತ್ರಗಳೆಷ್ಟು! ಒಂದಕ್ಕಿಂತ ಇನ್ನೊಂದು "ಊಚು ವ್ಹಾಲು!" $(a+b)^2=a^2+b^2+2ab$ — ಇಂಥಾ ಅನಿಷ್ಟದ ಸೂತ್ರಗಳನ್ನು ಬಾಯಿಪಾಠ ಕಲಿತು ಕಲಿತು ಮಾನಸಿಕಹತ್ಯೆ (Mental suicide) ಮಾಡಿಕೊಂಡು, ತಲೆ ಕರಡುಮಾಡಿಕೊಳ್ಳುವುದೆಂದರೆ ಹಿಂದಿನ ಜನ್ಮದ ಕರ್ಮದ ಫಲ!

ಆದರೆ, ತಲೆ ಕರಡಾಯಿತೆಂದರೆ ಪರೀಕ್ಷೆಯಲ್ಲಿ ಏನು ಬೇಕಾದರೂ ಬರೆಯಲು ಬರುವುದು. ಪರೀಕ್ಷೆಯಲ್ಲಿ ಏನು ಬರೆದರೂ "ದಕ್ಕಿಯೇ ದಕ್ಕುವುದು." ಏಕೆಂದರೆ, ನಾವು ಬರೆದ ಎಲ್ಲಾ ಉತ್ತರಗಳಿಗೂ ನಾವೇ ಉತ್ತರಾಧಿಕಾರಿಗಳು. ಆದರೆ, ನಮ್ಮ ಉತ್ತರಗಳ "ಉತ್ತರಕ್ರಿಯೆ"ಗಳನ್ನು ಮಾಡುವ "ವಾರಿಸುದಾರರು" (Examiners) ಬೇರೆಯವರಾದುದರಿಂದ, ಅವರನ್ನೇ ಉತ್ತರಾಧಿಕಾರಿಗಳೆನ್ನಬೇಕಾಗುತ್ತದೆ. ಉತ್ತರಗಳ ಉತ್ತರಾಧಿಕಾರಿಗಳು ಅವರೇ ಆಗಿದ್ದರೂ, ಉತ್ತರ ಕೊಡುವ ಸಂಪೂರ್ಣ ಅಧಿಕಾರವು ಪರೀಕ್ಷಾರ್ಥಿಗೆ ಇದೆ. "ಶಿವಾಜಿಯ ವಿಷಯ ನಿಮಗೆ ಗೊತ್ತಿದ್ದುದನ್ನು ಬರೆಯಿರಿ." ಎಂಬ ಪ್ರಶ್ನೆಗೆ ಸುಲಭದಲ್ಲಿ ಕೊಡಬಹುದಾದ ಉತ್ತರದ "ಸೇಂಪ್ಲ್"—"ಶಿವಾಜಿಯು ಒಂದು ಜನ. ಈ ವಿಷಯದಲ್ಲಿ ನನಗೆ ಗೊತ್ತಿರುವುದಿಷ್ಟೆ. ಶಿವಾಜಿಯು ಮಗನಾದರೆ, ನನ್ನ "ದೊಡ್ಡ ದೋಸ್ತಿ." ಅವನ

ವಿಷಯದಲ್ಲಿ ಬೇಕಾದರೆ ತುಂಬಾ ಬರೆಯಬಹುದು......." ಈ ಉತ್ತರಕ್ಕೆ ನ್ಯಾಯವಾಗಿ ಪರೀಕ್ಷಕರ್ತರು ಪೂರ್ಣಾಂಕ (Full mark)ಗಳನ್ನು ಕೊಡಬೇಕಿತ್ತು. ಆದರೆ, "ಮಾರ್ಕು" ಕೊಡುವುದೆಂದರೆ ಪರೀಕ್ಷಕರ್ತರಿಗೆ ಬಹಳ ಆಸೆ. ಅವರ ಗಂಟು ಏನು ಖರ್ಚಾಗುವುದೋ ತಿಳಿಯದು. ನಾನಾಗಿದ್ದರೆ, ಪರೀಕ್ಷಾರ್ಥಿಗೆ ತಿಂದು, ತೇಗಿ, ಅಜೀರ್ಣವಾಗುವಷ್ಟು "ಮಾರ್ಕು"ಗಳನ್ನು ಕಣ್ಣುಮುಚ್ಚಿ ಕೊಟ್ಟುಬಿಡುತ್ತಿದ್ದೆ.

"ಉತ್ತರಾಧಿಕಾರಿ"ಗಳಲ್ಲಿ ಕೆಲವರಿಗೆ ಉತ್ತರವು ಅನೇಕ ಪುಟಗಳಿಗೆ ವ್ಯಾಪಿಸಿದ್ದರೆ ತುಂಬಾ ಸಂತೋಷ; ಕೆಲವರಿಗೆ, ತಿದ್ದುವುದಕ್ಕೆ ಎಷ್ಟು ಕಡಮೆ ಸಿಗುವುದೋ ಅಷ್ಟೂ ಆನಂದ; ಪರೀಕ್ಷಾರ್ಥಿಯು "ಖಾಲೀ" ಉತ್ತರ ಪುಸ್ತಕವನ್ನು ಕೊಟ್ಟರೆ ಆಗ ಅವರಿಗೆ ಬ್ರಹ್ಮಾನಂದ—ಅವರ ಲೆಕ್ಕಕ್ಕೆ ಸರಿಯಾಗಿ, "ಕಿಸೆ-ಭರ್ತಿ"ಯಾದರೆ ಮುಗಿಯಿತು. ಕೆಲವರಿಗೆ "...." ಇಂತಹ ಆವರಣ ಚಿಹ್ನೆಗಳು ತುಂಬಾ ಕಾಣಸಿಗಬೇಕು; ಇವುಗಳ ನಡುನಡುವೆ, ''Goeth, cometh, thou......'' ಮೊದಲಾದುವು ಗಳನ್ನು ಸೇರಿಸಿಬಿಟ್ಟರಂತೂ,-"ಚಿಂತಿಲ್ಲ ಕೊಡಬಹುದು, ಶೇಕ್ಸ್‌ಪಿಯರ್ ಕೋಟು ಮಾಡಿದ್ದಾನೆ" ಎಂದು ಕೈಗೆ ಬಂದ "ಮಾರ್ಕು"ಗಳನ್ನು ಕೊಟ್ಟು ಬಿಡುವರು. "ಇತ್ಯಾದಿ" (Etc.) ಎಂಬ ಶಬ್ದವಂತೂ ಪರೀಕ್ಷಾರ್ಥಿಗಳ ಮಾತ್ರವಲ್ಲ, ಎಲ್ಲಾ ಲೇಖಕರ ಊರುಗೋಲು, ವಿಶೇಷಜ್ಞಾನದ "ಟ್ರೇಡ್ ಮಾರ್ಕು!" (Trade mark)

ಪರೀಕ್ಷಾರ್ಥಿಯು ಬರೆದ ಒಂದೇ ಉತ್ತರಕ್ಕೆ ಬೇರೆ ಬೇರೆ ಪರೀಕ್ಷಕರು ಕೊಡುವ ಮಾರ್ಕುಗಳ ಅಜಗಜಾಂತರವನ್ನು ನೋಡಿದರೆ, ಈ ಪರೀಕ್ಷೆಗಳ ಬೆಲೆಯನ್ನು ಕಟ್ಟಬಹುದಾಗಿದೆ. "ವಿವಾಹ ವಿಚ್ಛೇದ ಪದ್ಧತಿ" ಯನ್ನು ನಿಷೇಧಿಸಿ ಬರೆದ ಪ್ರಬಂಧಕ್ಕೆ ಒಬ್ಬ ಪರೀಕ್ಷಕ ಮಹಾಶಯರು ಕೊಟ್ಟ ಮಾರ್ಕು—ದೊಡ್ಡದೊಂದು ಕೋಳಿಮೊಟ್ಟೆ! ಕಾರಣ—ಆ ಮಹಾ ಶಯರು ಮೂರು ಮದುವೆಯಾಗಿ ಕೈತೊಳೆದು, ನಾಲ್ಕನೇ ಹೆಣ್ಣಿನ ಮೇಲೆ ಹಾಗೆ ಕಣ್ಣುಹಾಕತೊಡಗಿದ್ದರು. ಇದೇ ಉತ್ತರಕ್ಕೆ ಮತ್ತೊಬ್ಬ ಪರೀಕ್ಷಕರು ಕೊಟ್ಟ ಮಾರ್ಕು ನೂರಕ್ಕೆ ಸ್ವಲ್ಪ ಕಡಮೆ!........ಇದಕ್ಕೆಲ್ಲಾ ಕಾರಣ ಇಷ್ಟೆ—ಪರೀಕ್ಷಕರಲ್ಲಿ ಒಬ್ಬೊಬ್ಬರು ಒಂದೊಂದು ಸ್ವಭಾವ

ದವರು: ಈಗ ತಾನೇ "ಕಿಸೆ ಖಾಲೀ" ಮಾಡಿಕೊಂಡು, ಬಾಡಿದ ಮುಖ ದಿಂದ "ಕ್ಲಬ್ಬಿ"ನಿಂದ ಹೊರಬಿದ್ದು, "ಸೀವಾ" ಬಂದು "ಪೇಪರು"ಗಳನ್ನು ತಿದ್ದಲು ಕುಳಿತವರೊಬ್ಬರು; ಸಾರಿಗೆ ಬಾಯಿ ಉರಿಯುವಷ್ಟು ಉಪ್ಪು ಸೇರಿಸಿದುದಕ್ಕಾಗಿ ಹೆಂಡತಿಯೊಡನೆ ಜಗಳ ಮಾಡಿ, ತಲೆ ಬಿಸಿಯಾಗು ವುದಕ್ಕೆ ಮೊದಲೇ "ಪೇಪರು"ಗಳನ್ನು ಮುಗಿಸಿಬಿಡುವ (finish off) ಭೀಷ್ಮಪ್ರತಿಜ್ಞೆಯನ್ನು ತೊಟ್ಟು ಕುಳಿತವರೊಬ್ಬರು; "ಎಡದ ಬದಿಯಲಿ ಕೌರವೇಂದ್ರನ ಗಡಣ, ಬಲದಲಿ ಪಾಂಡುತನಯರ ಗಡಣ, ನಡುವೆ...." ಎಂಬಂತೆ ಎಡಬಲ ಪಕ್ಕಗಳಲ್ಲಿ "ಪಿರಿಪಿರಿ, ಕಿರಿಕಿರಿ, ಕೋಲಾಹಲ"ಗಳ ನ್ನೆಬ್ಬಿಸುತ್ತಾ ಆಗಾಗ "ಫಿರ್ಯಾದು" ತರುತ್ತಿರುವ, ಒಂದು-ಒಂದೂವರೆ "ಡಜನ್" ಮಕ್ಕಳ ಮಧ್ಯದಲ್ಲಿ, ಆಟದ ಹೊಲದ ಕಾಲ್ಚೆಂಡಿನಂತಿರುವ (like a football in the playground) "ಸ್ಥಿರಮನಸ್ಸಿ"ನಿಂದ ಮೇಜಿನ ಮೇಲೆ ಉತ್ತರ ಪುಸ್ತಕಗಳ ಕಟ್ಟುಗಳನ್ನು ಬಿಚ್ಚಿ ಹರವಿ, ಕೆದರಿದ ತಲೆ, ಕೆರಳಿದ ಕಣ್ಣುಳ್ಳ ನರಸಿಂಹಾವತಾರಿಯೊಬ್ಬರು; ಎರಡು-ಮೂರು ರಾತ್ರೆಗಳಿಂದಲೂ ಸಿನಿಮಾ-ನಾಟಕಗಳನ್ನು ನೋಡಿ ನಿದ್ರೆಗೆಟ್ಟ ಕಾರಣ, "ಬರೆದುದೆಲ್ಲಾ ಸರಿ" ಎಂದು ತಲೆದೂಗುತ್ತಾ "ಪೇಪರು"ಗಳಿಗೆ "ಮಾರ್ಕು" ಗಳ ಬರೆಯೆಳೆಯುವ ಮಹಾಪುರುಷರೊಬ್ಬರು; ಕ್ಷತ್ರಿಯ ಕುಲವನ್ನೇ ನಾಶಮಾಡಲು ಹೊರಟ ಪರಶುರಾಮನಂತೆ ಒಂದು ಕೈಯಲ್ಲಿ "ಪರಶು" (ಕೆಂಪುಬಣ್ಣದ ಪೆನ್ಸಿಲು)ವನ್ನು ಹಿಡಿದು, ಬರೆದ ಉತ್ತರಗಳನ್ನೆಲ್ಲಾ ತುಂಡ ರಿಸಿ, "ಪೇಪರ"ನ್ನು ರಣಭೂಮಿಯಂತೆ ಮಾಡುತ್ತಾ, ಇನ್ನೊಂದು ಕೈಯಲ್ಲಿ, ಕೊಳ್ಳಿದೆವ್ವದಂತೆ, ಉರಿಯುತ್ತಿರುವ "ಸಿಗರೇಟ"ನ್ನು ಧರಿಸಿ, ಪರೀಕ್ಷಾರ್ಥಿ ಗಳನ್ನೆಲ್ಲಾ ಸುಟ್ಟುಬಿಡುವರೋ ಎಂಬಂತೆ ತೋರುವ ಮಹಾನುಭಾವ ರೊಬ್ಬರು........ಇಂಥವರಿಗೆಲ್ಲಾ ಪರೀಕ್ಷಾರ್ಥಿಗಳ ಅವಸ್ಥೆಗಳು ಹೇಗೆ ತಿಳಿಯಬೇಕು? ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ, ಮಂಡೆ ಖರ್ಚು ಮಾಡಿ, ಕೈಕಾಲುಹೊಡೆದುಕೊಂಡು, ಹತ್ತು "ಪೇಜು"ಗಳನ್ನು ತುಂಬಿಸ ಬೇಕಾದರೆ, ಪ್ರಾಣಕ್ಕೇ ಬರುತ್ತದೆ—ಇಷ್ಟೆಲ್ಲಾ ಬರೆದುದಕ್ಕೆ ಆ ಮಹಾ ಪುರುಷರು ಕೊಡುವುದು, ಹತ್ತರಲ್ಲಿ ಒಂದೂವರೆ, ಅಥವಾ ಒಂದೂ ಮುಕ್ಕಾಲು "ಮಾರ್ಕು!"; ತಪ್ಪಿದರೆ, "ರಿಮಾರ್ಕು!" ಅಥವಾ "ಕೊಶ್ಚನ್

ಮಾರ್ಕು" (question mark), ಇಲ್ಲವೆ "ಕ್ರೋಸ್-ಮಾರ್ಕು!" (cross-mark)........ಈ "ಮಾರ್ಕು"ಗಳೆಲ್ಲಾ ಜಮೆಯಾಗಿ, ವಿದ್ಯಾರ್ಥಿಗಳ ಭವಿಷ್ಯದ "ಬ್ಲೇಕ್ ಮಾರ್ಕು" (black-mark)ಗಳಾಗುವುವು!

ಹಲವು ಸಲ ಪರೀಕ್ಷೆಗಳಿಗೆ ಕುಳಿತುಕೊಂಡ "ಸರ್ವಿಸಿ"ನ ಬಲದಿಂದ ನಾನು ಧೈರ್ಯವಾಗಿ ಇಷ್ಟು ಹೇಳಬಲ್ಲೆ—"ಪರೀಕ್ಷೆ ಎಂದರೆ, ಬರೇ ವಿದ್ಯಾರ್ಥಿಗಳ ಮಾತ್ರವಲ್ಲ, ಪರೀಕ್ಷಕರ ಪ್ರವೃತ್ತಿಯನ್ನು ಕೂಡ ಅಳೆಯುವ ಮಾನದಂಡವಾಗಿದೆ." (Examinations measure students and examiners alike.) ನಮ್ಮ ದೇಶದ ವಿದ್ಯಾಖಾತೆಯ ಪರೀಕ್ಷೆಗಳೆಂದರೆ, ಮಲೇರಿಯಾ, ಶ್ವಾಸಖಾಸ ಮೊದಲಾದ ಮಹಾರೋಗಗಳಂತೆ ವಿದ್ಯಾರ್ಥಿಯ ರಕ್ತವನ್ನು ಹೀರಿ, ಜೀವವನ್ನೇ ಹಿಂಡಿಬಿಡುವುವು. ವರ್ಷಗಟ್ಟಳೆ ಮಂಡೆಯನ್ನು ಓದಿನ ಬಂಡೆಯಲ್ಲಿ ಅರೆದರೆದು, ಕೊನೆಗೆ ಭಾಗ್ಯವನ್ನು ಪರೀಕ್ಷೆಯ "ಸೋಡ್ತಿ"ಯಲ್ಲಿ ಹಾಕಿದಾಗ, "ಚೀಟು ಮೇಲೆ ಬಿದ್ದರೆ" ಅವನಿಗೆ ಸ್ವರ್ಗ; ಅಡಿಗೆ ಬಿದ್ದರೆ, ನರಕ!

ಅಡಿಗೆ ಬಿದ್ದರೂ, ಮೂಗು ಮೇಲಿರಬೇಡವೆ? ಪರೀಕ್ಷೆಯು ಯುದ್ಧಕ್ಷೇತ್ರದಲ್ಲಿ "ಅಡಿಯ ಮುಂದಿಡೆ ಸ್ವರ್ಗ, ಅಡಿಯ ಹಿಂದಿಡೆ ನರಕ" ಎಂಬುದನ್ನು ಬಲ್ಲ ನನ್ನಂತಹ ವೀರಸೇನಾನಿಯು ಸೋತು ಹಿಮ್ಮೆಟ್ಟುವುದೆಂದರೇನು? ಹೇಡಿಗಳಿಗೆ ಒಂದು ಸಲ ಪರೀಕ್ಷೆಯಲ್ಲಿ "ಗಳ್ಪಾಸಾ"ಯಿತೆಂದರೆ, ಅರ್ಧಪ್ರಾಣವೇ ಹೋಗಿಬಿಡುವುದು, ಕೈಕಾಲೇ ಬಿದ್ದುಹೋಗುವುದು; ಬರೇ ಅರ್ಧ-ಪ್ರಾಣವನ್ನಲ್ಲ, ಇಡೀ ಪ್ರಾಣವನ್ನು ಕಳಕೊಂಡವರು ಎಷ್ಟೋ ಮಂದಿ ಇರಬಹುದು. ಪರೀಕ್ಷೆಗಳಿಗಾಗಿ ಹಣವನ್ನಂತೂ ಎಲ್ಲರೂ ಕಳಕೊಳ್ಳುತ್ತಾರೆ; ಕಣ್ಣು ಕಳಕೊಳ್ಳುವವರು ಹಲವು ಮಂದಿ; ಮೆದುಳು ಕೆಟ್ಟು, ಹುಚ್ಚರಾಗುವವರು ನೂರಾರು ಮಂದಿ; ಜೀವನವನ್ನೇ ಕೆಡಿಸಿಕೊಳ್ಳುವವರು ಸಾವಿರಾರು ಮಂದಿ. ಆದರೆ, ಪರೀಕ್ಷೆಯಲ್ಲಿ "ಲಾಗ ಹೊಡೆ"ದ ಮಾತ್ರಕ್ಕೆ ಇಷ್ಟೊಂದು "ಬೇಜಾರ"ವೇಕೋ ತಿಳಿಯದು. ನನಗಂತೂ, ಪರೀಕ್ಷೆಯಲ್ಲಿ "ಲಾಟೀ ಹೊಡೆ"ಯುವುದೆಂದರೆ ಬಹಳ "ಮಜಾ". ಅದೇಕೆಂದರೆ, ಓದಿ ಓದಿ "ಫೈಲ್" ಆಗುವುದಕ್ಕಿಂತಲೂ, ಓದದೇ "ಫೈಲ್" ಆಗುವುದು ಎಷ್ಟೋ ಮೇಲೆಂಬುದನ್ನು

ಎಲ್ಲರೂ ಒಪ್ಪಲೇ ಬೇಕು. ಓದದೆ ಎಷ್ಟು ಸಲ "ಫೈಲ್" ಆದರೂ ಚಿಂತೆಯಿಲ್ಲ; ಓದಿಯೂ "ಫೈಲ್" ಆದರೆ, ಯಾವನೋ ಒಬ್ಬ ಕವಿಯು ಎಲ್ಲೋ ಒಂದು ಕಡೆ ಏನೋ ಹೇಳಿದಂತೆ ಆಗುವುದರಲ್ಲಿ ಸಂಶಯವಿಲ್ಲ—

"ಓದದೆ ಪಾಸಾಗುವನು ರೂಢಿಯೊಳಗುತ್ತಮನು ।
ಓದಿ ಪಾಸಾಗುವವ ಮಧ್ಯಮನು, ಅಧಮನು ತಾ- ।
ನೋದಿಯೂ ಪಾಸಾಗದವನು ಸರ್ವಜ್ಞ! ॥"

ಆದುದರಿಂದ ಈ ಸಲವೂ ಪರೀಕ್ಷೆಗೆ ಓದುವುದಿಲ್ಲವೆಂದೇ ನಿರ್ಧರಿಸಿರುವೆನು. "Failures are the stepping stones to success"—ಆದಕಾರಣ "ಪಾಸಾಗಿ" ಬಿಟ್ಟರೆ, ಕೆಲಸ ಕೆಟ್ಟೇ ಹೋಯಿತು. ಏಕೆಂದರೆ, "ಪಾಸಾ"ದೊಡನೆಯೇ ಸಫಲತೆಯು (Success) ಅಲ್ಲಿಯೇ ನಿಂತು ಹೋಗುವುದು—ಇದು ಪ್ರಗತಿಯ ಲಕ್ಷಣವಲ್ಲ. "ಮಾರ್ಚ್, ಸಪ್ಟಂಬರ"ಗಳೂ ಇವೆ, ನಾನೂ ಇದ್ದೇನೆ—ಮತ್ತೇನು? "March after March passes on; but still I remain unpassed"... ಹೇಗಿದ್ದರೂ, ದೇವರ ಭಾಗ್ಯದಿಂದ, ಹೆತ್ತವರ ಪುಣ್ಯದಿಂದ, ನನ್ನ ದುರದೃಷ್ಟದಿಂದ, ಪರೀಕ್ಷಾಕರ್ತರ ಅಜಾಗರೂಕತೆಯಿಂದ—ಕೈತಪ್ಪಿ ನನ್ನ "ನಂಬರು" "ಪೇಪರಿ"ನಲ್ಲಿ ಒಂದು ವೇಳೆ ಬಿದ್ದು ಹೋದರೆ, ಪತ್ರಿಕಾಕರ್ತರಿಗೆ (ಪರೀಕ್ಷಾಕರ್ತರಿಗಲ್ಲ!) ಒಂದು "ಥೇಂಕ್ಸ್" ಕೊಡದೆ ನಿರ್ವಾಹವಿಲ್ಲ.

೨. ಹೊಸಭಾವ

ಭಾವ ಹುಟ್ಟಿದ್ದು ಇಂದು ನಿನ್ನೆಯಲ್ಲ—ಮನುಷ್ಯನು ಹುಟ್ಟಿದಾಗಲೇ ಭಾವವೂ ಹುಟ್ಟಿದೆ. ಮನುಷ್ಯನು ಹೊಸಬನಲ್ಲ; ಅಂತೆಯೇ ಭಾವವೂ ಹೊಸತಲ್ಲ, ಹಳೆಯದೇ. ಆದರೆ, ಇಂದು ಕನ್ನಡ ಕಾವ್ಯಕ್ಷೇತ್ರದಲ್ಲಿ ಹುಟ್ಟಿದ್ದು "ಭಾವದೊಳ್ ಭಾವ" ಎಂದರೆ, "ಹೊಸಭಾವ". ಇದನ್ನು "ಭಾವಾತಿರೇಕ"ವೆನ್ನಲೂ ಬರುವುದು. ಆದುದರಿಂದ ಭಾವದಲ್ಲಿ ಎರಡು ವಿಧ—ಹಳೆಭಾವ ಮತ್ತು ಹೊಸಭಾವ. ನಮಗೀಗ ಬೇಕಾದುದು ಹೊಸಭಾವ. "ಹೊಸಭಾವ" ಎಂದರೆ ಎಲ್ಲರಿಗೂ ಪ್ರೀತಿ; ಹೊಸಭಾವ ಬಂದೊಡನೆಯೇ ಹಳೆಭಾವ ಸ್ವಲ್ಪ ದೂರ—ಇದು ಲೋಕದ ಸ್ವಭಾವ.

ಕನ್ನಡ ಕವಿತಾವನಿತೆಯು ನಮ್ಮೊಡನಾಡಿ ಬಳೆದವಳಾದುದರಿಂದ ನಮ್ಮಕ್ಕನೆಂದು ಬೇರೆ ಹೇಳಬೇಕಾಗಿಲ್ಲ. "ಹಳೆಭಾವ"ನಿಗೆ ಮಣ್ಣು ಹಿಡಿದ ಕಾರಣ ಅಕ್ಕನಿಗೆ "ಹೊಸಭಾವ"ವನ್ನೊದಗಿಸಿಕೊಡಬೇಕಾದುದು ಸಹೋದರರ ಕರ್ತವ್ಯ. ಎಷ್ಟೆಂದರೂ, ಭಾವವಿಲ್ಲದ ಕವಿತೆಯು ಪತಿಯಿಲ್ಲದ ವನಿತೆಯೇ ಸರಿ. ಈಗಿನ ಕಾಲದಲ್ಲಿ ವಿವಾಹವಿಚ್ಛೇದ, ವಿಧವಾವಿವಾಹ ಇತ್ಯಾದಿಗಳು ಹೊಸ ವಿಷಯಗಳಲ್ಲವಾದುದರಿಂದ, ಕನ್ನಡಕವಿತಾರಮಣಿಗೆ "ಹೊಸಭಾವ"ದ ಕೈಹಿಡಿಸಿ ಉದ್ಧರಿಸಲು ಸೊಂಟಗಟ್ಟಿದ ಸಾಹಿತ್ಯೋದ್ಧಾರಕರನ್ನು—ಕಾವ್ಯಾಂಗನೆಯ "ಗಂಡಾಂತರ" ಕಾರಣರಾದ ಮಹನೀಯರನ್ನು—ಎಷ್ಟು ಹೊಗಳಿದರೂ, "ರವಿಗೆ ಸೊಡರಂ ತೋರ್ಪಂತಕ್ಕುಂ".

ಭಾವಕ್ಕೆ ಆದಿ ಅಂತ್ಯಗಳಿಲ್ಲವಂತೆ; ಅದು ಶ್ರವಣಗ್ರಹಣೇಕ್ಷಣಗಳಿಗೊಳಗಾಗದ ಮನಸ್ಸಿನ ಒಂದು ಸ್ಥಿತಿಯಂತೆ. ಆಧುನಿಕಕಾವ್ಯದೃಷ್ಟಿಯಿಂದ ಭಾವವೆಂಬುದು ಮನನಕ್ಕೆ ಕೂಡ ಅಸಾಧ್ಯವಾದ "ಏನೋ ಒಂದು"—ಎಂದು ಭಾವವಾಗುತ್ತದೆ; ಎಂದರೆ, "ಭಾವಿಸಲು ಅಸಾಧ್ಯವಾದುದೇ ಭಾವ." ಆದುದರಿಂದ ಇದಕ್ಕೆ "ಅಭಾವ" ಎಂಬ ಹೆಸರೂ

ಸಲ್ಲುವುದು. "ಅಭಾವ" ಎಂದರೆ "ಭಾವಾತೀತ"ವೆಂದೂ, "ಭಾವಶೂನ್ಯ" ವೆಂದೂ ಭಾವಿಸಿಕೊಳ್ಳಬಹುದು. ಈಗಿನ ಹಲವು ಕವಿತೆಗಳು ಈ "ಅಭಾವ"ವನ್ನು ಚೆನ್ನಾಗಿ ಸ್ಪಷ್ಟೀಕರಿಸುತ್ತವೆ. ಯಾಕೆಂದರೆ, ಅವುಗಳಲ್ಲಿ ಹಲವರು ಹೇಳುವಂತೆ—"ಏನು ಭಾವಯ್ಯ! ಏನು ಭಾವನೆ!" ಎಂಬಿತ್ಯಾದಿ ಭಾವೋದ್ಗಾರಗಳಿಗೆಡೆಯಿರುವುದರಿಂದ ಅವುಗಳನ್ನು ಯಾರಿಂದಲೂ ಭಾವಿಸಲು ಅಸಾಧ್ಯವೇ ಸರಿ; ಕೆಲವರು ತಿಳಿದುಕೊಳ್ಳುವಂತೆ ಅವುಗಳಲ್ಲಿ "ಭಾವಶೂನ್ಯ"ವಿರುವುದಾದರೆ, ಅವುಗಳನ್ನು "ಭಾವಾತೀತ" ವೆನ್ನಲು ಅಡ್ಡಿಯಿಲ್ಲ.

ಕವಿತೆಯಲ್ಲಿ ಭಾವವು ಮಳೆಗಾಲದ ಬುಗ್ಗೆಯಂತೆ ಉಕ್ಕಿಬರಬೇಕಂತೆ, ಜ್ವಾಲಾಮುಖಿಯಂತೆ ಹೊರ ಹೊಮ್ಮಬೇಕಂತೆ. ಭಾವಾತಿರೇಕವಾಗದೆ ಇದು ಸಾಧ್ಯವಿಲ್ಲ, ಭಾವಾತಿರೇಕವಾಗಬೇಕಾದರೆ, ಮನಸ್ಸಿನಲ್ಲಿ "ಒಂದು ನಮೂನೆ"ಯಾಗಬೇಕು—ತಲೆಬಿಸಿಯೇರಿ, ಶರೀರದಲ್ಲಿ ಆವೇಶ ಬರಬೇಕು. ದೆವ್ವ ಹಿಡಿದಾಗಲೇ ಕಡಿದುಕೊಂಡರೆ ಲಾಭ; ಆವೇಶ ಬಂದಾಗಲೇ ಕವಿತೆಯನ್ನು ಕಾರಿದರೆ ಅದಕ್ಕೆ ಪೂರ್ಣಫಲ.

ಹಾಲು ಚೆನ್ನಾಗಿ ಬಿಸಿಯೇರಿದೊಡನೆಯೇ ಉಕ್ಕಿಬರುವುದು. ಅಂತೆಯೇ ತಲೆಯು ಬಿಸಿಯಾದ ಕೂಡಲೇ ಭಾವವು ಕುದಿದು ಉಕ್ಕಿ ಬಂದು ಕಿವಿ, ಮೂಗು, ಬಾಯಿ ಮೊದಲಾದ ರಂಧ್ರಗಳ ಮೂಲಕ ಹೊರಗೆ ಚಿಮ್ಮಿ, ಕವಿತಾ ಕಾಲುವೆಗಳಾಗಿ ಹರಿಯತೊಡಗುವುದು. ಹೀಗೆ ಹೊರಸೂಸಿದ ಬಿಸಿಬಿಸಿಯಾದ ಭಾವರಸವನ್ನು, ಕವಿತೆಯ ಅಚ್ಚುಗಳಲ್ಲಿ ಹೊಯ್ದುಬಿಟ್ಟರೆ ತೀರಿತು. ಈ ಅಚ್ಚುಗಳನ್ನು ಬೇಕಾದ ಆಕಾರದಲ್ಲಿ ಮೊದಲೇ ಸಿದ್ಧಪಡಿಸಿಡಬಹುದು; ಇವುಗಳಲ್ಲಿ ಕೆಲವು ಏಣಿಮೆಟ್ಟಲುಗಳಂತಿವೆ, ಕೆಲವು ಚಕ್ರಬಂಧ ಒಗಟುಗಳಂತೆ, ಕೆಲವು ರಾಟೆತೊಟ್ಟಿಲುಗಳಂತೆ, ಇನ್ನು ಕೆಲವು ಸಾಲುತಪ್ಪಿದ ಹಲ್ಲುಗಳಂತೆ. ಹೀಗೆ ಅಚ್ಚುಗಳಲ್ಲಿ ಹೊಯ್ಯಲ್ಪಟ್ಟ ಭಾವರಸವು ಒಣಗಿ ಗಟ್ಟಿಯಾಗುತ್ತಲೇ ಕಶ್ಮಲಗಳೆಲ್ಲಾ ಒಳಗೇ ಅಡಗಿಕೊಂಡು "ಶುಗರ್‌-ಕೋಟೆಡ್" ಕವಿತೆಯಾಗಿ ಶೋಭಿಸುವುದು. ಈ ರೀತಿಯಲ್ಲಿ ಹಲವು ಕಾಲದಿಂದ "ಗರ್ಭ"ದಲ್ಲೇ ಧರಿಸಿಕೊಂಡಿದ್ದ ಭಾವವು ಆವೇಶ ಬಂದಾಗ ಕವಿತಾರೂಪದಲ್ಲಿ ಹೊರಗೆ

ವಿಸರ್ಜಿಸಲ್ಪಟ್ಟರೆ, ಆ ಕವಿತೆಯು "ಭಾವಗರ್ಭಿತ"ವೆಂದೆನ್ನಿಸಿಕೊಳ್ಳು ವ್ವದು. ಆವೇಶವು ಕಡಮೆಯಾಗಿಬಿಟ್ಟರೆ, ಮಧ್ಯದಲ್ಲೇ "ಗರ್ಭಸ್ರಾವ" ವಾಗಿ ಭಾವಕ್ಕೆ ಸ್ವಲ್ಪ ಕುಂದುಬರುವುದೂ ಇದೆ.

ಹೀಗೆ ಅಚ್ಚುಗೊಂಡ ಕವಿತೆಗಳ ಮುಖ್ಯ ಸ್ವಭಾವವೇನೆಂದರೆ, ಅವುಗಳಲ್ಲಿರುವ ಭಾವವನ್ನು ಹಿಂಡಿದಾಗ ರಸವೊಸರಬೇಕು; ಭಾವವು ರಬ್ಬರಿನಂತೆ ಎಳೆದಷ್ಟು ಉದ್ದ ಬರಬೇಕು; ಅದು ಕವಿತೆಯ ಅಂತ ರಾಳದಲ್ಲಿ ಅವಿತುಕೊಂಡಿದ್ದರೂ, ಗ್ರಹಣಾತೀತವಾಗಿದ್ದು, ಹೊಗಳಿ ಕೆಗೆ ಮಾತ್ರ ಒಳಗಾಗಿರಬೇಕು. ಇವುಗಳ "ಪಾಕ"ವನ್ನು ಹಲುವದ ಪಾಕಕ್ಕೆ ಹೋಲಿಸಬಹುದು; ಪಾಕವು ಸ್ವಲ್ಪ ಹೆಚ್ಚುಕಡಮೆಯಾದರೆ, ಹಲುವದ ರುಚಿ ಕೆಟ್ಟುಹೋಗುವುದು. "ಎಳೆ ಪಾಕ"ವಾದರೆ, ಮೇಣ ದಂತಾಗಿ ಹಲ್ಲುಗಳಿಗೆ ಅಂಟಿಕೊಳ್ಳುವುದು—ಇಟ್ಟ ಹಲ್ಲುಗಳಾಗಿದ್ದರೆ ಹಲುವದೊಂದಿಗೇ ಕಿತ್ತು ಬಂದುಬಿಡುವುವು; "ಬಲು ಪಾಕ"ವಾದರೆ ಕಹಿ ಯಾಗುವುದು; ತಿನ್ನಲು ಮೃದುವಾಗಿರಬೇಕಾದರೆ, "ಹದಪಾಕ"ವಾಗ ಬೇಕು. ಆಗ ನೋಡಬೇಕು ಅದರ "ಮಜ!"

ಈಗಿನ ಕೆಲವು ಕವಿತೆಗಳ ಭಾವವು ದೊಡ್ಡದೊಡ್ಡ ಪಂಡಿತರ ಮಂಡೆಗಳಿಗೂ ಕೂಡ ಹತ್ತುವುದಿಲ್ಲವಂತೆ. ಕಾರಣವೇನೆಂದರೆ, ಕೆಲವು ಭಾವಗಳು ಕಬ್ಬಿಣದ ಕಡಲೆಗಳಾಗಿದ್ದು, ಬಹಳ ಗಟ್ಟಿಯಾಗಿರುವುವು. ಉಕ್ಕಿನ ಹಲ್ಲಿಲ್ಲದವರು ಅದನ್ನು ಜಗಿಯುವುದಾದರೂ ಹೇಗೆ? ಇನ್ನು ಕೆಲವು ಭಾವಗಳು ಪಾದರಸದಂತೆ ಚಂಚಲವಾಗಿದ್ದು, "ಬ್ರೇಕಿ"ಲ್ಲದ "ಬೈಸಿಕಲಿ"ನಂತೆ ಸಿಕ್ಕಸಿಕ್ಕಲ್ಲಿ ಓಡುವುದರಿಂದ ಹಲ್ಲಿದ್ದವರಿಗೂ ಜಗಿಯಲು ಸಿಕ್ಕುವುದಿಲ್ಲ; ಅವು ಯಾವ ಅರ್ಥಗಳಿಗಾಗಲಿ, ಛಂದಸ್ಸುಗಳಿಗಾಗಲಿ ಒಳ ಗಾಗದ ಸ್ವತಂತ್ರ ಭಾವಕವಿತೆಗಳಾಗಿವೆ. ಅವುಗಳಲ್ಲಿ ಒಳಭಾವವು ಒಂದು, ಹೊರಭಾವವು ಇನ್ನೊಂದು, ಉಳಿದ ಚಿಲ್ಲರೆ ಭಾವಗಳು ಬೇಕಾದಷ್ಟು. ಬರೆದವರ ಭಾವವು ಒಂದಾದರೆ, ಊಹಿಸುವವರ ಭಾವವು ಮತ್ತೊಂದು, ಭಾವಿಸುವವರ ಭಾವಗಳು ನೂರಾರು. ದೊಡ್ಡ ಮನುಷ್ಯರು ಕವಿತೆ ಬರೆದರೆ, ಅದರ ಭಾವವು "ದೊಡ್ಡ ಭಾವ"; ಉದ್ದ ಮನುಷ್ಯರು ಬರೆದರೆ, ಅದರಲ್ಲಿ "ಉಚ್ಚ ಭಾವ"; ಭಾರವುಳ್ಳ ಮನುಷ್ಯರ ಕವಿತೆಯಲ್ಲಿರುವುದು

"ಆಳವಾದ ಭಾವ"; ದೊಡ್ಡವರ "ದೋಸ್ತಿ"ಗಳೇನಾದರೂ ಬರೆದುಹಾಕಿದರೆ, ಅದರಲ್ಲಿ "ಮೈತ್ರೀ ಭಾವ". ಈ ಭಾವಗಳೆಲ್ಲಾ ವಿಶಾಲದೃಷ್ಟಿಯುಳ್ಳ, ನಾನಾ ವಿಪರೀತಭಾವಗಳೊಡನಾಡಿ ಅನುಭವಹೊಂದಿದ, ಮಹಾನುಭಾವರಾದ "ಭಾವಭಕ್ತ"ರಿಗೇ ಗೊತ್ತಾದೀತಲ್ಲದೆ, ಸಾಮಾನ್ಯರಾದ "ಭಾವುಕ"ರಿಗೆ ಎಂದೂ ತಿಳಿಯದು. ಉದಾಹರಣೆಗಾಗಿ ಈ ಕೆಳಗಿನ ಕವಿತೆಯ ಭಾವವು, ಹೆಚ್ಚಾಗಿ ಯಾರಿಗೂ ತಿಳಿಯದಿದ್ದರೂ, "ಎಷ್ಟು ಗಹನವಾಗಿ, ಗಂಭೀರವಾಗಿ, ಆಳವಾಗಿ, ಛೆನ್ನಾಗಿದೆ" ನೋಡಿರಿ:—

"ಕಾಫೀ ಒಲೆಯಲಿ ಕಾಯುತಲಿತ್ತು,
ರೊಟ್ಟೀ ಬಿಸಿ ಬಿಸಿ ಬೇಯುತಲಿತ್ತು,
ಅದು ಉಬ್ಬಿತ್ತು.
ಅಣ್ಣನ ಬೆಕ್ಕು ಕೂಂತಿತ್ತು,
ಅಕ್ಕನ ನಾಯೀ ಬೊಗಳುತಲಿತ್ತು,
ಅದರ ಕಾಲೂ ಮುರಿದಿತ್ತು."

"ಒಲೆಯಲ್ಲಿ ಕಾಫಿಯು ಕಾಯುತ್ತಾ ಇದೆ"—ಇದು ಒಂದು ಭಾವ; ಕಾಫಿಯು ಕಾಯುತ್ತಾ ಇರುವಾಗ ಮನೆಯಲ್ಲಿರುವವರ ಭಾವಗಳೆಲ್ಲಾ ಆ ಕಾಫಿಯೊಂದಿಗೇ ಹೇಗೆ ಕಾಯುತ್ತಾ ಇದ್ದುವೆಂದೂ, ಎಲ್ಲರೂ ಕಾಫಿಯೂವಾಗ ತಯಾರಾಗುವುದೆಂಬುದನ್ನೇ ಕಾಯುತ್ತಿದ್ದರೆಂಬುದನ್ನೂ ಭಾವಿಸಿಕೊಳ್ಳಬಹುದು—ಇದು ಆಳವಾದ ಭಾವ. "ರೊಟ್ಟೀ ಬಿಸಿ ಬಿಸಿ ಬೇಯುತಲಿತ್ತು, ಅದು ಉಬ್ಬಿತ್ತು" ಇದು ಇನ್ನೊಂದು ಮಹಾಭಾವ; ರೊಟ್ಟಿಯು ಬಿಸಿ ಬಿಸಿಯಾಗಿ ಬೇಯುತ್ತಾ ಬರುವಾಗ ಅದು ಉಬ್ಬಿ ಬರುವಂಥಾ ಭಾವವು ಸಾಮಾನ್ಯವೆ? ("ರೊಟ್ಟಿಯು ಬಿಸಿ ಬಿಸಿಯಾಗಿ ಬೇಯುತಿತ್ತು" ಎಂದುದರಿಂದ, "ಕಾಫಿಯು ತಣ್ಣತಣ್ಣಗೆ ಕಾಯುತಿತ್ತು" ಎಂದು ಊಹಿಸಿಕೊಳ್ಳಬೇಕು—ಇದು ಉರುಟೇ ಭಾವ.) ಭಯಂಕರ ಭಾವ! ರೊಟ್ಟಿಯು ಉಬ್ಬುತ್ತಾ ಬರುವಾಗ, ಬಳಿಯಲ್ಲಿ ಕುಳಿತು ಭಾವಪೂರ್ಣದೃಷ್ಟಿಯಿಂದ ಅದರ ಕಡೆಗೇ ನೋಡುತ್ತಿರುವ ಅಣ್ಣನ ಬೆಕ್ಕಿನ ಮನಸ್ಸಿನಲ್ಲಿ ಎಂತಹ ಉಜ್ವಲಭಾವವು ಉಕ್ಕಿ ಉಕ್ಕಿ, ಉಬ್ಬಿ ಉಬ್ಬಿ ಬರುತ್ತಿರುವುದೆಂಬುದನ್ನೂ, ಹೊರಗೆ ಕಾಲು ಮುರಿದ

ನಾಯಿಯು ಯಾವ ಉಚ್ಚಭಾವದಿಂದ "ಕೂಂತಿದೆ" ಎಂಬುದನ್ನೂ ಭಾವುಕರು ಚೆನ್ನಾಗಿ ಭಾವಿಸಿಕೊಳ್ಳಬೇಕು. ಹೀಗೆ ಈ ಕವಿತೆಯ ಪ್ರತಿಯೊಂದು ಗೀಟಿನಲ್ಲಿ, ಪ್ರತಿಯೊಂದು ಶಬ್ದದಲ್ಲಿ, ಅಕ್ಷರ-ಅಕ್ಷರದಲ್ಲಿ ನಾನಾ ರೀತಿಯ ಭಾವತರಂಗಗಳು ತುಂಬಿ ತುಳುಕುತ್ತಿವೆ, ತುಳುಕಿ ಹೊರಹೊಮ್ಮುತ್ತಿವೆ; ಕುಣಿದು ನೆಗೆಯುತ್ತಿವೆ, ನೆಗೆದು ಗಗನಕ್ಕೆ ಹಾರುತ್ತಿವೆ!

ಹಲವು ಕವಿತೆಗಳ ಮುಖ್ಯ ಭಾವ—"ಟೆಕ್ಸ್ಟ ಪುಸ್ತಕವಾಗಬೇಕು" ಎಂದು; ಕೆಲವು ಕವನಗಳ ಭಾವ "ಹೆಸರು ಪಡೆಯಬೇಕು" ಎಂದು. ಕವಿತೆಗಳಲ್ಲಿ ಆಳವಾಗಿ ಅಡಗಿಕೊಂಡಿದ್ದ ಇಂತಹ ಗೂಢಭಾವಗಳು ಜನಸಾಮಾನ್ಯರಿಗೆ ತಿಳಿಯುವುದಾದರೂ ಹೇಗೆ? ಆದುದರಿಂದ ಅಂತಹ ಕವಿತೆಗಳನ್ನು ಅರ್ಥಮಾಡಬಾರದೆಂದೂ, ಶಾಲೆಯಲ್ಲಿ ಮಕ್ಕಳಿಗೆ ಆ ಕವಿತೆಗಳನ್ನು ಕಲಿಸುವಾಗ ಶಬ್ದಾರ್ಥ ಅಥವಾ ಒಟ್ಟರ್ಥ (ಸರಳಾರ್ಥ) ಗಳನ್ನು ಹೇಳಬಾರದೆಂದೂ, ಅವರಿಂದ ಹೇಳಿಸಬಾರದೆಂದೂ, ಕವಿತೆಗಳನ್ನು ಅರ್ಥಮಾಡಲು ಹೋದರೆ ಅವುಗಳ ಸೌಂದರ್ಯ, ರಸ, ಭಾವಗಳು ಕೆಟ್ಟುಹೋಗುವುವೆಂದೂ ಹೇಳುವುದರಲ್ಲಿ ತಪ್ಪಿಲ್ಲ. "ಕವಿತೆಯು ಅರ್ಥಮಾಡುವುದಕ್ಕಲ್ಲ, ಭಾವಿಸುವುದಕ್ಕೆ ಮಾತ್ರ. ಶಬ್ದಗಳನ್ನು ಸಂಧಿ ವಿಂಗಡಿಸಿ ತುಂಡು ತುಂಡು ಮಾಡಬಾರದು, ಅದು ರೊಟ್ಟಿಯಲ್ಲ" ಎಂದು ಆಧುನಿಕ ಭಾವುಕಸಾಹಿತಿಗಳ ಮತ. ಈ ಮತವೇಕೆಂಬುದರ ಅರ್ಥವನ್ನು ಬಿಡಿಸಿ ಹೇಳಬೇಕಾಗಿಲ್ಲ, ಬಿಡಿಸಿ ಹೇಳಿದರೆ ಸೌಂದರ್ಯವೇ ಕೆಟ್ಟುಹೋಗುವುದು! ನನಗೊಂದು ಸಲ ಒಂದು ಕವಿತೆಯ ಅರ್ಥ, ಭಾವ— ಏನೂ ಗೊತ್ತಾಗಲಿಲ್ಲ. ಅದನ್ನು ಬರೆದ ಕವಿಗಳ ಬಳಿಗೆ ಹೋಗಿ ಕೇಳಿದೆ. ಅವರು ನನಗೆ ಕವಿತೆಯಲ್ಲೇ ಉತ್ತರ ಕೊಟ್ಟರು—

"ನನ್ನಯ ಭಾವವು ಕವಿತೆಯ ಭಾವ ।
ಕವಿತೆಯ ಭಾವವು ಅದರ ಸ್ವಭಾವ ॥"

.......ಈ ಉತ್ತರ-ಕವಿತೆಯ ಅರ್ಥವು ನನಗಿನ್ನೂ ಆಗಿಲ್ಲ. ಆದರೂ ಸಾಮಾನ್ಯವಾಗಿ ಹೀಗೆ ಅರ್ಥಮಾಡಿಕೊಂಡಿದ್ದೇನೆ—"ಕೇಡಿಗಳನ್ನೆಲ್ಲಾ ಎಳೆದು ತಂದು ಸೆರೆಮನೆಯೊಳಗೆ ತುಂಬುವಂತೆ, ಮನಸ್ಸಿಗೆ ಬಂದ ಭಾವ

ಗಳನ್ನೆಲ್ಲಾ ಕವಿತೆಯೊಳಗೆ "ಜಮಾಯಿಸಿ" ಬಿಟ್ಟರೆ ಸರಿ, ಸಂದರ್ಭಕ್ಕೆ ತಕ್ಕ ಭಾವವನ್ನು ಕೊಡುವುದು ಆ ಕವಿತೆಯ "ಸ್ವಭಾವ." ಮನಸ್ಸಿನೊಳಗೆ ಆಗಾಗ ಎದ್ದೆದ್ದು ಬರುತ್ತಿರುವ ಭಾವಗಳನ್ನು ಜಾಗ್ರತೆಯಿಂದ ಹಿಡಿಯು ವುದು ಕವಿಗಳ ಜಾಣ್ಮೆ. ನದಿಯಲ್ಲಿ ಗಾಳಹಾಕಿ ಮೀನುಗಳನ್ನು ಹಿಡಿಯಬೇಕಾದರೆ ಅಲ್ಪ ಶ್ರಮವು ಸಾಲದು. ಕವಿಯ ಕೈಯಲ್ಲಿ ಇಂತಹ ಗಾಳವು ಸದಾ ಸಿದ್ಧವಾಗಿರಬೇಕು.

ಮನಸ್ಸಿಗೆ ಬಂದ ಭಾವವನ್ನು ಬಾಯಿಗೆ ಬಂದಂತೆ ಕವಿತಾರೂಪ ದಲ್ಲಿ ಬರೆಯುವಾಗ ಪ್ರಾಸಗಳ ನಿಯಮವು ದೊಡ್ಡ ತ್ರಾಸವೇ ಸರಿ. ಕವಿತೆಯು ಪ್ರಾಸಬದ್ಧವಾಗಿದ್ದರೆ ತಲೆಗೆ ಕೆಲಸವು ಕಡಮೆಯಾಗಿ, ಭಾವನೆಗೆ ಎಡೆಯಿಲ್ಲದಂತಾಗುವುದು. ಆದರೆ, ಕೆಲವು ಕವಿತೆಗಳು ಪೂರ್ಣ ಪ್ರಾಸಹೀನವಾಗಿವೆಯೆನ್ನಲು ಬರುವುದಿಲ್ಲ—ಪ್ರಾಸುಗಳು ತಲೆ ಯಲ್ಲಿಲ್ಲವಾದರೂ, ಕಾಲಿನಲ್ಲಿವೆ. ಇಂತಹ "ಕಾಲು-ಪ್ರಾಸ"ಗಳಿಗೆ ಕಟ್ಟಿಟ್ಟ ಶಬ್ದಗಳೆಂದರೆ—"ಕಿಟ್ಟು, ಪುಟ್ಟು, ಎದ್ದ, ಒದ್ದ, ಬಿದ್ದ, ಕದ್ದ, ಪೆದ್ದ, ಎಕ್ಕಳೆಮರಿ, ಬೆಕ್ಕಿನಮರಿ" ಎಂಬಿತ್ಯಾದಿ ಭಾವಗರ್ಭಿತ ಶಬ್ದಗಳು. ಈ "ಕಿಟ್ಟು—ಪುಟ್ಟು"ಗಳಿಗೆ ಸಾಮಾನ್ಯವಾಗಿ ಎಲ್ಲಾ ಕವಿತೆಗಳಲ್ಲಿಯೂ "ಫ್ರೀ ಪಾಸು!"

ನಮ್ಮ ಮನೆಯ ಕಿಟ್ಟು ।
ಅವನ ಕಾಲು ಕಟ್ಟು ।
ಕಿಟ್ಟು ಪುಟ್ಟು ಸೇರಿ ಒಟ್ಟು ಆಯ್ತು ರೊಟ್ಟಿ ಛಟ್ಟು! ॥

ಈ ಕವನದ ಒಂದನೆಯ ಚರಣದಲ್ಲಿ ಕೊನೆಯ ಪ್ರಾಸು, ಎರಡನೆಯ ಚರಣದಲ್ಲಿ "ಕಾಲು ಪ್ರಾಸು", ಮೂರನೆಯದರಲ್ಲಿ ಹೆಜ್ಜೆಹೆಜ್ಜೆಗೂ ಪ್ರಾಸು! ಇಷ್ಟೆಲ್ಲಾ ಪ್ರಾಸಗಳಿಂದ ಬದ್ಧವಾಗಿ, ಕಿಟ್ಟು-ಪುಟ್ಟುಗಳ ಒಟ್ಟಿನಿಂದ ಒಂದು ರೊಟ್ಟಿಯು ಛಟ್ಟಾಗಿ, ಎಂತಹ "ಮಹತ್ತಾದ, ಘನ-ಗಂಭೀರ ವಾದ ಭಯಂಕರ ಭಾವನೆ"ಯು ರಟ್ಟಾಗಿ ಬಿಟ್ಟಿದೆ!

"ಛಂದದ ಬಂಧನವನ್ನು ಮುರಿದು ಸ್ವತಂತ್ರವಾಗಿ ಹಾಡುವುದು ಕವಿಯ ಸ್ವಭಾವ. ಛಂದವನ್ನು ಅನುಸರಿಸುವುದು ಸ್ವತಂತ್ರಕವಿಯ ಲಕ್ಷಣವಲ್ಲ. ಛಂದವೇ ಆತನನ್ನು ಅನುಸರಿಸಬೇಕು"........ಈ ಮಾತು

ಎಲ್ಲರಿಗೂ ಸಮ್ಮತವೇ. ಆದರೆ ಸ್ವಾತಂತ್ರ್ಯವೆಂದರೆ ಸ್ವೇಚ್ಛಾವೃತ್ತಿಯಲ್ಲ. ಗಾಯಕನಿಗೆ ಸ್ವತಂತ್ರವಾಗಿ ಹಾಡುವ ಅಧಿಕಾರವಿದೆ; ಆದರೆ ಬಾಯಿಗೆ ಬಂದಂತೆ ಹಾಡಿದರೆ?....ಮಾರ್ಗದಲ್ಲಿ ನಡೆಯುವ ಸ್ವಾತಂತ್ರ್ಯವು ಪ್ರತಿಯೊಬ್ಬನಿಗೂ ಇದೆ; ಹೀಗೆಂದು, ಮನಬಂದಂತೆ ಮಾರ್ಗದಲ್ಲಿ ಕುಣಿದರೆ, ಅಡ್ಡಾದಿಡ್ಡಿಯಾಗಿ ನಲಿದಾಡಿದರೆ, ಪರಿಣಾಮ....? ಆದುದರಿಂದ, "ಓ ಹೊಸ ಭಾವ!....ತೋಟವು ನಿನ್ನದೇ ಆದರೂ, ಕೈಬೀಸುವಾಗ ಸ್ವಲ್ಪ ಎಚ್ಚರವಿರಲಿ!....ನಮಸ್ಕಾರ!"

೩. ತಲೆಕೂದಲು

ಈ ಹೆಸರೆತ್ತುವಾಗಲೇ ಯಾರಿಗಾದರೂ ತಮ್ಮ ತಲೆಕೂದಲಿನ ನೆನಪಾಗುವುದು ಸ್ವಾಭಾವಿಕ; ಯುವಕರಿಗಂತೂ "ಕ್ರೋಪಿ"ನ ಮೇಲೆ ಒಂದೆರಡು ಸಲ ಕೈಯಾಡದಿರದು; ಯುವತಿಯರ ಮಾತೇ ಅಗತ್ಯವಿಲ್ಲ— ತಲೆಕೂದಲೇ ಅವರ ಪ್ರಾಣ, ಅವರ ಉಸಿರು, ಅವರ ಸರ್ವಸ್ವ.

ತಲೆಕೂದಲು ಬಲು ಸೂಕ್ಷ್ಮವಾಗಿ ಕಂಡರೂ, "ಮೂರ್ತಿ ಕಿರಿದಾದರೂ, ಅದರ ಕೀರ್ತಿ ಹಿರಿದು." ಅದು ಮಾಡಿದ ಮಹತ್ಕಾರ್ಯಗಳು ಒಂದೆರಡಲ್ಲ: ಕೌರವರ ಮರಣವನ್ನು ಕಂಡಲ್ಲದೆ ತನ್ನ ಕೂದಲನ್ನು ಕಟ್ಟೆನೆಂಬ ಶಪಥದಿಂದ ಬಿಚ್ಚಿದ ದ್ರೌಪದಿಯ ಆ ತಲೆಕೂದಲೇ ಭಾರತ ಯುದ್ಧಕ್ಕೆ ಕಾರಣವಾಯಿತು, ತನ್ಮೂಲಕ ಭೂಭಾರಹರಣಕ್ಕೂ ನೆರವಾಯಿತು; ದ್ರೌಪದಿಯ ಅದೇ ಕೂದಲಿನ ದೆಸೆಯಿಂದಲೇ ದುಷ್ಟ ಕೀಚಕನ ವಧೆಯಾಯಿತು. ದಕ್ಷಯಜ್ಞಧ್ವಂಸಕ್ಕೆ ಕಾರಣನಾದ ವೀರಭದ್ರನಿಗೆ ಜನ್ಮವಿತ್ತುದು ಶಿವನ ಜಡೆಯಲ್ಲವೆ? ಸಗರಾನ್ವಯವನ್ನು ಉದ್ಧರಿಸಿದ ಗಂಗೆಯಾದರೂ ಭೂಮಿಗೆ ಇಳಿದು ಬಂದುದು ಆ ಗಂಗಾಧರನ ಜೆಡೆಯ ಸಂದಿನಿಂದಲ್ಲವೆ? ಶಿವನಿಗೆ "ಜಟಾಜೂಟಿ"ಯೆಂಬ ಹೆಸರನ್ನಿತ್ತುದು ತಲೆಕೂದಲಲ್ಲವೆ? ಚಾಣಕ್ಯನು ತನ್ನ ತಲೆಕೂದಲನ್ನೇ ಪಣವಾಗಿಟ್ಟುಕೊಂಡು, ನವನಂದರ ಹೆಸರನ್ನೇ ಅಡಗಿಸಲಿಲ್ಲವೆ?

........ಇದೆಲ್ಲಾ ಹಿಂದಿನ ಮಾತು. ನವಯುಗದಲ್ಲಿಯೂ ಕೂದಲಿನ ಮೇಲ್ಮೆಯು ಕಡಮೆಯಾಗಲಿಲ್ಲ. ಹಿಂದಿನ ಕಾಲದಲ್ಲಿ ಕೂದಲಿನಿಂದಾಗಿ ಭಾರತ ಯುದ್ಧವು ನಡೆಯಿತು; ಇಂದಿನ ಕಾಲದಲ್ಲಿ ಕೂಡ ಯುದ್ಧವು ನಡೆಯುತ್ತಲೇ ಇದೆ—ಅದು ಹದಿನೆಂಟು ದಿನಗಳ ಯುದ್ಧವಾಗಿದ್ದರೆ, ಇದು ದಿನನಿತ್ಯದ ಯುದ್ಧ! ಅದು "ಭಾರತ-ಯುದ್ಧ"ವಾಗಿದ್ದರೆ, ಇದು "ಭಾರತದ ಯುದ್ಧ!" ಈ ಯುದ್ಧದ ನಿಜವಾದ ಹೆಸರು "ಚೋಟೀ-ದಾಡೀ ಕೀ ಲಡಾಯಿ"—ಎಂದರೆ, ಜುಟ್ಟು-ಗಡ್ಡಗಳೊಳಗಿನ ಸಂಗ್ರಾಮ. ಜುಟ್ಟಿನವರು ಹಿಂದುಗಳು, ಗಡ್ಡದವರು ಮುಸಲ್ಮಾನರು.

ಒಂದಾನೊಂದು ಕಾಲದಲ್ಲಿ ಈ "ಚೋಟೀ-ದಾಡಿ"ಗಳು ಮುದ್ದಾಡಿಕೊಳ್ಳು ತ್ತಿದ್ದುವು; ಆದರೆ ಈಗೀಗ ಒದ್ದಾಡಿ, ಗುದ್ದಾಡಿಕೊಳ್ಳುತ್ತಾ ಇವೆ. "ಚೋಟೀ-ದಾಡಿ"ಗಳು ಉದ್ದ ಬೆಳೆಯುತ್ತಾ ಹೋದಂತೆ ಯುದ್ಧವೂ ಉದ್ದ ಬೆಳೆಯುತ್ತಾ ಹೋಗುತ್ತಿದೆ. ಯುದ್ಧಕ್ಕೆ ಕಾರಣವು ಹೆಚ್ಚು ಬೇಕಾಗಿಲ್ಲ—ಮುಸಲ್ಮಾನನೊಬ್ಬನು ತನ್ನ ಉದ್ದದ ದಾಡಿಯನ್ನು ಒಮ್ಮೆ ಉಜ್ಜಿದರೆ ಹಿಂದುವಿಗೆ ಕಣ್ಣು ಕೆಂಪಾಗುವುದು; ಹಿಂದು ತನ್ನ "ಚೋಟಿ"ಯನ್ನು ತೋರಿಸಿದರೆ ಸಾಹೇಬರು ಕಿಡಿಕಿಡಿಯಾಗುವರು—ಸರಿ, ಕೂಡಲೇ ಕೈಕೈ ಹತ್ತುವುದು. ನಿಜವಾಗಿ ನೋಡಹೋದರೆ, ಸಾಣೆ ತಲೆಯವರಿಬ್ಬರು ಬಾಚಣಿಗೆಗಾಗಿ ಹೊಡೆದಾಡಿಕೊಳ್ಳುವುದರಲ್ಲಿ ಎಷ್ಟು ಹುರುಳಿದೆಯೋ ಅಷ್ಟೇ ಹುರುಳು ಈ ಜಗಳದಲ್ಲಿ. ಮೂರನೆಯ ಆಸಾಮಿಯು ಜುಟ್ಟು ಮತ್ತು ಗಡ್ಡಗಳೊಳಗೆ ಗಂಟುಹಾಕಿ, ದೂರದಿಂದ "ಮಜಾ" ನೋಡುತ್ತಿರುವನು. ಜುಟ್ಟು ಕಿತ್ತು ಹೋದರೆ ಅವನಿಗೇನು ಸಿಟ್ಟು? "ದಾಡಿ" ಹರಿದು ಹೋದರೆ ಅವನಿಗೇನು "ಧಾಡಿ?" ಇವೆರಡರೊಳಗಿನ ಗಂಟು ಬಿಚ್ಚಿಹೋದಾಗ, ಒಂದು ಕೈಯಲ್ಲಿ ಜುಟ್ಟನ್ನೂ ಇನ್ನೊಂದು ಕೈಯಲ್ಲಿ "ದಾಡಿ"ಯನ್ನೂ ಹಿಡಿದು, ಪುನಃ ಗಂಟಿಕ್ಕುವುದು ಅವನ ಕೆಲಸ, ಇದೇ ಅವನ ಲಾಭ. ಅಂತೂ ಹಿಂದುಗಳ ಜುಟ್ಟೂ ಆತನ ಕೈಯಲ್ಲಿ, ಮುಸಲ್ಮಾನರ "ದಾಡಿ"ಯೂ ಆತನ ಕೈಯಲ್ಲಿ!

ಚಿಕ್ಕ ಶಿಶುವು ತಾಯಿಯ ಗರ್ಭದಿಂದ ಹೊರಬಿದ್ದೊಡನೆಯೇ "ಅದಕ್ಕೆ ತಲೆಕೂದಲು ಹುಟ್ಟಿದೆಯೆ?" ಎಂದು ನೋಡುವುದು ಶಿಶುವಿನ ಬಳೆವಣಿಗೆಯ ಒಂದು ಮುಖ್ಯಪರೀಕ್ಷೆ. ತಲೆಕೂದಲನ್ನು ಪ್ರೀತಿಸದ ಬಾಲಕ-ಬಾಲಿಕೆ, ತರುಣ-ತರುಣಿ, ಮುದುಕ-ಮುದುಕಿ—ಯಾರೂ ಸಿಗಲಾರರು. ಹೆಂಗುಸರಿಗಂತೂ ತಲೆಕೂದಲೆಂದರೆ ಪಂಚಪ್ರಾಣ. ಸೌಂದರ್ಯ ಬೇಕಾದರೆ ತಲೆಕೂದಲು ಬೇಕು; ಸೌಂದರ್ಯದ ಹೆಗ್ಗುರುತೇ ತಲೆಕೂದಲು. ತಲೆಕೂದಲಿಲ್ಲದ ಹುಡುಗಿಯನ್ನು ಯಾರೂ ಮದುವೆಯಾಗುವುದಿಲ್ಲ. ನಾಟಕ ಕಂಪೆನಿಗಳಲ್ಲಿ ತಲೆಕೂದಲಿರುವ ನಟ-ಯಾ-ನಟಿಯರಿಲ್ಲದಿದ್ದರೆ, ಆ ನಾಟಕವು ಹೆಂಗುಸರಿಲ್ಲದ ಸಂಸಾರದಂತೆಯೇ ಸರಿ; ಕೊನೆಗೆ ನಿರ್ವಾಹವಿಲ್ಲದೆ, ಸ್ತ್ರೀವೇಷಕ್ಕಾಗಿ "ಟೋಪನ್"ಗಳನ್ನಾ

ದರೂ ಕಟ್ಟಿಕೊಳ್ಳಬೇಕಾಗುವುದು. ಈ "ಟೋಪನ್" ಒಂದೊಂದು ವೇಳೆ ನಾಟಕದ ಮಧ್ಯೆ ತಲೆಯಿಂದ ಜಾರಿ ಬಿದ್ದು, ಕೈಚಪ್ಪಾಳೆಗಳ ಕೋಲಾಹಲಕ್ಕೆ ಕಾರಣವಾಗುವುದೂ ಇದೆ. ಸಿನೆಮಾ ತಾರೆಗಳಿಗಂತೂ ಉತ್ತಮ ಕೂದಲು ಮುಖ್ಯಲಕ್ಷಣ. ಹಿಂದೂಸ್ತ್ರೀಯರ ಭಾಗ್ಯವಿರುವುದು ತಲೆ ಕೂದಲಿನಲ್ಲಿ. ಕೂದಲು ತೆಗೆಯಿಸದ ಹೆಂಗುಸಿಗೆ ಎಲ್ಲೆಲ್ಲಿಯೂ ಬಹಿಷ್ಕಾರ. ಈಗೀಗ ವಿಧವಾ ವಿವಾಹಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಿರುವರಾದರೂ, ಸಕೇಶಿಯರಾದ ವಿಧವೆಯರನ್ನು ಮದುವೆಯಾಗುವರೇ ಹೊರತು, ಕೂದಲು ತೆಗೆಯಿಸಿದ ವಿಧವೆಯರನ್ನು ಯಾರರೂ ಕೈಹಿಡಿಯಲು ಮುಂದೆ ಬರುವಂತಿಲ್ಲ. ಮುಂಡನವಿಧಿಯನ್ನು ಹೊಂದಿದ ಹೆಂಗುಸನ್ನು ಅವಲಕ್ಷಣದ ಮುದ್ದೆಯೆಂದು ತಿಳಿಯುತ್ತಾರೆ. ಕಾರ್ಯೋದ್ದೇಶದಿಂದ ಹೋಗುವಾಗ ತಲೆ ಬೋಳಿಸಿದ ವಿಧವೆಯು ಎದುರು ಬಂದರೆ ಕಾರ್ಯಹಾನಿ; ಬೆಳಗ್ಗೆ ಎದ್ದೊಡನೆಯೇ ವಿಧವೆಯನ್ನು ಕಂಡರೆ ಅವಲಕ್ಷಣ; ಮದುವೆ-ಮುಂಜಿ ಮೊದಲಾದ ಶುಭಕಾರ್ಯಗಳಲ್ಲಿ ಅಂತಹ ವಿಧವೆಯರ ಪ್ರವೇಶವು ಅಮಂಗಳಕರ. ಆದರೆ, ಸಕೇಶಿಗಳಾದ ವಿಧವೆಯರ ಮೇಲೆ ಇಷ್ಟೊಂದು ಆಕ್ಷೇಪಣೆ, ಅಪವಾದ, ತಿರಸ್ಕಾರಗಳಿಲ್ಲ; ಇದಕ್ಕೆ ಕಾರಣವನ್ನು ಬೇರೆ ಹೇಳಬೇಕಾಗಿಲ್ಲ.

ಸಕೇಶಿಗಳಾದ ಮುದುಕಿಯರು ತಲೆಬಾಚಿ ಹೆರಳು ಹಾಕಿದರೆ, ದೂರದಿಂದ ನೋಡುವಾಗ ಬಿಳಿಯ ಮುಂಡಾಸು ಸುತ್ತಿದಂತೆ ತೋರುವುದು; ಆದರೆ, ಗಂಡಂದಿರು ಸತ್ತ ಮೇಲೆ, ಹಣ್ಣುಹಣ್ಣು ಮುದುಕಿಯರಿಗೂ ಕೂಡ ತಮ್ಮ ಬಿಳಿಯ ಮುಂಡಾಸುಗಳನ್ನು ಹಾರಿಸುವುದೆಂದರೆ ಬಹಳ ದುಃಖ. ಅದರಲ್ಲಿಯೂ, ಎಳೆಜವ್ವನದ ವಧುವು ತನ್ನ ಪತಿಯನ್ನು ಕಳೆದುಕೊಂಡ ಸಂದರ್ಭದಲ್ಲಿ—ಸನಾತನಿಗಳ ವಾಗ್ಬಾಣದ ಉರಿಯನ್ನು ಸಹಿಸಲಾರದೆ—ಬಾಲ್ಯದಿಂದಲೂ ಪ್ರೀತಿಯಿಂದ ಸಾಕಿ ಸಲಹಿದ ತನ್ನ ಮನೋಹರವಾದ ಕೂದಲನ್ನು ಕಟುಕನಾದ ಕ್ಷೌರಿಕನ ಕೈಗತ್ತರಿಗೆ ಕೊಡುವಾಗ—ಕಠೋರವಾದ ಅವನ ಹಾಳು ಬಾಳು ನಿರ್ದಾಕ್ಷಿಣ್ಯವಾಗಿ ಅವಳ ತಲೆ ಕೂದಲುಗಳ ಬೇರನ್ನೇ ಕರಕರನೆ ಕೊಯ್ಯುವಾಗ ಅನುಭವಿಸುವಷ್ಟು ದುಃಖವನ್ನು—ಪತಿಯನ್ನು ಕಳಕೊಂಡಾಗ ಕೂಡ ಹೊಂದ

ಲಾರಳು. ತಲೆಕೂದಲನ್ನು ಅಂದವಾಗಿ ಬಾಚಿ, ಜಡೆಬಿಟ್ಟು, ಹೂವಿಟ್ಟು ಶೃಂಗರಿಸುವುದೆಂದರೆ ಹೆಂಗುಸರ ದಿನಚರಿಯ ಕೆಲಸಗಳಲ್ಲಿ ಅತ್ಯಂತ ಪ್ರಾಮುಖ್ಯವಾದ ಹಾಗು ಅಚ್ಚುಮೆಚ್ಚಿನ ಕೆಲಸ. ಈ ಆನಂದವನ್ನು ಕಳಕೊಳ್ಳುವುದೆಂದರೆ, ಜೀವನದ ಜ್ಯೋತಿಯನ್ನೇ ಕಳಕೊಂಡಂತೆ.

"ನಾಗವೇಣಿ, ಭೃಂಗಕುಂತಳೆ, ಕಾಳಾಹಿವೇಣಿ, ಪನ್ನಗವೇಣಿ...." ಮುಂತಾಗಿ ಕವಿಗಳು ಹೆಂಗುಸರನ್ನು ಹೊಗಳಿರುವುದಾದರೆ, ಅದು ಅವರ ನಡೆಯ ಬೆಡಗಿನಿಂದಲ್ಲ, ನುಡಿಯ ಜಾಣ್ಮೆಯಿಂದಲ್ಲ, ಮುಖದ ಕಾಂತಿಯಿಂದಲ್ಲ,—ತಲೆಕೂದಲಿನ ಕಾರಣದಿಂದ. ಹಿಂದಿನ ಕವಿಗಳಾದರೋ ಹೆಂಗುಸರ ತಲೆಕೂದಲನ್ನು ಬಣ್ಣಿಸಿ ಬಣ್ಣಿಸಿ ಗ್ರಂಥಗಳನ್ನೇ ಬರೆದಿರುವರು. ಹಿಂದಿನ ಕವಿಯಾಗಲಿ, ಇಂದಿನ ಕವಿಯಾಗಲಿ—ಹೆಂಗುಸರ ಸೌಂದರ್ಯವರ್ಣನೆಯಲ್ಲಿ ತಲೆಕೂದಲಿಗೆ ಮುಖ್ಯಸ್ಥಾನವನ್ನು ಕೊಟ್ಟೇ ಕೊಡುತ್ತಾನೆ. ಆದರೆ, ಇಂದಿನ ಕವಿಗಳು ಈಗಿನ ಹುಡುಗಿಯರನ್ನು ಬಣ್ಣಿಸುವಾಗ ಬಹಳ ಜಾಗರೂಕರಾಗಿರಬೇಕಾಗುತ್ತದೆ; ಏಕೆಂದರೆ, ಕೆಲವು ಹುಡುಗಿಯರಿಗೆ ಎರಡು-ಯಾ-ನಾಲ್ಕೈದು ಜಡೆಗಳಿರುತ್ತವೆ; ಒಬ್ಬೊಬ್ಬರು "ತ್ರಿಜಟೆ"ಯರೂ ಇದ್ದಾರೆ. ಕೆಲವರಿಗೆ ಜಡೆಯೂ ಇಲ್ಲ, ಹೆರಳೂ ಇಲ್ಲ—"ಹೇರ್ ಪಿನ್ನು"ಗಳನ್ನು ಕುತ್ತಿ, ಬೆನ್ನಿನ ಮೇಲೆ ಹಾಯಾಗಿ "ಹಾಯಿ"ಯನ್ನೇರಿಸಿ ಬಿಡುವರು. ಪಡುಗಾಳಿ ತಾಗಿದ ನವೋಢೆಯರಂತೂ ಯುವಕರಂತೆ ಆಗಾಗ "ಸೆಲೂನು"ಗಳನ್ನು ಕೂಡ "ವಿಸಿಟ್" ಮಾಡಿ "ಕ್ರೋಪ್" ಮಾಡಿಸಿಕೊಳ್ಳುವರು. ಗಂಡುಸರಂತೆ ಹೆಂಗುಸರೂ ಹೀಗೆ "ಸೆಲೂನು-ಗಿರಾಕಿ"ಗಳಾದರೆ, "ಸೆಲೂನು"ಗಳ ಸಂಖ್ಯೆ ಹೆಚ್ಚಾಗಬೇಕಾದುದು ಸಹಜವಲ್ಲವೆ? ಕೆಲವು ಗಂಡುಸರು ಸಿಟ್ಟು ಬಂದಾಗ ಹೆಂಡತಿಯ ಜುಟ್ಟು ಹಿಡಿದು ಬಗ್ಗಿಸಿ ಬೆನ್ನಿಗೆ "ಪೊಳ" ಹಾಕುವುದೂ ಉಂಟು; ಬಹುಶಃ ಈ ಗುದ್ದನ್ನು ತಪ್ಪಿಸುವುದಕ್ಕಾಗಿ ಈಗಿನ ಕೆಲವು ಮಹಿಳೆಯರು ಈ "ಶಿರಮೇಧಯಜ್ಞ" (ತಲೆ ಕಡಿಯುವ ಯಜ್ಞ) ವನ್ನು ಕೈಕೊಂಡಿರುವರೋ ಏನೋ! ಮದುವೆಯಾಗದ ಹುಡುಗಿಯರಂತೂ ಮುಂಜಾಗ್ರತೆ ತೆಗೆದುಕೊಳ್ಳಬೇಕಾದುದು ಸಹಜವೇ.

"ಸೆಲೂನು" ಎನ್ನುವಾಗ ನೆನಪಾಯಿತು: ಗದ್ದೆಯಲ್ಲಿ ಬೆಳೆಯುವ

"ಕ್ರೋಪ"ನ್ನು "ಕಟಾವು" ಮಾಡುವುದು ವರ್ಷಕ್ಕೆ ಎರಡು-ಯಾ-ಮೂರು ಸಲ; ಆದರೆ, ತಲೆಯು "ಕ್ರೋಪು-ಕಟಾವು" ತಿಂಗಳಿಗೆರಡುಮೂರು ಸಲ. ಕ್ಷೌರಿಕನಿಗೂ, ತಲೆಕೂದಲಿಗೂ ಬದ್ಧವೈರ. ಎಷ್ಟೇ ಉದ್ದವಾದ, ಮನೋಹರವಾದ ಕೂದಲನ್ನಾದರೂ ಆತನ ಕೈಗತ್ತರಿಯು ಸುಲಭದಲ್ಲಿ "ಸಫಾ" ಮಾಡಿ ಬಿಡುವುದು. ಆದರೆ, ಇದನ್ನು "ವೈರಬುದ್ಧಿಯಿಂದ" ಎನ್ನುವುದಕ್ಕಿಂತಲೂ, "ತಲೆಕೂದಲಿಗೆ ಒಂದು ಹೊಸಅಲಂಕಾರವನ್ನು ಕೊಟ್ಟು, ಅದರ ಸೌಂದರ್ಯಕ್ಕೆ ಕಳೆಯೇರಿಸುವುದಕ್ಕಾಗಿ" ಎನ್ನುವುದರಲ್ಲಿ ಸೊಗಸಿದೆ. ಇದಕ್ಕಾಗಿಯೇ ಇಂದು ಹಳ್ಳಿ-ಪಳ್ಳಿಗಳಲ್ಲಿಯೂ, ಪೇಟೆ-ಪಟ್ಟಣಗಳಲ್ಲಿಯೂ, "ಸೆಲೂನು"ಗಳ ಹೊಸಹೊಸ ಅವತಾರವಾಗುತ್ತಿದೆ. "ಸೆಲೂನು"ಗಳನ್ನು ಇಡದೇ ಕ್ಷೌರಿಕರಾಗುವುದು, ಬಾಳು-ಕತ್ತರಿಗಳಿಲ್ಲದೇ "ತಲೆ ಬೋಳಿಸು"ವುದು, ಜುಟ್ಟು ಮುಟ್ಟದೇ "ಫೈಸಲ್" ಮಾಡುವುದು ಆಧುನಿಕಯುಗದ ಅಹಿಂಸಾತತ್ವವಾದುದರಿಂದ ಇಂದು ಎಲ್ಲರ ಬಾಳಿಗಿಂತಲೂ ಕ್ಷೌರಿಕನ "ಬಾಳು" ಶ್ರೇಷ್ಠವಾಗಿದೆ. ಕ್ಷೌರಿಕನು ಜುಟ್ಟುಹಿಡಿದನೆಂದು ಬೇರೆಯವರು ಜುಟ್ಟುಹಿಡಿದರೆ, ಬದಲಾಗಿ ಮೆಟ್ಟು ಹಿಡಿಯುವ ಪ್ರಸಂಗ ಬರಬಹುದು. ಜುಟ್ಟುಹಿಡಿದೊಡನೆಯೇ ಯಾರಿಗಾದರೂ ಸಿಟ್ಟು ಬರುವುದು ಪದ್ಧತಿ; ಆದರೆ, ಕ್ಷೌರಿಕನು ಜುಟ್ಟು ಹಿಡಿದು ಬಗ್ಗಿಸುವಾಗ ಎಂತಹ ಮುಂಗೋಪಿಯೂ ಮೂಗುದಾರ ಹಿಡಿದ ಎತ್ತಿನಂತಾಗಿ ಬಿಡುವನು. ಕ್ಷೌರಿಕನ ಕೈಯಲ್ಲಿ ತಮ್ಮ ತಲೆಯನ್ನೇ ಅರ್ಪಿಸಲು ಯಾರೂ ಹಿಂದು ಮುಂದು ನೋಡುವುದಿಲ್ಲ; ಆತ ನಿದಿರಿಗೆ ಜವಾನನಾಗಲಿ, ದಿವಾನನಾಗಲಿ ತಲೆ ತಗ್ಗಿಸಲೇ ಬೇಕು. ಆದರೆ, ಕೆಲವು ಕ್ಷೌರಿಕರು ತಲೆಕೂದಲಿನ ಇದ್ದ ಸೌಂದರ್ಯವನ್ನೇ ಕೆಡಿಸಿ, ವಿಶ್ವಾಸ-ಘಾತುಕತನ ಮಾಡಿಬಿಡುತ್ತಾರೆ. ಒಂದು ಸಲ ಕತ್ತರಿಸಿದ "ಕ್ರೋಪು" ಇಲಿ-ಹೆರೆದ ಸೌತೆಕಾಯಿಯಂತಾದರೆ, ಕ್ಷೌರಿಕನಿಗೆ ಸಾವಿರ ಶಾಪಹಾಕಿ, ಆತನ "ಸೆಲೂನಿ"ಗೆ ಬಹಿಷ್ಕಾರಹಾಕುವ ಯುವಕರು ತನ್ಮೂಲಕ ತಲೆಕೂದಲಿನ ಮೇಲಿರುವ ತಮ್ಮ ಪ್ರೇಮವನ್ನು ಚೆನ್ನಾಗಿ ವ್ಯಕ್ತಪಡಿಸುವರು.

ಕ್ಷೌರಿಕರು "ತಲೆಗಡುಕ"ರಾಗಿದ್ದರೂ, ನಿಜವಾಗಿ ತಲೆಕೂದಲಿನ

ಕೊಲೆ ಮಾಡುವವರೆಂದರೆ ಮುಸಲ್ಮಾನರು. ತಲೆ ಬೆಳೆಯಿಸುವುದು ಅವರ ಜಾತಿಕಟ್ಟಳೆಗೆ ವಿರೋಧ. ಮುಸಲ್ಮಾನನಾಗಬೇಕಾದರೆ ತಲೆಗೆ "ಕಲಾಯಿ" ಹಾಕಲೇ ಬೇಕು. ಅವರು ತಮ್ಮ ಮಂಡೆಗಳನ್ನು "ಹೋಲ್ ಸೇಲ್" ಬೋಳಿಸಿಬಿಟ್ಟು, ಮೇಲೆ ಮುಚ್ಚಳ (ಟೊಪ್ಪಿ)ವನ್ನು ಕೂಡ ಇಟ್ಟು ಬಿಡುವರು—ಕೂದಲು ಬೆಳೆಯಲೇಬಾರದೆಂದೋ ಏನೋ! ಆದರೂ ತಲೆಗೂದಲಿನ ಪ್ರಭಾವವೆಷ್ಟಿದೆ ಎಂದರೆ, ಅದು ಜುಟ್ಟಿನ ಬದಲು, ತಲೆ ಕೆಳಗಾಗಿ ಗಡ್ಡದ ರೂಪದಿಂದ ತೂಗಾಡತೊಡಗುವುದು. ಸೂಕ್ಷ್ಮವಾಗಿ ಆಲೋಚಿಸಿ ನೋಡಿದರೆ, ತಲೆಕೂದಲಿನ ಮೂಲಕವೇ ಒಬ್ಬನ ಜಾತಿ-ನೀತಿಗಳನ್ನೂ ಕಂಡುಹಿಡಿಯಬಹುದಾಗಿದೆ: ಮುಸಲ್ಮಾನರ ಮಂಡೆ ಬೋಳು; "ಕ್ರಿಶ್ಚಿಯನ್ ಪಾದರಿ"ಗಳ ತಲೆಯ ಮೇಲೆ "ಟೋನ್ಸರ್" ಇರುವುದು; ಎದುರು-ಜುಟ್ಟು ಇಡುವವರು ಮಲೆಯಾಳಿಗಳು; ಬೇಸಗೆಯ ಮುಳಿಹುಲ್ಲಿನಂತೆ ನಸುಗೆಂಪಾದ ಕೂದಲಿರುವವರು ಯುರೋಪಿಯನರು. ಹೀಗೆಯೇ ಸ್ವಲ್ಪ ತಲೆ ಖರ್ಚು ಮಾಡಿದರೆ, ತಲೆಗಳ ಮೂಲಕವೇ ಎಲ್ಲರ—ಮುಖ್ಯವಾಗಿ ನಮ್ಮ ದೇಶದವರ—ಜಾತಿನೀತಿಗಳನ್ನು ಕಂಡು ಹಿಡಿಯಬಹುದಾಗಿದೆ.

ಆದರೆ, ಈಗಿನ ಕಾಲದಲ್ಲಿ ತಲೆಕೂದಲಿನ ಸಹಾಯದಿಂದ ಮನುಷ್ಯನ ಜಾತಿಯನ್ನು ಕಂಡು ಹಿಡಿಯುವುದು ಅಸಾಧ್ಯವಾದ ಮಾತು. ಏಕೆಂದರೆ, ಇದು "ಕ್ರೋಪಿ"ನ ಯುಗ—ಜುಟ್ಟಿನ ಯುಗವಲ್ಲ. "ಕ್ರೋಪ್" ಬಿಡಿಸಿಕೊಳ್ಳದವರು "ಜೆಂಟ್ಲ್‌ಮೆನ್" ಎಂಬವರ ಜಾತಿಗೆ ಸೇರಲು ಯೋಗ್ಯರಾಗುವುದಿಲ್ಲ. ಹತ್ತು ಮಂದಿ ಸಭ್ಯರು ಕೂಡಿದ ಸಭೆಯಲ್ಲಿ ಮನ್ನಣೆ ಸಿಗಬೇಕಾದರೆ, ತಲೆಯ ಮೇಲೆ "ಕ್ರೋಪು" ಬೇಕು; ಶಾಲೆ-ಕಾಲೇಜುಗಳಲ್ಲಿ, ಸಿನೆಮಾ-ನಾಟಕಗಳಲ್ಲಿ, ಸಭೆ-ಕೂಟಗಳಲ್ಲಿ, "ಕೌನ್ಸಿಲು-ಎಸೆಂಬ್ಲಿ"ಗಳಲ್ಲಿ, ಮೋಟಾರು-ರೈಲು ಗಾಡಿಗಳಲ್ಲಿ "ಸೀಟು" ದೊರೆಯಬೇಕಾದರೆ "ಕ್ರೋಪು" ಬೇಕು; ಕನ್ಯಾನ್ವೇಷಣಕ್ಕಾಗಿ ಬಂದ ಯುವಕನ ಮೇಲೆ, ಬಾಗಿಲಿನ ಮರೆಯಿಂದ ಕದ್ದು ನೋಡುವ ಹುಡುಗಿಯ ಒಯ್ಯಾರದ ಓರೆನೋಟವು ನೇರಾಗಿ ಬೀಳಬೇಕಾದರೆ, ಅವನ ತಲೆಯಲ್ಲಿ "ಕ್ರೋಪು" ಮೆರೆಯಬೇಕು........ಹುಡುಗಿಯನ್ನು ಎದುರಿನಿಂದ ನೋಡುವ

ಹುಡುಗನು ಪ್ರಥಮದಲ್ಲಿ ಮುಂಗುರುಳುಗಳಿಂದೊಪ್ಪುವ ಅವಳ ಮುಖ, ಮನಮೋಹಕವಾಗಿ ಬಿಡಿಸಿದ ಬೈತಲೆ ಇವಿಷ್ಟನ್ನೇ ನೋಡುವನು; ಅವಳು ಹಿಂದಿರುಗಿದಳೆಂದರೆ, ಬೆನ್ನಮೇಲೆ ಅಲೆದಾಡುವ ಅವಳ ಬಿಡುಜಡೆಯು ಬೆಡಗಿನ ಸವಿಯನ್ನುಣ್ಣುವನು. ಅಂತೂ ಹುಡುಗರಿಗೆ "ಕ್ರೋಪು" ಬೇಕು; ಹುಡುಗಿಯರಿಗೆ ಯಾವಾಗಲೂ "ಬೈತಲೆ" ಬೇಕು. "ಕ್ರೋಪು" ಬೇಕಾದರೆ—ಬೈತಲೆ ಬೇಕಾದರೆ—ಸೌಂದರ್ಯ ಬೇಕಾದರೆ—ತಲೆಕೂದಲು ಬೇಕು. ತಲೆಕೂದಲು ಬೇಕಾದರೆ, ಅದನ್ನು ಅಂದವಾಗಿ ಬಾಚಿ, ಬೈತಲೆಬಿಡಿಸಿ, ಹೆರಳುಹಾಕಿ, ಅಥವಾ ಜಡೆಬಿಟ್ಟು, ಹೂವಿಟ್ಟು, ಅಂದವಾಗಿಟ್ಟುಕೊಳ್ಳಬೇಕು. ಕವಿಗಳು ಸುಮ್ಮನೆ ಹೇಳಿರುವರೆ?—

"ತಲೆಯುಲ್ಲದು ಬತ್ತಲೆ, ಬೈ ।
ತಲೆಯಿಲ್ಲದ ತಲೆಯೆ, ರಮಣಿಯರ್ಗೆಂದುಂ "ಬೈ-
ತಲೆ" ತಿದ್ದಿದೊಡಾಸತಿ ಬೈ-
ತಲೆ ಮಣಿಯೆನಿಕುಂ ಸುವೃತ್ತಿಯಿಂದಂ ತಿರೆಯೊಳ್ ॥"

"ಕ್ರೋಪು" ಬಾಚುವುದಕ್ಕೆ ಕಾಲದ ನಿಯಮವೇನೂ ಇಲ್ಲ. ಕನ್ನಡಿ ಸಿಕ್ಕಿದಷ್ಟು ಸಲ, ಬಾಚಣಿಗೆ ದೊರೆತಷ್ಟು ಸಲ ಅದರ ಸೇವೆ ನಡೆಯಲೇ ಬೇಕು. ಕೂದಲು ಸ್ವಲ್ಪ ಅಸ್ತವ್ಯಸ್ತವಾಗಿ "ತಲೆ-ಕೆದರಿ"ತೆಂದರೆ, ತಲೆಯ ಲಕ್ಷಣವೇ ಕೆಟ್ಟುಹೋಗುವುದು. ಅದಕ್ಕಾಗಿ "ಕ್ರೋಪ"ನ್ನು ಆಗಾಗ "ಮಾಲೀಸು" ಮಾಡುವುದು, ಚಿಕ್ಕ ಕನ್ನಡಿ ಮತ್ತು ಬಾಚಣಿಗೆ ಇವನ್ನು ಜೇಬಿನೊಳಗೇ ಇಟ್ಟುಕೊಳ್ಳುವುದು "ಕ್ರೋಪುವಾಲ"ರ ಲಕ್ಷಣವಾಗಿದೆ. "ಕ್ರೋಪು" ಇದ್ದವರಿಗೆ ಬೆಳಗ್ಗೆ ಹಾಸಿಗೆಯಿಂದೇಳುವಾಗ "ತಲೆ ಏನೂ ಸರಿಯಿರುವುದಿಲ್ಲ"-ಆ ಮೇಲೆ ಕನ್ನಡಿಯಲ್ಲಿ ನೋಡಿಕೊಂಡು, "ಬ್ರಿಲ್ಲೆಂಟೈನ್" ಹಚ್ಚಿ, "ಹಿಂದುಸ್ಥಾನ-ಪಾಕಿಸ್ಥಾನ"ಗಳ ಗಡಿಯ ಗೆರೆಯನ್ನು ಎಳೆದು, "ತಲೆ ಸರಿಪಡಿಸಿ"ಕೊಳ್ಳಬೇಕಾಗುತ್ತದೆ. ಕೆಲವರು ಈ ಗಡಿಯ ಗೆರೆಯನ್ನೆಳೆಯುವಾಗ—ಎಂದರೆ, ಗಡಿ-ನಿರ್ಣಯ-ಕಾರ್ಯದಲ್ಲಿ, "ಮಂಗನ ರೊಟ್ಟೀ-ತೂಕ"ದ ನ್ಯಾಯದಂತೆ ಹೆಚ್ಚು-ಕಡಮೆ ಮಾಡಿ, ನ್ಯಾಯಾನ್ಯಾಯಗಳನ್ನು ಮಾಡುತ್ತಾರೆ.

ಕೆಲವರಿಗೆ ತಮ್ಮ "ತಲೆ-ಕತ್ತರಿಸಿ"ಕೊಂಡು, "ಕ್ರೋಪು" ಮಾಡಿಸ

ಬೇಕೆಂದು ತುಂಬಾ ಆಸೆ; ಆದರೆ, ಹಿರಿಯರ ಹೆದರಿಕೆ. ಆದಕ್ಕಾಗಿ ಸ್ವಲ್ಪ ಸ್ವಲ್ಪವಾಗಿ ಕೂದಲನ್ನು ಕ್ಷೌರಿಕನ ಕತ್ತರಿಗೆ ಆಹುತಿಯಾಗಿ ಕೊಡುತ್ತಾ, ಸಾಕ್ಷಿಗೆ ಮಾತ್ರ ಹಂದಿಯ ಬಾಲದಂತೆ ಚಿಕ್ಕ ಜುಟ್ಟನ್ನಿಡು ವರು. ಹಿರಿಯರು ಕಣ್ಮರೆಯಾದೊಡನೆ ಈ "ಹಂದಿ ಬಾಲ" ಅಥವಾ "ಸಾಕ್ಷಿಗೂಟ" ಕೂಡ ಅವರ ಹಿಂದೆಯೇ ಕಾಣೆಯಾಗಿ ಬಿಡುವುದು. ನಾಲ್ಕು ಮಂದಿ "ಕ್ರೋಪು-ವಾಲ"ರ ಜೊತೆಯಲ್ಲಿ ಜುಟ್ಟಿನ "ಆಸಾಮಿ" ಒಬ್ಬನಿದ್ದರೆ ಸಾಕು— ಎಲ್ಲರಿಗೂ ಆತನ "ಚೋಟಿ"ಯ ಮೇಲೇ ಕಣ್ಣು! ತುಂಟರಾದರೆ ಆತನು ನಿದ್ದೆ ಮಾಡಿಕೊಂಡಿರುವ ಸಮಯಸಾಧಿಸಿಯಾ ದರೂ, ಅದನ್ನು ಉಚ್ಚಾಟನೆ ಮಾಡಿಬಿಡುವರು. ಪಾಪ, ಆ ಪ್ರಾಣಿ ಎದ್ದು ನೋಡುವಾಗ— "ತುರ್ಪು ಔಟು!" ಕೆಲವರಿಗೆ ತಮ್ಮ ಜುಟ್ಟು ಎಷ್ಟೇ ಚಿಕ್ಕದಾಗಿದ್ದರೂ, ಅದು ಎಷ್ಟೇ ಉಪದ್ರವ ಕೊಟ್ಟರೂ, ಕಟ್ಟು ವುದಕ್ಕೇ ಬಾರದಿದ್ದರೂ, ಎಷ್ಟೇ "ಮಕಾರ"ಕ್ಕೊಳಗಾದರೂ ಅವರ ಮೇಲೆ ಮಮತೆ ಬಹಳ. ಅದನ್ನು ಟೊಪ್ಪಿಯೊಳಗೆ ಅಥವಾ ಮುಂಡಾಸಿನ ಅಡಿ ಯಲ್ಲಿ— ಕೋಳಿಪಿಳ್ಳೆಯನ್ನು ಬುಟ್ಟಿಯೊಳಗೆ ಮುಚ್ಚಿಟ್ಟಂತೆ— ಮುಚ್ಚಿ ಹಾಕಿಬಿಡುತ್ತಾರೆ.

ಹೀಗೆ ಸರ್ವಜನಪ್ರಿಯವಾದ ತಲೆಕೂದಲು, ಹಲವರ ಉದರ ಭರಣಕ್ಕೂ ಸಹಾಯಕವಾಗಿದೆ. ತಲೆಕೂದಲಿನ ದೆಸೆಯಿಂದ ಲೋಕ ದಲ್ಲಿ ಎಷ್ಟೋ ಮಂದಿ ತಮ್ಮ ಕುಟುಂಬಗಳನ್ನು ಸಾಕುತ್ತಿರುವರು; ಕ್ಷೌರಿಕರಂತೂ "ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ" ಎಂದಿದ್ದಾರಷ್ಟೆ; ಇನ್ನು ಇತರರ ವಿಷಯ ಹೇಳುವುದೇನು? ಕೂದಲಿನ ಸುಧಾರಣೆಗಾಗಿ, ಅದರ ಸೇವೆಗಾಗಿ ಎಷ್ಟೊಂದು "ಕಂಪೆನಿ"ಗಳು ಸುಗಂಧ ದ್ರವ್ಯಗಳ ತಯಾರಿಯಲ್ಲಿ, ತೈಲಗಳ ಸಿದ್ಧತೆಯಲ್ಲಿ, ಸೌಂದರ್ಯವರ್ಧಕ ಸಾಧನಗಳ ಶೋಧನೆಯಲ್ಲಿ, ಬಾಳು-ಕತ್ತರಿ ಮೊದಲಾದ ಉತ್ತಮೋತ್ತಮ ಶಸ್ತ್ರಗಳನ್ನು ಮಾಡುವುದರಲ್ಲಿ, ವಿಧವಿಧದ ಬಾಚಣಿಗೆಗಳನ್ನು ತಯಾ ರಿಸುವುದರಲ್ಲಿ ದುಡಿಯುತ್ತಿರುವುವು! ಉದುರುವ ಕೂದಲನ್ನು ತಡೆಯು ವುದಕ್ಕೆ, ನರೆತ ಕೂದಲನ್ನು ಕಪ್ಪು ಮಾಡುವುದಕ್ಕೆ, ಗಿಡ್ಡಕೂದಲನ್ನು ಉದ್ದ ಬೆಳೆಯಿಸುವುದಕ್ಕೆ, ಸಾಣೆತಲೆಯಲ್ಲಿ ಕೂದಲನ್ನು ಹುಟ್ಟಿಸು

ವುದಕ್ಕೆ—ತಯಾರಿಸಲ್ಪಟ್ಟ ಮತ್ತು ತಯಾರಿಸಲ್ಪಡುತ್ತಿರುವ ಔಷಧಿಗಳು ಮತ್ತು ಸಾಧನಗಳು ಒಂದೆರಡಲ್ಲ, ನೂರಾರು! ಕೇಶರಂಜಿನಿ, ಕುಂತಲ ಕೌಮುದಿ, ಮನೋಲ್ಲಾಸಿನಿ, ರೋಮನಾಶಿನಿ, ಕೇಶವರ್ಧಿನಿ, ಕೇಶನಾಶಿನಿ ಇತ್ಯಾದಿ, ಇತ್ಯಾದಿ.......

ಇಂತಹ ಮಹಿಮಾತೀತವಾದ ತಲೆಕೂದಲು ಕೇವಲ ಮನುಷ್ಯರಿಂದ ಮಾತ್ರವಲ್ಲ, ದೇವತೆಗಳಿಂದಲೂ ಮನ್ನಣೆ ಹೊಂದಿರುವುದೆಂದರೆ ಆಶ್ಚರ್ಯವಲ್ಲ. ಮನುಷ್ಯನ ಅಂಗಗಳಲ್ಲೆಲ್ಲಾ ತಲೆಕೂದಲಿಗೇ ಪ್ರಥಮ ಸ್ಥಾನವನ್ನು ಕೊಡುವುದಕ್ಕಾಗಿ ಬ್ರಹ್ಮನು ಕೂದಲನ್ನು ಉತ್ತಮಾಂಗವಾದ ತಲೆಯ ಮೇಲೆಯೇ ಸ್ಥಾಪಿಸಿರುವನು. ತ್ರಿಮೂರ್ತಿಗಳಲ್ಲೊಬ್ಬರೂ ಈ ತನಕ ತಲೆ ಕತ್ತರಿಸಿಕೊಳ್ಳಲಿಲ್ಲ. ಬ್ರಹ್ಮನು ಮಾತ್ರ ಒಂದು ಸಲ "ಸೇಂಪ್ಲ್" ನೋಡುವುದಕ್ಕಾಗಿ ಐದು ತಲೆಗಳ ಪೈಕಿ ಒಂದನ್ನು ಕತ್ತರಿಸಿಕೊಂಡಿದ್ದನಂತೆ; ಆದರೆ, ಈಗ ಇರುವ ನಾಲ್ಕು ತಲೆಗಳಲ್ಲಿ ತುಂಬಾ ಕೂದಲು ಬೆಳೆಯಿಸಿಕೊಂಡಿದ್ದಾನೆ. ಶಿವನಿಗೆ ಹೆಸರೇ ಇದೆ "ಜಟಾಜೂಟಿ" ಎಂದು. "ಕೇಶ"ವನೆಂಬ ಹೆಸರನ್ನು ವಿಷ್ಣುವು ಮೊದಲೇ "ರೆಜಿಸ್ಟರ್" ಮಾಡಿಸಿಕೊಂಡಿದ್ದಾನೆ; "ಕೇಶ"ವಿಲ್ಲದಿರುತ್ತಿದ್ದರೆ ಅವನು ಬರೇ "ಶವ" ವಾಗುತ್ತಿದ್ದನು! ತ್ರಿಮೂರ್ತಿಗಳೇ ಹೀಗೆ ತಲೆಕೂದಲಿನಲ್ಲಿ ಸಿಲುಕಿಕೊಂಡಿರುವಾಗ, ಇನ್ನಿತರ ಚಿಲ್ಲರೆ ದೇವತೆಗಳ ಲೆಕ್ಕವೆಲ್ಲಿ!

ಒಂದೇ ಮಾತಿನಲ್ಲಿ ಹೇಳುವುದಿದ್ದರೆ--ತಲೆಕೂದಲು ನಮಗೂ ಬೇಕು, ನಿಮಗೂ ಬೇಕು, ಅವರಿಗೂ ಬೇಕು, ನಮಗೂ, ನಿಮಗೂ ಅವರಿಗೂ, ಎಲ್ಲರಿಗೂ ಬೇಕು.

೪. ಸಂಭಾಷಣೆ

ಸಂಭಾಷಣೆಯು ಮನುಷ್ಯನ ಬೆಲೆಯನ್ನು, ಆತನ ಸಭ್ಯತೆಯನ್ನು ಅಳೆಯುವ ಮುಖ್ಯ ಸಾಧನ. ಮನುಷ್ಯನು ಮಾತನಾಡದ ಹೊರತು ಅವನ ಗುಣದೋಷಗಳ ಹಾಗೂ ಪ್ರವೃತ್ತಿಗಳ ಪರಿಚಯವು ಸರಿಯಾಗಿ ಸಿಗಲಾರದು. ಬಾಯಿಬಿಟ್ಟು ನಾಲ್ಕು ಮಾತನಾಡಿದನೆಂದರೆ, ಅವನು ಪ್ರಾಣಿಯೋ, ಮನುಷ್ಯನೋ, ಮೂರ್ಖನೋ, ಪಂಡಿತನೋ ಎಂದು ಅರಿಯಬಹುದಾಗಿದೆ.

"ನಮಸ್ಕಾರ! ಏನು? ಕ್ಷೇಮವೇ? ಏನು ವಿಶೇಷ?" ಇತ್ಯಾದಿ ಶಬ್ದಗಳು ಸಂಭಾಷಣೆಯ "ಶ್ರೀಗಣೇಶಾಯನಮಃ". ಅಂತೆಯೇ, "ಹಾಗಾದರೆ ಕಾಣುವ, ಮಾತಾಡೋಣ, ಬರುತ್ತೇವೆ, ನಮಸ್ಕಾರ" ಮೊದಲಾದ ಮಾತುಗಳು ಮಾತುಕತೆಯ "ಪೂರ್ಣಾಹುತಿ", ಅಥವಾ "ಮಂಗಳಾರತಿ." ಒಬ್ಬರನ್ನೊಬ್ಬರು "ಭೇಟಿ"ಯಾಗುವಾಗಲೂ, ಅಗಲುವಾಗಲೂ ಸಾಮಾನ್ಯವಾಗಿ ನಮಸ್ಕಾರದ ಪ್ರಯೋಗವಾಗದೆ ಇಲ್ಲ. ಮಾತನಾಡಲು ವಿಷಯವೇನೂ ದೊರೆಯದಿದ್ದರೆ, ನಮಸ್ಕಾರದ ಮಂಗಳಾರತಿಯಾಗುವ ತನಕ ಸಂಭಾಷಣಾಕರ್ತರಿರ್ವರೂ ಒಬ್ಬರನ್ನೊಬ್ಬರು "ಮತ್ತೇನು ವಿಶೇಷ? ಇನ್ನೇನು ವಿಶೇಷ?" ಎಂದು ಕೇಳುವುದು ರೂಢಿಯಾಗಿಬಿಟ್ಟಿದೆ. ನನ್ನೊಬ್ಬ ಮಿತ್ರರಿಗೆ ಈ ಹುಚ್ಚು ಬಹಳ ಹೆಚ್ಚು. ನನಗೆ, ಅವರ "ಮತ್ತೇನು ವಿಶೇಷ"ಕ್ಕೆ ಉತ್ತರ ಕೊಟ್ಟುಕೊಟ್ಟು ಸಾಕಾಗಿ ಹೋಯಿತು; ಕೊನೆಗೆ ಒಂದು ಕಾಗದದಲ್ಲಿ "ಏನೂ ವಿಶೇಷವಿಲ್ಲ" ಎಂದು ಬರೆದಿಟ್ಟುಕೊಂಡು, ಅವರು ಕೇಳಿದೊಡನೆಯೇ ಈ ಕಾಗದವನ್ನು ಅವರ ಕಣ್ಣೆದುರಿಗೆ ಎತ್ತಿ ಹಿಡಿಯತೊಡಗಿದೆ. ಈಗೀಗ ಅವರ "ಮತ್ತೇನು ವಿಶೇಷ"ವು ದೂರವಾಗಿದೆ.

ನಮಸ್ಕಾರ ಮಾಡುವ ಕ್ರಮವು ಒಬ್ಬೊಬ್ಬರಲ್ಲಿ ಒಂದೊಂದು ವಿಧ. ಕೆಲವರು ಎರಡು ಕೈಗಳನ್ನೂ ಜೋಡಿಸಿ ಹಣೆಗೊತ್ತಿ ಭಕ್ತಿಪೂರ್ವಕವಾಗಿ ನಮಸ್ಕಾರ ಮಾಡುವರು; ಕೆಲವರು ಕೈಬೆರಳುಗಳ ತುದಿಗಳನ್ನು ಮಾತ್ರ

ಜೋಡಿಸಿ ಎದೆಯ ವರೆಗೆ ತಂದು, "ಅಯ್ಯೋ, ಇವರಿಗೆ ನಮಸ್ಕಾರ ಕೊಡ ಬೇಕಾಯಿತಲ್ಲಾ!" ಎಂಬ ಬೇಸರದಿಂದಲೋ ಎಂಬಂತೆ ಹೆಸರಿಗೆ ಮಾತ್ರ ನಮಸ್ಕಾರ ಸಲ್ಲಿಸುವರು; ಹಲವರು ಮುಖಕ್ಕೆ ಬಳಿದ "ಸ್ನೋ-ಪೌಡರ್"ಗಳ ವಾಸನೆಗೆ ಎರಗುವ ನೊಣಗಳನ್ನೋಡಿಸಲು ಕೈ ಮೇಲೆತ್ತಿದಾಗ ಅವರನ್ನು ನೋಡಿದವರು, ತಮಗೆ ನಮಸ್ಕಾರ ಬಂತೆಂದು ತಿಳಿದು, ಪ್ರತಿ ನಮಸ್ಕಾರ ಮಾಡುವರು; ಒಬ್ಬೊಬ್ಬರು ಒಂದೇ ಬೆರಳಿನಿಂದ "ಹೊಡೆದೆ ಸ್ವಾಮೀ" ಎಂದು ನಮಸ್ಕಾರದ ಹರಕೆ ತೀರಿಸುವರು; ಕೆಲಕೆಲವರು ಇತರರಿಂದ ಪಡೆಯುವುದಕ್ಕೋಸ್ಕರವೇ ನಮಸ್ಕಾರ ಮಾಡುವರು. ಕೆಲವು ಮಹನೀಯರುಗಳಿಗೆ ಪ್ರತಿ-ನಮಸ್ಕಾರ ಕೊಡುವುದೆಂದರೆ, ಅಭಿಮಾನಕ್ಕೆ ಸ್ವಲ್ಪ ಕುಂದು, ಮರ್ಯಾದೆಗೆ ಕಡಮೆ, ಪದವಿಗೆ ಕೊರತೆ. ಆದುದ ರಿಂದ ಬಂದ ನಮಸ್ಕಾರಗಳನ್ನು "ಒಳಗೇ ಹಾಕಿಬಿಟ್ಟು" ತಲೆಯನ್ನು ಬೇಕಾದರೆ ಒಂದು "ಡಿಗ್ರಿ"ಯಷ್ಟು ತಗ್ಗಿಸುವರು. ಅಂತೂ ದೊಡ್ಡ ಮನುಷ್ಯರಿಗೆ ನಮಸ್ಕಾರ ಕೊಟ್ಟರೆ ಅದರ ರಶೀದಿ ಸಿಗುವುದು ಸ್ವಲ್ಪ ಅಪರೂಪ.

ನಮಸ್ಕಾರವಿಲ್ಲದೆ ಯಾವ ಕಾರ್ಯವೂ ಕೈಗೂಡಲಾರದು. ಅದು ಕಾರ್ಯಸಾಧಕರ ಕೈಗೊಂಬೆ: ನೌಕರಿ ದೊರಕಿಸಿಕೊಳ್ಳಬೇಕಾದರೆ, "ಕೋರ್ಟು-ಕಚೇರಿ"ಗಳಲ್ಲಿ ಕೆಲಸ ನಡೆಯಬೇಕಾದರೆ, ಸಾಲ ಸಿಗಬೇಕಾ ದರೆ, ದೊಡ್ಡವರ ಕೃಪಾಕಟಾಕ್ಷಕ್ಕೆ ಪಾತ್ರನಾಗಬೇಕಾದರೆ, ನಮಸ್ಕಾರವು ಬೇಕೇ ಬೇಕು. ಒಂದೊಂದು ಸಲ ನಮಸ್ಕಾರದ ಅರ್ಥವು ಅನರ್ಥ ವಾಗುವುದೂ ಇದೆ. ನಮ್ಮೂರಿನ ಪಟೇಲರು ಬಹಳ "ಜಬರದಸ್ತಿ" ಜನ. ಕ್ಷೌರ ತೆಗೆಯಿಸುವುದಕ್ಕಾಗಿ ಕ್ಷೌರಿಕನಿಗೆ ಹೇಳಿ ಕಳುಹಿಸಿದರು. ಆ ಪುಣ್ಯಾತ್ಮ ಬಹಳ ತಡಮಾಡಿ ಬಂದ. ರಾಯರಿಗೆ ಸಿಟ್ಟು ಬಂದು, "ಏನೋ, ನಿನಗೆ ಈಗ ತಾನೇ ಮುಹೂರ್ತ ಬಂತೊ?" ಎಂದು ಗದರಿಸಿ ದರು. ಕ್ಷೌರಿಕ ಸ್ವಲ್ಪ ಮುದುಕ; ಶ್ರದ್ಧಾಭಕ್ತಿಗಳಿಂದ ಬಗ್ಗಿ ನಮಸ್ಕಾರ ಮಾಡುವುದು ಅವನ ಅಭ್ಯಾಸ. ನಮಸ್ಕಾರ ಮಾಡುವಾಗ ಕೈಗಳಲ್ಲಿ ಏನೂ ಇರಬಾರದಂತೆ. ಅವನು ಪಾಪ, ನಮಸ್ಕಾರ ಮಾಡುವುದಕ್ಕೆಂದು, ಕಂಕುಳಲ್ಲಿದ್ದ ದೊಣ್ಣೆಯನ್ನು ಬದಿಗಿರಿಸುವುದಕ್ಕಾಗಿ ದೊಣ್ಣೆಗೆ ಕೈಹಾಕಿದ.

ರಾಯರು ಇದನ್ನು ಕಂಡು, "ಬಾಲ ಮುಡಚಿ" ಒಳಗೆ "ಪರಾರಿ!"........ ಸದ್ಯಕ್ಕೆ ನಮಸ್ಕಾರಗಳ ಪರಿಚಯವು ಇಷ್ಟೇ ಸಾಕು. ಪುನಃ ಸಂಭಾಷಣೆಗೆ ಹೊರಡೋಣ.

ಒಬ್ಬೊಬ್ಬರ ಸಂಭಾಷಣೆ ಒಂದೊಂದು ರೀತಿ. ಮುದುಕರ ಸಂಭಾಷಣೆ ಅವರಂತೆಯೇ ಸ್ವಲ್ಪ ಹಳೆ-ಮಾದರಿಯದು. ಅವರು ತಮ್ಮ ಹಳೇ ಪುರಾಣಗಳನ್ನೆಲ್ಲಾ ಬಿಚ್ಚಿ, ಮಾಂಧಾತರಾಯನ ಕಾಲದ ಕಥೆಗಳೊಡನೆ ಸಾಮಯಿಕ ಬೀದಿ-ಪುರಾಣಗಳನ್ನು ಸೇರಿಸಿ ಸಂಭಾಷಣೆಗೆ "ಶ್ರೀಗಣಾಧಿಪತಿ" ಹಾಕಿ ಕುಳಿತರೆಂದರೆ, ಕಲ್ಲು ತುಂಬಿಸಿದ ಗಾಡಿಯಂತೆ ಅದು ಉದ್ದಕ್ಕೆ, ನಿದಾನವಾಗಿ ಸಾಗುತ್ತಾ ಹೋಗುವುದು. ಮಾತಿನ ನಡುವೆ ಮನೆಗೆ ಬೆಂಕಿ ಹಿಡಿದರೂ, ಅವರ ಮಾತಿನ ಗಾಡಿ ನಿಲ್ಲುವಂತಿಲ್ಲ. ಹಳೇ ಪದ್ಧತಿಗಳನ್ನು ಹೊಗಳುವುದು, ನವಯುವಕರ ರೀತಿ-ನೀತಿಗಳನ್ನು ತೆಗಳುವುದು, ಗಾಂಧಿಯವರ ವಿಷಯ ಏನಾದರೂ ಹೇಳುವುದು, ಮನೆ ಆರ್ಥಿಕ ಸ್ಥಿತಿಯ ಕಷ್ಟಗಳನ್ನು ದೂರಿಕೊಳ್ಳುವುದು—ಇತ್ಯಾದಿ ವಿಷಯಗಳೇ ಅವರ ಮಾತುಕತೆಯ ಮುಖ್ಯ ಪ್ರಕರಣಗಳು. ಹಳೇ ರಾಜನು ಸತ್ತು ಹೊಸ ರಾಜನು ಪಟ್ಟಕ್ಕೆ ಬಂದ ವಿಷಯವು ಲೋಕವಿದಿತವಾಗಿದ್ದರೂ, ಈ ಪುಣ್ಯಾತ್ಮರಿಗೆ ಗೊತ್ತಾಗುವುದು ನಾಲ್ಕು ತಿಂಗಳು ಕಳೆದ ಮೇಲೆ! ಅಬಿಸೀನಿಯದ ರಾಜನು ಸೋತು ಇಂಗ್ಲೆಂಡಿಗೆ "ಪರಾರಿ"ಯಾಗಿ ಒಂದೂವರೆ ತಿಂಗಳು ಉರುಳಿ ಹೋಗಿದೆ; ಆದರೆ, ಮುದುಕರ "ಗಜೇಟು"ಗಳಲ್ಲಿ— "ಇಟೆಲಿಯ ಸೈನಿಕರನ್ನು ಅಬಿಸೀನಿಯದ ಸೈನಿಕರು ಓಡಿಸಿ ಬಿಟ್ಟರಂತೆ; ಅಬಿಸೀನಿಯದ ರಾಜನು ಪ್ರಚಂಡ ಯುದ್ಧ ಮಾಡುತ್ತಾನಂತೆ; ಜರ್ಮನಿ, ಅಮೇರಿಕ, ಜಪಾನು, ಆಫ್ರಿಕ, ಹಿಮಾಲಯ, ಇಂಡಿಯ, ಸ್ವದೇಶ, ವಿದೇಶ, ಪರದೇಶ ಮೊದಲಾದ ದೇಶಗಳಿಂದ ನೂರಿನ್ನೂರು ಸೈನಿಕರು ದೋಣಿಗಳಲ್ಲಿ ಅಬಿಸೀನಿಯಕ್ಕೆ ಬಂದಿಳಿದಿದ್ದಾರಂತೆ; ಇಟೆಲಿಯ ಸೈನಿಕರೆಲ್ಲಾ ವಿಮಾನ, ಮೋಟರು, ಗಾಡಿಗಳಲ್ಲಿ ಹತ್ತಿ ಸಿಕ್ಕಸಿಕ್ಕಲ್ಲಿ ಓಡಿಬಿಟ್ಟರಂತೆ...........ಹೀಗಾದರೆ, ಒಟ್ಟಾರೆಮೇಲೆ ನಾವು ಬದುಕುವುದು ಹೇಗೆಂದು ಗೊತ್ತಾಗುವುದಿಲ್ಲ. ಕಳೆದ ವರ್ಷ ಇಬ್ಬರು ಮಕ್ಕಳಿಗೆ ಮದುವೆ ಮಾಡಿಯಾಯಿತು; ಈ ವರ್ಷ ಒಬ್ಬನಿಗೆ ಉಪನಯನವಾಗಬೇಕು,

ಇನ್ನೊಬ್ಬನಿಗೆ ನಾಮಕರಣವಾಗಬೇಕು........ಗಾಂಧಿಯ ಹೆಂಡತಿ ಸತ್ತು ಹೋದಳಂತೆ. ಪಾಪ, ಮುದುಕ ಒಬ್ಬನೇ. ಒಟ್ಟಾರೆ, ಹೆಂಡತಿಯಿಲ್ಲದ ಮೇಲೆ ಬದುಕಿ ಪ್ರಯೋಜನವಿಲ್ಲಪ್ಪ! ಎರಡನೇ ಮದುವೆಯಾಗುತ್ತಾನಂತೆ ಎಂತ ಮೊನ್ನೆ ರಾಮ ಭಟ್ಟರು ಹೇಳುತ್ತಿದ್ದರಂತೆ........ಒಟ್ಟಾರೆ ಈ ಗಾಂಧಿ ಬಂದು ನಮ್ಮ ಜಾತಿ-ನೀತಿಗಳನ್ನೆಲ್ಲಾ "ಲಗಾಡಿ" ಕೊಟ್ಟ. ಹೊಲೆಯರನ್ನು ಯಾವಾಗ ದೇವಸ್ಥಾನಕ್ಕೆ ನುಗ್ಗಿಸಿದನೋ ಆಗಲೇ ಹೋಯಿತು ಸ್ವಾಮಿ, ಎಲ್ಲಾ ಹೋಯಿತು........" ಇತ್ಯಾದಿ ಅಂತೆ-ಕಂತೆಗಳ "ಅಮಟಾಡಿ-ಸಂತೆ" ವರ್ತಮಾನಗಳು ಬಿಸಿಬಿಸಿಯಾಗಿ, ನಿದಾನವಾಗಿ ಮುದ್ರಿಸಲ್ಪಡುತ್ತಾ ಇರುವುವು. ಹಲವು ಹಳ್ಳಿಯ ಮುದುಕರು ಮೂಗಿನ ತುದಿಗೆ ಕನ್ನಡಕ ಏರಿಸಿ, ಅತ್ಯಂತ ಶ್ರದ್ಧಾಕುತೂಹಲಗಳಿಂದ ಈಗಲೂ ಕಳೆದ 1914–18ರ ಮಹಾಯುದ್ಧದ "ಗಜೇಟು"ಗಳನ್ನೋದಿ, ಸಂತೋಷ, ದುಃಖ, ಪಶ್ಚಾತ್ತಾಪಗಳನ್ನು ವ್ಯಕ್ತಪಡಿಸುತ್ತಿರುವರು!

ಮುದುಕಿಯರ ಸಂಭಾಷಣೆಯು ಇನ್ನೊಂದು ರೀತಿ. ತಮಗೆ ಮದುವೆಯಾದುದು, ತಮ್ಮ ಗಂಡಂದಿರಿಗೆ ಮದುವೆಯಾದುದು, ಮದುವೆಗಿಂತ ಮೊದಲು ತಮ್ಮನ್ನು ನೋಡುವುದಕ್ಕಾಗಿ ಜನರು ಬರುತ್ತಿದ್ದುದು, ಮದುವೆ ದಿಬ್ಬಣದ ಗದ್ದಲ, ಮನೆಯಲ್ಲಿ ಸೊಸೆಯಂದಿರ ಕಾಟ, ಮಕ್ಕಳು ಮರಿಗಳ ಪಿಕಲಾಟ, ನೆರೆಮನೆಯವರ ಕಚ್ಚಾಟ—ಇವೇ ಮೊದಲಾದ ನೂರೊಂದು ಗಹನವಿಷಯಗಳು ಬೆಳಗಿನಿಂದ ಸಾಯಂಕಾಲದ ತನಕ ಅವರ "ಮೀಟಿಂಗಿ"ನಲ್ಲಿ ಚರ್ಚಿಸಲ್ಪಟ್ಟು, ಕೆಲವು ಮಹತ್ತಾದ ಠರಾವುಗಳು ಮಂಜೂರಾಗುವುವು. ಒಂದೇ ವಿಷಯವನ್ನು ದಿನದಲ್ಲಿ ಎಷ್ಟು ಸಲ ಮಾತನಾಡಿದರೂ ಮುದುಕಿಯರಿಗೆ ಬೇಸರಬರುವಂತಿಲ್ಲ, ಅವರ ಪುರಾಣಗಳೂ ಮುಗಿಯುವಂತಿಲ್ಲ. ಒಬ್ಬೊಬ್ಬರೇ ಕುಳಿತಾಗಲೂ ಅವರ ಬಾಯಿಗೆ ವಿಶ್ರಾಂತಿ ಸಿಗುವುದು ವಿರಳ; ಮಳೆಗಾಲದ ಕಪ್ಪೆಗಳಂತೆ ವಟಗುಟ್ಟುತ್ತಲಿರುವುದೂ, ಬಿಸಿಲಿಗಿಟ್ಟ ಹರಳು ಬೀಜದಂತೆ ಸಿಡಿದು ಬೀಳುವುದೂ ಕೆಲವು ಮುದುಕಿಯರ ಸ್ವಭಾವ.

ಮದುವೆಗೆ ಬಳೆದ ಹುಡುಗ, ಹುಡುಗಿಯರಿಗೆ ಮದುವೆಗೆ ಸಂಬಂಧಪಟ್ಟ ಮಾತುಗಳನ್ನಾಡಲು, ಯಾ—ಕೇಳಲು ತುಂಬಾ ಆತುರ; ಮದು

ವೆಯ ಪ್ರಸ್ತಾಪವನ್ನೆತ್ತಿ ಹಿರಿಯರು ಮಾತನಾಡುತ್ತಿರುವಾಗ ಬಾಗಿಲ ಮರೆಯಲ್ಲಿ ನಿಂತು ಆಲಿಸುವ ಹುಡುಗಿಯರೇ ಇದಕ್ಕೆ ನಿದರ್ಶನ. ವಧೂವರರ ಪ್ರಥಮ ಸಂಭಾಷಣೆಯ ಕಾಲದಲ್ಲಿ ಮಾತನ್ನು ಮೊದಲು ಯಾರು ಪ್ರಾರಂಭಿಸಬೇಕು, ಹೇಗೆ ಪ್ರಾರಂಭಿಸಬೇಕು—ಎಂಬುದು ಇಬ್ಬರಿಗೂ ದೊಡ್ಡದೊಂದು ಸಮಸ್ಯೆ. ದೃಷ್ಟಿಯುದ್ಧಗಳೂ, ನಗುವಿನ ಬಗೆಗಳೂ, ಅಂಗಚೇಷ್ಟೆಗಳೂ ಈ ಸಂಭಾಷಣೆಯ ಪ್ರಾರಂಭದ ಸೂಚನೆಗಳೆನ್ನಬಹುದು. ಹೆಚ್ಚಾಗಿ, ವರನೇ ಮಾತಿಗೆ ಮೊದಲು ಮಾಡುವನು. ಆದರೆ ಈಗಿನ ಕಾಲದಲ್ಲಿ ಮದುವೆಯ ಮೊದಲೇ ಈ ಗಲಾಟೆಗಳೆಲ್ಲಾ ಮುಗಿದು ಹೋಗಿ, ಮಾರ್ಗವು ಸುಗಮವಾಗಿಬಿಡುವುದು. ಗಂಡ ಹೆಂಡಿರೊಳಗೆ ಕಾರಣಾಂತರದಿಂದ ಜಗಳೆಬಂದು, ಕೊನೆಗೆ ಸಂಧಿಯಾಗುವ ಕಾಲದಲ್ಲಿ, ಮೊದಲಿನ ಮಾತು ಯಾರ ಪಾಲಿನದೆಂಬುದು "ಸೋಡ್ತಿ"ಯ ಚೀಟಿನಂತೆ ಕುತೂಹಲಾಸ್ಪದವಾಗಿರುವುದು. ತಾನೇ ಮೊದಲು ಮಾತಾಡಿದರೆ, ತಪ್ಪನ್ನೊಪ್ಪಿಕೊಂಡು ಹೆಂಡತಿಗೆ ಶರಣುಹೊಡೆದಂತಾಗುವುದರಿಂದ ಹೆಂಡತಿಯೇ ಹತ್ತಿರಬಂದು, ಗಲ್ಲವನ್ನು ಹಿಡಿದು, "ಮಾತಾಡಬಾರದೇನೊ। ಮಾರಮಣನೆ ॥" ಎಂದು ಮೊದಲು ಮಾತಾಡಿಸಲೆಂದು ಗಂಡನ ಇಚ್ಛೆ; "ಅವರೇ ಮೊದಲು ಮಾತಾಡಿಸಬಾರದೇಕೆ? ....'ಕೋಪವೇತಕೆ ರಮಣೀಮಣಿ।' ಎಂದು ಕೇಳಬಾರದೇ" ಎಂದು ಹೆಂಡತಿಯ ಛಲ. ಆದರೆ, ಇಬ್ಬರಿಗೂ ಮಾತನಾಡಿಕೊಳ್ಳಬೇಕೆಂದು ತುಂಬಾ ಆತುರ. ಅದಕ್ಕಾಗಿ ಇಬ್ಬರೂ ತಮ್ಮಷ್ಟಕ್ಕೇ ಪರಸ್ಪರ ಕೇಳುವಂತೆ ಗಟ್ಟಿಯಾಗಿ ಮಾತಾಡಿಕೊಳ್ಳುವುದು, ಇಲ್ಲವೆ ಇತರರನ್ನುದ್ದೇಶಿಸಿ ಮಾತಾಡುವುದು, ಅಥವಾ ಮಕ್ಕಳ ಮೂಲಕ "ದಲಾಲಿ-ಯಾ-ಸಂಧಾನ" ನಡೆಯಿಸುವುದು, ಅಲ್ಲವಾದರೆ "ಆಫೀಸರ"ರಂತೆ ಕಾಗದಪತ್ರಗಳ ಮೂಲಕ "ಕರೆಸ್ಪೋಂಡೆನ್ಸ್" ನಡೆಯಿಸುವುದು—ಈ ರೀತಿಯ ಉಪಾಯಗಳನ್ನು ಮಾಡಬೇಕಾಗುವುದು. ಪ್ರಣಯ ಕೋಪದ ಸಂದರ್ಭದಲ್ಲಿ ಸತಿಪತಿಯರೊಳಗಿನ ಮಾತುಕತೆಗೆ ಮಕ್ಕಳಿಗಿಂತ ಮಿಗಿಲಾದ "ಟೆಲಿಫೋನ್" ಬೇರೊಂದಿರಲಾರದು.

ಉಡುಗೆ-ತೊಡುಗೆಗಳ ವಿಷಯ ಮಾತನಾಡುವುದೆಂದರೆ ಹೆಂಗುಸ

ರಿಗೆ ಬಹಳ ಪ್ರೇಮ. ಇತರ ಯಾವ ವಿಷಯುಗಳೂ ಅವರಿಗೆ ಅಷ್ಟೊಂದು ರುಚಿಸಲಾರವು. ಧಾರ್ಮಿಕ ವಿಷಯ ಮಾತಾಡಿದರೆ ಅವರು ನಿಟ್ಟು ಸಿರು ಬಿಡುವರು; ಪ್ರೇಮದ ವಿಷಯ ಮಾತಾಡಿದರೆ ಹಲ್ಲುಕಿಸಿಯು ವರು; ಕಲೆಯ ಮಾತು ಬಂದಾಗ ಆಕಳಿಸತೊಡಗುವರು; ವಿಜ್ಞಾನದ ಮಾತೆತ್ತಿದರೆ ತೂಕಡಿಸಹತ್ತುವರು; ಆದರೆ, ಸೀರೆ-ಕುಪ್ಪಸಗಳ ಪ್ರಸ್ತಾಪ ವೆತ್ತಿದರೆ ಸಾಕು, ಊಟ ನಿದ್ದೆಗಳನ್ನು ಬಿಟ್ಟು ಮಾತಾಡುತ್ತಾ ಕುಳಿತು ಬಿಡುವರು........ಗಂಡನು ಹೊಸ ಸೀರೆ ತಂದಾಗ, ತಂದ ಸೀರೆ ಮನಸ್ಸಿ ಗೊಪ್ಪದಾಗ, ಒಪ್ಪಿದ ಸೀರೆ ಹಳೆಯದಾದಾಗ, ಸೀರೆ ಸೊಗಸಾಗಿದ್ದು ಸೆರಗಿನ ಅಂಚು ಮಿರುಗದಿದ್ದಾಗ, ನೆರೆಮನೆಯ ಹೆಂಗುಸರ ಸೀರೆಗಳು ತಮ್ಮ ಸೀರೆಗಳಿಗಿಂತ ಚಂದವಾಗಿ ಕಂಡಾಗ, ಹೊಲಿಸಿದ ಕುಪ್ಪಸವು ಮನಸ್ಸಿಗೆ ಹಿಡಿಯದಿದ್ದಾಗ, ಕೇಳಿಕೇಳಿದಾಗ ಚಿನ್ನಾಭರಣಗಳನ್ನು ಒದ ಗಿಸಿ ಕೊಡದಿದ್ದಾಗ, ಇತರ ಹೆಂಗುಸರ ಕಿವಿಗಳಲ್ಲಿ ಕಿಡಿಯೋಲೆ-ಲೋಲಾ ಕುಗಳು ಮಿರುಗುತ್ತಿರಲು, ತಮ್ಮ ಕಿವಿಗಳಲ್ಲಿ ಮಾತ್ರ ಜಟಕಾ ಗಾಡಿಯ ಇಬ್ಬದಿಗಳಲ್ಲಿ ಮಿಣಮಿಣನೆ ಉರಿಯುವ "ಲಾಟಾನು"ಗಳಂತಿರುವ ಹಳೆಯ ಓಲೆಗಳು ತೂಗಾಡುತ್ತಿರುವುದನ್ನು ಕಂಡೂ ತಟಸ್ಥರಾಗಿ ಕುಳಿತ ತಮ್ಮ ಗಂಡಂದಿರನ್ನು ಕಂಡಾಗ—ಹೆಂಗುಸರ ಮಾತಿನ "ಫೋರ್ಸೇ ಫೋರ್ಸು!" ಈ "ಫೋರ್ಸಿ"ನ ಸಿಟ್ಟು ಗಂಡನ ಮೇಲೆ, ಪೆಟ್ಟು ಮಕ್ಕಳ ಬೆನ್ನಿನ ಮೇಲೆ!

ಹೆಂಗುಸರ ಮಾತುಕತೆಗಳ ಮುಖ್ಯ ರಂಗಸ್ಥಳವೆಂದರೆ ಬಾವಿಕಟ್ಟೆ. ಹಳ್ಳಿಯ ಹೆಂಗುಸರಿಗಂತೂ ಬಾವಿಕಟ್ಟೆಯೇ "ಲೇಡೀಸ್ ಕ್ಲಬ್." ಅಲ್ಲಿ ಮನೆಮನೆಯ ಹೆಂಗುಸರೆಲ್ಲಾ "ಜಮೆ"ಯಾಗುವರು. ಆ ದಿನದ ಬಯ ಲಾಟದ ಪೀಠಿಕೆ-ಯಾ-ಕೇಳಿ ಹೊಡೆಯುವುದು ಅಲ್ಲಿ; ನಾಟಕದ ನಾಂದೀ ಸಂಧಿಯು ಪ್ರಾರಂಭವಾಗುವುದು ಅಲ್ಲಿ; ಊರಿನ ರಾಜಕೀಯ, ಸಾಮಾ ಜಿಕ, ಕೌಟುಂಬಿಕ ವಿಷಯಗಳ ಚರ್ಚೆಗಳು, ಉಪ್ಪು-ಹುಳಿ-ಮೆಣಸು-ಕೊತ್ತುಂಬರಿ, ಜೀರಿಗೆಗಳ "ಬಾಜಾರು"ಧಾರಣೆಯ ಏರಿಳಿತಗಳ ಟೀಕೆ-ಟಿಪ್ಪಣಿಗಳು, ಮದುವೆ-ಮುಂಜಿ-ಭೋಜನ-ಶೋಭನ-ಸಾವು-ನೋವುಗಳ ಆಗು-ಹೋಗುಗಳ ತರ್ಕ-ವಿತರ್ಕಗಳು ಆ ಬಾವಿಕಟ್ಟೆಯ "ಕೌನ್ಸಿಲು"

ಅಥವಾ "ಎಸೆಂಬ್ಲಿ"ಯಲ್ಲಿ, ಬಲು ದೀರ್ಘವಾಗಿ, ಸರಸವಾಗಿ ನಡೆಯುವುವು. ಬಾವಿ-ಕಟ್ಟೆಗೆ ಯಾವ ಹೆಸರನ್ನೂ ಕೊಡಬಹುದಾಗಿದೆ—ಹೆಂಗುಸರ ಗ್ರಾಮಪಂಚಾಯತಿ, ಹರಟೆಗಾರರ "ಕ್ಲಬ್ಬು", ಊರ ಮುಖಂಡರ ಕೂಟದ ಕಟ್ಟೆ, ಅಥವಾ "ಹೌಸ್ ಓಫ್ ಕೋಮನ್ಸ್-ಯಾ-ಲೋರ್ಡ್ಸ್." ಇಲ್ಲಿ ಎಲ್ಲಾ ಜಾತಿಗಳ, ಎಲ್ಲಾ ರೀತಿಯ, ಬೇರೆ ಬೇರೆ ರೂಪು-ಸ್ವಭಾವ-ಹಾವಭಾವ-ಆಕಾರ-ವಿಕಾರಗಳ ಹೆಂಗುಸರು ಒಟ್ಟುಗೂಡುವರು. ಕೋಳಿ ಕೂಗಿದಂದಿನಿಂದ, ಕಾಗೆ ಗೂಡನ್ನು ಸೇರುವ ವರೆಗಿನ ಎಲ್ಲಾ ಘಟನೆಗಳೂ, ಒಲೆಬೂದಿ ತೆಗೆಯುವ ಮಹಾಕಾರ್ಯದಿಂದ ಪ್ರಾರಂಭವಾಗಿ ಹಾಸಿಗೆ ಬಿಡಿಸುವ ಮುಕ್ತಾಯಕಾರ್ಯದ ವರೆಗಿನ ಎಲ್ಲಾ ಕಾರಭಾರಗಳೂ ಅಕ್ಷರ ಅಕ್ಷರವಾಗಿ ಚರ್ಚಿಸಲ್ಪಟ್ಟು, ಒಂದೊಂದು ಸಲ ಸಂತೋಷದ ನಗು-ಹಾರಾಟಗಳಲ್ಲಿ, ಒಂದೊಂದು ಸಲ ಕೂಗಾಟ-ಆರ್ಭಟಗಳಲ್ಲಿ, ಒಂದೊಂದು ಸಲ ಜಗಳ-ಗದ್ದಲಗಳಲ್ಲಿ ಕೊನೆಗೊಳ್ಳುವುವು. ಹೆಂಗುಸರ ಹೆಮ್ಮೆಯ ವಿಷಯಗಳೆಂದರೆ—ತಮ್ಮತಮ್ಮ ತವರುಮನೆಗಳ ವಿಷಯ ಡಂಭಕೊಚ್ಚಿಕೊಳ್ಳುವುದು, ಅತ್ತೆ-ಸೊಸೆಯರನ್ನು ದೂರುವುದು, ನೆರೆಹೊರೆಯವರನ್ನು ತೆಗಳುವುದು........ಇತ್ಯಾದಿ.

"ಇಂಗ್ಲಿಷ್" ಕಲಿತ ಸುಧಾರಕರು ಮಾತನಾಡಿಕೊಳ್ಳುವ "ಸ್ಟೈಲ್" ಇನ್ನೊಂದು ರೀತಿ. ಮಾತೃಭಾಷೆಯಲ್ಲಿ ಮಾತಾಡುವುದೆಂದರೆ ಅವರಿಗೆ ಸ್ವಲ್ಪ "ಡಿಫಿಕಲ್ಟ್"; ಒಂದು ವೇಳೆ ಮಾತಾಡಿದರೂ, ಎಡವಿದಲ್ಲೆಲ್ಲಾ "ಇಂಗ್ಲಿಷು" ಶಬ್ದಗಳ ಊರುಗೋಲುಗಳು ಬೇಕೇ ಬೇಕು. ಅವರ ನಾಲಗೆಯ ತುದಿಯಲ್ಲಿ ಶೇಕ್ಸ್‌ಪಿಯರ್, ಮಿಲ್ಟನ್, ಬೈರನ್, ಜೋನ್ಸನ್, ಸ್ಪೆನ್ಸರ್, ಕೀಟ್ಸ್, ಶೆಲ್ಲಿ, ವರ್ಡ್ಸ್‌ವರ್ತ್, ಟೆನಿಸನ್ ಮೊದಲಾದವರು ಯಾವಾಗಲೂ ಕುಣಿಯುತ್ತಲೇ ಇರುವುದರಿಂದ, ಕಾಳಿದಾಸಾದಿ ಸಂಸ್ಕೃತ ಕವಿಗಳಿಗಾಗಲಿ, ಪಂಪ, ರನ್ನ, ಹೊನ್ನ, ಲಕ್ಷ್ಮೀಶಾದಿ ಕನ್ನಡ ಕವಿಗಳಿಗಾಗಲಿ "ಟಿಕೇಟು" ದೊರೆಯುವಂತಿಲ್ಲ. ಚಲಚ್ಚಿತ್ರದ ಸುಂದರ ನಟಿಯರ ಬೆಡಗನ್ನು ಬಣ್ಣಿಸಬೇಕಾದರೆ, ಅವರ ಹಾವ-ಭಾವ-ವಿಲಾಸಗಳಿಗೆ ತಕ್ಕುದಾದ ಅಚ್ಚುಮೆಚ್ಚಿನ ಶಬ್ದಗಳು ಕನ್ನಡದಲ್ಲಿ ಸಿಗುವುದು ಕಷ್ಟ; ಸಿಕ್ಕಿದರೂ "Beauty, love, lovely, melo-

dious, splendid, enchanting, fascinating" ಮೊದಲಾದ ಶಬ್ದಗಳಲ್ಲಿರುವ "ಬ್ಯೂಟಿ" ಕನ್ನಡ ಶಬ್ದಗಳಿಗೆಲ್ಲಿಂದ ಬರಬೇಕು?

ಮಾತಿನ "ಬ್ಯೂಟಿ" ನೋಡಬೇಕಾದರೆ "ಕಾಫೀ-ಹೋಟೆಲು"ಗಳಿಗೆ ಹೋಗಬೇಕು. ಸಂಭಾಷಣೆಯ ಯಾವ "ಸೇಂಪ್ಲ್"ಗಳು ಬೇಕಾದರೂ ಅಲ್ಲಿ ದೊರೆಯುತ್ತವೆ. ಏಕೆಂದರೆ ಅಲ್ಲಿಗೆ ಎಲ್ಲಾ ಜಾತಿ-ರೀತಿ-ನೀತಿಗಳ ಜನರೂ ಬರುವರು. ಅಲ್ಲಿ ದೊರೆಯುವಷ್ಟು ಸತ್ಕಾರವು ಇನ್ನೆಲ್ಲಿಯೂ ಸಿಗಲಾರದು. "ತನಗೆ ಮನ್ನಣೆ ದೊರೆಯದಲ್ಲಿಗೆ ಪೋಪವನು ಕಡು ಮೂರ್ಖ"ನೆಂಬುದು ಎಲ್ಲರಿಗೂ ಗೊತ್ತು. ಅಲ್ಲಿ ದೊರೆಯುವ ವಿಶೇಷ ಮನ್ನಣೆಯೇ ಜನರ ತನು-ಮನ-ಧನ-ಸರ್ವಸ್ವವನ್ನೂ ಸೆಳೆಯುವುದು. ಯಾರನ್ನೇ ಆಗಲಿ, "ಹೋಟೆಲ"ನ್ನು ಪ್ರವೇಶಿಸಿದ ಕೂಡಲೇ "ಸ್ವಾಮಿ, ತಮಗೇನು ಬೇಕು?" ಎಂದು ಆದರಪೂರ್ವಕವಾಗಿ ವಿಚಾರಿಸುವರು. ಸ್ವರ್ಗದ ಬಾಗಿಲು ಎಲ್ಲರಿಗೂ ತೆರೆದುಕೊಂಡಿಲ್ಲ, ಪುಣ್ಯಾತ್ಮರಿಗೆ ಮಾತ್ರ; ಆದರೆ "ಕಾಫೀ-ಹೋಟೆಲಿ"ನ ಬಾಗಿಲು ದುಡ್ಡಿದ್ದವರೆಲ್ಲರಿಗೂ ಯಾವಾಗಲೂ ತೆರೆದಿರುವುದು. ಇಲ್ಲಿ ಪಂಡಿತ-ಪಾಮರರೆಂಬ, ಉಚ್ಚ-ನೀಚರೆಂಬ, ದೊಡ್ಡವ-ಬಡವರೆಂಬ ಭೇದಭಾವಗಳಿಲ್ಲ—ಎಲ್ಲರಿಗೂ ಒಂದೇ "ಗ್ಲಾಸು" ಒಂದೇ "ಕಪ್ಪು!"— ಇದೀಗ ಆದರ್ಶ ಸಮತಾವಾದ! ಏನು ಬೇಕಾದರೂ ಕೊಡಲು ಸಿದ್ಧವಾಗಿರುವ "ಕಾಫಿ-ಹೋಟೆಲು"ಗಳನ್ನು ಬಿಟ್ಟು, ಜನರು ತಮ್ಮ ಇಷ್ಟಾರ್ಥಸಿದ್ಧಿಗೋಸ್ಕರ ಇತರ ವೃತ್ತಿಗಳನ್ನೇಕೆ ಕೈಗೊಳ್ಳುವರೋ ತಿಳಿಯದು. ಬಿಸಿ-ಬಿಸಿ ಸುದ್ದಿ ಸಿಗಬೇಕಾದರೆ, "ಕಾಫಿ ಹೋಟೇಲು"ಗಳಿಗೇ ಹೋಗಬೇಕು. ಆಡುವ ಮಾತುಗಳು ರುಚಿಕರವಾಗಬೇಕಾದರೆ, ಕುಡಿದು ಮಾತಾಡಬೇಕಂತೆ. ಅದರಲ್ಲಿಯೂ, ಕುಡಿದ ಮೇಲೆ "ಇಂಗ್ಲಿಷು ಮಾತಾಡಲು" ಇನ್ನೂ ಸೊಗಸು. "ಕಾಫಿ" ಮತ್ತು ಹೆಂಡದ ಗಡಂಗುಗಳು ಎಲ್ಲಾ ರೀತಿಯ ಮಾತುಕತೆಗಳಿಗೂ "ಹೆಡ್ ಆಫೀಸು"ಗಳು.

ಹೆಂಡಕ್ಕೂ ಮಾತಿಗೂ ಹತ್ತಿರದ ಸಂಬಂಧ. ಹೆಂಡವನ್ನು ಕುಡಿದೊಡನೆಯೇ ಅದು ಕೆಳಗಿಳಿಯುವ ಬದಲು ನೆಟ್ಟಗೆ ಮೇಲಕ್ಕೇರುವುದು. ಕುಡಿದ ಕೂಡಲೆ ಬಾವಲಿಯಂತೆ ತಲೆಕೆಳಗಾಗಿ ತೂಗಾಡಿದರೆ ಹೇಗಾಗುವುದೋ ತಿಳಿಯದು. ತನ್ನೊಂದಿಗೇ ಕುಡುಕನನ್ನೂ ಮೇಲಕ್ಕೇರಿಸಿ,

ಅವನು ಸ್ವಾಭಾವಿಕವಾಗಿ ಮೂಕನಾಗಿದ್ದರೂ, ಅವನನ್ನು ಮಾತಿನ ಮಲ್ಲಪ್ಪ ನನ್ನಾಗಿ ಮಾಡುವುದು; ಗೊತ್ತಿಲ್ಲದೆಯೇ ಅವನ ಬಾಯಿಯಿಂದ ನೂರಾರು ಅಸಂಬದ್ಧ ಶಬ್ದಗಳನ್ನು ಹೊರಡಿಸುವುದು. ಕುಡುಕರೊಳಗಿನ ಮಾತು ಕತೆಯು ಸುಶ್ರಾವ್ಯವಾಗಿರುವುದು. ಮಾತಿಗೆ ಕಳೆಯೇರಬೇಕಾದರೆ, ಕುಡಿದ ಹೆಂಡವು ತಲೆಗೇರಬೇಕು. ತಲೆಗೇರಿದ ಹೆಂಡವು "ಒಂದಕ್ಕೆರಡು" ಹೇಳುವ ಚೈತನ್ಯವನ್ನು ಕೊಡುತ್ತದೆ. ಊರಿನ ಪಂಚಾಯತಿಗೆಗಳನ್ನು ತೀರಿಸಲು ಹೋಗುವ ದೊಡ್ಡ ಮುಂಡಾಸಿನ ಹಳ್ಳಿಯ ಮುಖಂಡರೂ, "ಈ ದಿನ ನಾಲ್ಕು ಮಾತಾಡಬೇಕೆ"ಂಬ "ಫೋರ್ಸಿ"ನಿಂದ ಆಟ-ಕೂಟ ಗಳಿಗೆ ಚಿತ್ತೈಸುವ ಮಹಾನುಭಾವರುಗಳೂ, ಜಗಳಕ್ಕಾಗಿಯೇ ಜೂಜು-ಜುಗಾರಿಗಳಿಗೆ ದಯಮಾಡಿಸುವ ಮಹಾಪುರುಷರೂ ಈ ಕಾರಣದಿಂದಲೇ ಮುಂಚಿತವಾಗಿ ಸ್ವಲ್ಪ ಸೇವಿಸಿ ಹೊರಡುವುದು ವಾಡಿಕೆಯಾಗಿದೆ. ಅಂತೂ, ಕುಡುಕರಿಗೆ ಹೆಂಡವಿಲ್ಲದೆ ಮಾತೇ ಹೊರಡದು. ಒಂದಿಷ್ಟು ದೊರೆಯಿತೆಂದರೆ, ಅವರ ನಾಲಗೆಯು "ಬ್ರೇಕಿಲ್ಲದ ಬೈಸಿಕಲ್"ನ ಹಾಗೆ, ಕ್ಷೌರಿಕರ ಕೈಗತ್ತರಿಯ ಹಾಗೆ ಓಡತೊಡಗುವುದು.

ಕ್ಷೌರಿಕರ "ಸೆಲೂನು"ಗಳಲ್ಲಿ ನಡೆಯುವ ಸಂಭಾಷಣೆಗಳಿಗೆ ಕಿವಿಗೊಟ್ಟರೆ, "ರೇಡಿಯೊ" ಬೇರೆ ಕೇಳಬೇಕಾಗಿಲ್ಲ: ಬೀದಿಯ ಪುರಾಣಗಳೂ, ದೇಶವಿದೇಶಗಳ ರಾಜಕೀಯ, ಧಾರ್ಮಿಕ, ಆರ್ಥಿಕ ವಿಚಾರಗಳೆಲ್ಲಾ ಅನಾಯಾಸವಾಗಿ ಗೊತ್ತಾಗುವುವು. ಕ್ಷೌರಿಕರಿಗೆ ಗೊತ್ತಿಲ್ಲದ ವಿಷಯ ಗಳು ಬಹಳ ಕಡಮೆ; ಯಾಕೆಂದರೆ, ಅವರ ಬಳಿಗೆ ಬರುವವರೆಲ್ಲಾ ಏನಾದರೊಂದು ಸುದ್ದಿ ತಂದೇ ತರುವರು. ಆ ಸುದ್ದಿಗೆ ಸುಣ್ಣ, ಮಣ್ಣು, ಬಣ್ಣ ಬೆರಸಿ ಆತನು ಇತರರಿಗೆ ಕೊಡುವನು. ಹೀಗೆ "ಸೆಲೂನು" ಎಂದರೆ ದೊಡ್ಡದೊಂದು "ನ್ಯೂಸ್ ಪಬ್ಲಿಷಿಂಗ್ ಹೌಸ್". ಹಳ್ಳಿಯ ಕ್ಷೌರಿಕ ನನ್ನಂತೂ "The walking Encyclopaedia of the village" ಎಂದು ಕರೆಯಲು ಏನೂ ಅಡ್ಡಿಯಿಲ್ಲ. ಕ್ಷೌರಮಾಡುತ್ತಿರುವಾಗ, ಬಲಗೈಯಲ್ಲಿ ಕತ್ತರಿಯನ್ನು ಕುಣಿಸುತ್ತಾ, ಕುಳಿತವರನ್ನು ಏನಾದರೂ ಮಾತನಾಡಿಸುವುದು ಅವರ ಸ್ವಭಾವ. "ಈಗ ಗಾಂಧಿ ಏನು ಮಾಡ್ತಾನೆ ಸ್ವಾಮೀ? ಕಾಂಗ್ರೇಸು ಈಗ ಹೇಗೆ ನಡೀತದೆ? ಈ "ರೇಶನಿ"ನಿಂದಾಗಿ

ಜಟ್ಸ್ವಾರೆ ಊರೆಲ್ಲಾ ಉರುಟಾಯಿತು ರಾಯರೇ. ಸ್ವರಾಜ್ಯ ಸಿಕ್ಕಿದರೆ ಗಾಂಧಿ ಏನು ಮಾಡ್ತಾನಂತೆ? ಸಾಸಿವೆ ಸೇರಿಗೆ ಏನು ಹೇಳ್ತಾರೆ ರಾಯರೆ ಈಗ? ಯುದ್ಧ ಜೋರಾಗಿ ಬಿಟ್ಟರೆ ನಾವು ಕೂಡಾ ಹೋಗಬೇಕಾದೀತೊ ಸ್ವಾಮಿ ಹೇಗೆ? ಹಳ್ಳಿಯ ಕ್ಸಾರಿಕರಿಗೆ "ಕ್ರೋಪು" ಮಾಡಲಿಕ್ಕೇನು ಗೊತ್ತು ಸ್ವಾಮಿ ಬದನೆ! ನಿಜವಾದ "ಸಿನೆಮಾ-ಸ್ಟಾರ್" ಎಂದರೆ ಲೀಲಾ ಚಟ್ನೀಸ್ ನೋಡಿ! ಏನು ಹೇಳ್ತೀರಿ ನೀವು? ಈಗ ಅಮೇರಿಕ ಬಲ ವಾದೀತೋ—ಅಲ್ಲ—ವಿಲಾಯತಿಯೊ? ಜಪಾನು ಯಾರ ಕಡೆ ಸ್ವಾಮಿ ಈಗ?......." ಮೊದಲಾದ ಒಂದಕ್ಕೊಂದು ಸಂಬಂಧವಿಲ್ಲದ ನೂರೊಂದು ಹಾಳು ಹರಟೆಗಳೇ ಅವರ ಮಾತುಗಳ ಮುಖ್ಯ ವಿಷಯ.

ಹೀಗೆ ಯಾರ ಸಂಭಾಷಣೆಯನ್ನು ನೋಡಿದರೂ ಅದರಲ್ಲಿ ಒಂದು ರೀತಿಯ ಜೀವವಿದೆ, ಕಳೆಯಿದೆ, ಕಲೆಯಿದೆ. ಅದು ಬರೀ ಹಾಳು ಹರಟೆ ಯಾಗಿದ್ದರೂ ವ್ಯವಹಾರದ ಮುಖ್ಯ ಅಂಗವಾಗಿದೆ, ಜೀವನದ ಉಸಿರಾ ಗಿದೆ. ದುಃಖದ ಭಾರವನ್ನು ಕಡಮೆ ಮಾಡಲು ಅದರಷ್ಟು ಉತ್ತಮವಾದ ಸಾಧನವು ಬೇರೊಂದಿಲ್ಲ. ಹೃದಯದ ದುಃಖವನ್ನು ಇನ್ನೊಬ್ಬರೊಡನೆ ಹೇಳಿದರೆ ಅದು ತಾನಾಗಿಯೇ ಕಡಮೆಯಾಗುವುದು. ಸಾಹಿತ್ಯವು ಸಂಭಾಷಣೆಯ ಫಲ, ಅದರ ಸುಸ್ವರೂಪ. ಸಂಭಾಷಣೆಯು ನಿಂತು ಹೋದರೆ, ವ್ಯಾಪಾರ-ವಹಿವಾಟುಗಳು ನಿಂತು ಹೋಗುವುವು, ಜಗತ್ತೇ ನಿಂತು ಹೋಗುವುದು. ಮಾತಾಡಲಾರದವನನ್ನು ಮೂಕ, ಅಸಭ್ಯ ಅಥವಾ ಪಶು ಎಂದು ಕರೆಯುವರು. "ಮಾತಾಡದ ಬಾಯಿ ಬಿಲದ ಬಾಯಿ" ಎಂದು ಸರ್ವಜ್ಞನೇ ಹೇಳಲಿಲ್ಲವೇ? ಮನುಷ್ಯ ಹಾಗು ಪಶು ಗಳೊಳಗಿನ ಮುಖ್ಯ ಭೇದವೇ ಮಾತು. ಆದುದರಿಂದ ಸಂಭಾಷಣೆಯು ಸಮಾಜದ ಜೀವಾಳ, ಮನುಷ್ಯನ ಉಸಿರು, ಪ್ರಪಂಚದ ಪ್ರಾಣ.

೫. ಸಾಲ

ಸಭ್ಯರೆಂದೆನ್ನಿಸಿಕೊಳ್ಳಲು ಅನುದಿನವೂ ಒದ್ದಾಡುತ್ತಿರುವ ನಾವು ಸಾಧಾರಣ ತೊಂಭತ್ತೈದು "ಪರ್‌ಸೆಂಟ್" ಹಳೇ ಪದ್ಧತಿಗಳ ಬೇರಿಗೆ ಬಿಸಿನೀರು ಕೊಡುತ್ತಾ ಬಂದಿದ್ದರೂ, ಸಾಲಕೊಳ್ಳುವ ಮತ್ತು ಸಾಲ ಕೊಡುವ ಪದ್ಧತಿಗಳನ್ನು ಆದಷ್ಟು ಶ್ರದ್ಧೆಯಿಂದ ಈಗಲೂ ಕಾಪಾಡಿ ಕೊಂಡು ಬರುತ್ತಿರುವುದಕ್ಕಾಗಿ, ನಮ್ಮನ್ನು ನಾವೇ ಎಷ್ಟು ಹೊಗಳಿ ಕೊಂಡರೂ ಸಾಲದಾಗಿದೆ. "ಸಾಕು" ಎಂದರೆ "ಸಾಲ"ದ ಅಗತ್ಯವೇ ಇಲ್ಲವಷ್ಟೆ. ಸಾಕಾಗಿ ಹೆಚ್ಚಾದಾಗ ಸಾಲಕೊಡಬೇಕು, ಸಾಲದಾಗ ಸಾಲತೆಗೆಯಬೇಕು; ಇದು ವ್ಯವಹಾರದ ನಿಯಮ.

ಸಾಲ ಕೊಡುವುದು ಪರೋಪಕಾರವೆಂಬುದನ್ನು ಎಲ್ಲರೂ ಬಲ್ಲರು; ಸಾಲಕೊಳ್ಳುವುದು ಕೂಡ ಚಿಲ್ಲರೆ ಪರೋಪಕಾರವಲ್ಲ. ಆದರೆ, ಒಬ್ಬನಿಗೆ ಉಪಕಾರವಾಗುವಾಗ ಇನ್ನೊಬ್ಬನಿಗೆ ಅಪಕಾರವಾಗಲೂ ಬಹುದು; ಒಬ್ಬನಿಗೆ ಲಾಭವಾಗುವುದರ ಅರ್ಥವೆಂದರೆ, ಇನ್ನೊಬ್ಬನಿಗೆ ನಷ್ಟ. ಸಾಲಕೊಳ್ಳುವವರಿಲ್ಲದಿರುತ್ತಿದ್ದರೆ, "ಸಾಲ"ವೆಂಬ ಶಬ್ದವೇ ಹುಟ್ಟುತ್ತಿರಲಿಲ್ಲ. ರೋಗಗಳು ಹೆಚ್ಚಿದಂತೆ ವೈದ್ಯರೂ ಹೆಚ್ಚುವರು; ಸಾಲ ಕೊಳ್ಳುವವರು ಹೆಚ್ಚಿದಂತೆ ಸಾಲತೆರುವವರೂ ಹೆಚ್ಚಲೇ ಬೇಕು. ಉತ್ಪತ್ತಿ ಕಡಮೆ, ಅಪ್ಪ ಮಾಡಿಟ್ಟದ್ದು ಅತ್ಯಲ್ಪ, ಪೋಷಣೆಯಾಗಬೇಕಾದವರು ಹೆಚ್ಚು ಮಂದಿ—ಹೀಗಿರುವಾಗ ಸಾಲಮಾಡದೆ ಬೇರೆ ಉಪಾಯವೇನಿದೆ?

ಆದರೆ, ತೆಗೆದುಕೊಂಡ ಸಾಲವನ್ನು ಮರಳಿ ಕೊಡುವ ಪದ್ಧತಿಗೆ ಆಧುನಿಕಸಭ್ಯತೆಯ ಜೊತೆಯಲ್ಲಿ "ಸಹಪಙ್ಕ್ತಿ" ದೊರಕುವುದು ಸ್ವಲ್ಪ ವಿರಳ. ಹಿಂದಿನ ಕಾಲದಲ್ಲಾದರೆ, ಲೇವಾದೇವಿಗಳೆಲ್ಲಾ ವಿಶ್ವಾಸದ ಮೇಲಿಂದಲೇ ನಡೆಯುತ್ತಿದ್ದುವಂತೆ. ರುದ್ರಭಟ್ಟ ಎಂಬ ಕವಿಯು ಒಂದು ಸಲ ತನ್ನ ಹೆಸರಿನ "ಭ" ಎಂಬ ಅಕ್ಷರವನ್ನು ಬೇರೆಯವರಲ್ಲಿ ಎರವಾಗಿಟ್ಟು ಸಾಲತೆಗೆದುಕೊಂಡಿದ್ದನಂತೆ; ಆ ಸಾಲವನ್ನು ತೀರಿಸುವ

ತನಕ ತನ್ನ ಹೆಸರನ್ನು ಬರೀ "ರುದ್ರಟ್ಟ" ಎಂದೇ ಇಟ್ಟುಕೊಂಡಿದ್ದನಂತೆ! ಈಗಲೂ ಇಂಥ ಜನರಿಗೆ ಕೊರತೆಯಿಲ್ಲ: ಒಂದಕ್ಷರ ಮಾತ್ರವಲ್ಲ, ಸಂಪೂರ್ಣ ಹೆಸರು, ವೇಷ, ಮನೆ, ಊರು ಎಲ್ಲಾ ಬದಲಾಯಿಸಿ, ದಿವಾಳಿ ತೆಗೆದು, "ಪರಾರಿ"ಯಾಗಿ, ಸಾಲಕೊಟ್ಟ ಆಸಾಮಿಗೆ "ಟೋಕರು" ಕೊಡುವ ಜನರೇ ಹೆಚ್ಚಾದುದರಿಂದ, "ನೋಟು, ರಿಕಾರ್ಡು, ಕೋರ್ಟು, ವಕೀಲ"ರು—ಮೊದಲಾದ ಸಾಧನಗಳ ಸೃಷ್ಟಿಯಾಗಬೇಕಾಯಿತು. ಈ ಸಾಧನಗಳು ಹೆಚ್ಚಿದಷ್ಟೂ ಜನರಲ್ಲಿ ಅವಿಶ್ವಾಸ, ವಿಶ್ವಾಸಘಾತುಕತನ, ಮೋಸಗಾರಿಕೆ, ಲಂಚ, ಬಡತನ, ತಂಟೆ-"ತಕರಾರು"ಗಳು ಹೆಚ್ಚುತ್ತಾ ನಡೆದಿವೆ. ಆದುದರಿಂದ ಈಗೀಗ ಸಾಲಸಿಗುವುದೂ ಕಷ್ಟವಾಗಿದೆ. ಸಾಲಸಿಕ್ಕಿದರೆ, ಬಡ್ಡಿಯ ಹೊರೆಯನ್ನು ಹೊರಲಾರದೆ, ಸಾಲವನ್ನಿಳಿಸು ವುದು ಇನ್ನೂ ಕಷ್ಟ. ಮೊದಲೊಬ್ಬನು ಸಾಲಮಾಡಿ ಓಲೆತಂದನಂತೆ; ಆ ಮೇಲೆ ಓಲೆಮಾರಿ ಬಡ್ಡಿಕೊಟ್ಟನಂತೆ. ಇಂತಹ ಸಂಗತಿಗಳು ನಮ್ಮಲ್ಲಿ ಇಂದು ಮನೆಮನೆಯ ಕತೆಗಳಾಗಿವೆ. ಹೆಂಡತಿಯ ಹಟಕ್ಕೆ ಬಲಿಬಿದ್ದು, ಸಾಲಮಾಡಿಯಾದರೂ ಚಿನ್ನಾಭರಣಗಳನ್ನು ಕೊಂಡುಕೊಳ್ಳುವುದು; ಕೊನೆಗೆ ಅದೇ ಸಾಲದ ಬಡ್ಡಿಯನ್ನು ತೆರುವುದಕ್ಕಾಗಿ ಒಂದೊಂದೇ ಆಭ ರಣವನ್ನು ಮಾರುವುದು. ಈ ಕಾರಣದಿಂದಲೇ ಒಬ್ಬನ ಹೆಂಡತಿಗಾಗಿ ಕೊಂಡುಕೊಂಡ ಆಭರಣವು ಯಾವನೋ ಇನ್ನೊಬ್ಬನ ಹೆಂಡತಿಯ ಮೈಮೇಲೆ ಶೋಭಿಸುವುದು! ಮನೆಯಲ್ಲಿ ಮದುವೆ-ಮುಂಜಿಗಳು ಬಂದು ವೆಂದರೆ, ನೂರು ಆಯವಿಲ್ಲದವನಾದರೂ, ನಾನ್ನೂರರ ಸಾಲದ ಹೊರೆ ಯನ್ನು ಹೊರಲು ಹೊರಡುವನು. ದಿನದಿನ ತಿರಿದು ತಿನ್ನುವವನಾದರೂ, ಮಕ್ಕಳ-ಯೂ-ಮೊಮ್ಮಕ್ಕಳ ಮದುವೆಯಲ್ಲಿ ಸಾಲ ಮಾಡಿಯಾದರೂ ಜರ ತಾರಿಯನ್ನುಟ್ಟು ಮೆರೆಯದಿದ್ದರೆ, ಮದುವೆ ಹೇಗೆ ನಡೆಯಬೇಕು? ಹೊಸ ಅಳಿಯನಿಗೆ ಸಮ್ಮಾನ ಮಾಡುವ ಸಡಗರದಲ್ಲಿ, ಮನೆಯು ಮರುದಿನ-ಸಾಲ ದಲ್ಲಿ ತೇಲಿಹೋದರೂ ಅತ್ತೆಗೆ "ಪರವಾ" ಇಲ್ಲ. ಮನೆಯಲ್ಲಿ ಗೋಣಿಯ ನ್ನುಟ್ಟರೂ, ಮದುವೆಮನೆಯಲ್ಲಿ ಹೆಂಗುಸರಿಗೆ ಜರಿಯಂಚಿನ ಸೀರೆಯೇ ಆಗಬೇಕು; ಚಿನ್ನದ ಬಳೆಗಳಿಲ್ಲದೆ ಮದುವೆಗೆ ಹೋಗುವುದೇ ವ್ಯರ್ಥ; ಸರ ಗಳಿಷ್ಟಿದ್ದರೂ ಬೇಸರವಿಲ್ಲ; ಕಾಲಿಗೆ ಗೆಜ್ಜೆ, ಮೂಗಿಗೆ ನತ್ತು, ಕಿವಿಗೆ ಕಿಡಿ

ಯೋಲೆ........ಇನ್ನೂ ಏನೋ ಏನೋ. ಇವನ್ನೆಲ್ಲಾ ನೆರೆಮನೆಯವರಿಂದ ಬಾಡಿಗೆಗೆ ತಂದಾದರೂ ನಖಶಿಖಾಲಂಕಾರವಾಗಲೇಬೇಕು. ಆ ಬಾಡಿಗೆಯನ್ನು ತೆರಲು ಬೇರೆಯವರಿಂದ ಹಣ ಬಾಡಿಗೆಗೆ ತರಬೇಕು. ಇದಕ್ಕಾಗಿಯೇ ಸಾಲವನ್ನು "ಹುಲಿಯ ಮೈಮೇಲಿನ ಹುಣ್ಣು" ಎನ್ನುತ್ತಾರೆ.

ಸಾಲಕೊಳ್ಳುವವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದೂ, ಸಾಲ-ಸೋಲ, ಕರಾರು-ತಕರಾರು, ಲಾಯಿ-ಲಗಾಡಿ, ವ್ಯಾಜ್ಯ-ವ್ಯವಹರಣೆಗಳು ಅಧಿಕವಾಗಿ, ಮನೆ-ಮಾರು, ಆಸ್ತಿ-ಪಾಸ್ತಿ, ನೆಟ್ಟಿ-ನೆಡಿಗೆಗಳು ಮಣ್ಣುಪಾಲಾಗುವುದೂ ಮುಖ್ಯವಾಗಿ ಸಾಲಕೊಡುವವರಿಂದಲೇ ಎನ್ನಬೇಕು. ಸಾಲಕೊಡುವವರು ಮೊದಲೇ ಇವುಗಳ ಮೇಲೆ ದೂರದೃಷ್ಟಿಯನ್ನಿಡುವರು. ಸಾಲತೆರುವ ಹಣಕ್ಕೆ ತಕ್ಕ ಆಧಾರ, ತಕ್ಕ ಬಡ್ಡಿ, ಬಡ್ಡಿ ಬಾಕಿಯಾದರೆ ಸಾಲಗಾರನ ಸೊತ್ತುಗಳೆಲ್ಲಾ ತಮ್ಮ ಬಗಲೊಳಗೆ ಬರುವ ಶರ್ತ—ಇವುಗಳನ್ನೆಲ್ಲಾ ನೋಡದೆ ಸಾಲಕೊಡುವವರು ಬಹಳ ಕಡಮೆ. ಬರುವ ಬಡ್ಡಿಯ ಹಣದಿಂದಲೇ ಹೆಂಡಿರು-ಮಕ್ಕಳನ್ನು ಸಾಕುವ ಪುಣ್ಯಾತ್ಮರು ಲೋಕದಲ್ಲಿ ಎಷ್ಟೋ ಮಂದಿ ಇರುವರು; (ಆದುದರಿಂದಲೇ ಕೆಲವರು ಅಸಲುಹಣವನ್ನು ವಸೂಲುಕೊಟ್ಟಾಗ ತೆಗೆದುಕೊಳ್ಳುವುದಿಲ್ಲ.) ಬಡ್ಡಿಕೊಡಲೋಸ್ಕರ ಹೆಂಡತಿ-ಮಕ್ಕಳನ್ನೂ, ಕೊನೆಗೆ ತಮ್ಮನ್ನೂ ಮಾರುವ "ಹರಿಶ್ಚಂದ್ರ"ರ ಸಂಖ್ಯೆಗಂತೂ ಲೆಕ್ಕವೇ ಇಲ್ಲ. ಈಗಿನ ಕಾಲದ "ವಿಶ್ವಾಮಿತ್ರ"ರು ಪುರಾತನವಿಶ್ವಾಮಿತ್ರರಂತೆ ಪ್ರತ್ಯಕ್ಷರೂಪದಿಂದಲ್ಲ, ಅಪ್ರತ್ಯಕ್ಷರೂಪದಿಂದ ಬೆಣ್ಣೆಯಂತಹ ಮಾತು ಹಾಗು ಉಪಾಯಗಳಿಂದ ಸಾಲಗಾರನ ರಕ್ತವನ್ನೇ ಹೀರಿಬಿಡುವರು. ಇವರ ಹಣಕ್ಕೆ ನೂರಕ್ಕೆ ನೂರರ ಸಲೆಯು ಬಡ್ಡಿಕೊಟ್ಟರೂ, ಮತ್ತೂ "ಬಡ್ಡಿ ಬಾಕಿ" ಎನ್ನಲು ಇವರ ಅಡ್ಡಿಯೇನೂ ಇಲ್ಲ.

ಸಾಯುವ ಕಾಲದಲ್ಲಿ ತಮ್ಮ ಮಕ್ಕಳಿಗಾಗಿ ಹಣವನ್ನು ಸಂಗ್ರಹಿಸಿಡುವುದು ಪೂರ್ವದಿಂದಲೂ ನಡೆದುಬಂದ ಪದ್ಧತಿ. ಆದರೆ ಈಗೀಗ ಸಾಲವೇ ಮಕ್ಕಳ ಪಾಲಿಗೆ ದೊರೆಯುವ ಪಿತ್ರಾರ್ಜಿತಸಂಪತ್ತು. "ಈ ದೇಹವು ಬೂದಿಯಾದ ಮೇಲೆ ಇಂತಹ ಒಳ್ಳೆಯ ದೇಹವು ಪುನಃ ಸಿಕ್ಕದಾದುದರಿಂದ, ಸಾಲಮಾಡಿಯಾದರೂ ಬದುಕಿದ್ದಾಗಲೇ ತುಪ್ಪತಿಂದು

ಸುಖಪಡುವುದು ಲೇಸು" ಎಂದು ಇಂಥವರ ಮತ. ಈ ಮತವು ಹಲವರಿಗೆ ಸಮ್ಮತವಾದುದರಿಂದಲೇ, ನಮ್ಮ ಸಮಾಜದಲ್ಲಿಂದು ಮಗನು ತಂದೆಗಿಂತಲೂ ಇಮ್ಮಡಿವೀರನಾಗಿ, ತನ್ನ ಪಾಲಿಗೆ ಬಂದ ಸಾಲವನ್ನು ಇನ್ನೂ ಹೆಚ್ಚಿಸಿ, ತಂದೆಯ ಅರ್ಧ-ಮರ್ಧ ಕಾರ್ಯವನ್ನು ಪೂರ್ಣಗೊಳಿಸುವನು. ಸಾಲದ ಕಾರಣದಿಂದಲೇ ತಂದೆಮಕ್ಕಳೊಳಗೆ, ಅಣ್ಣತಮ್ಮಂದಿರೊಳಗೆ ಜಗಳಬಂದು, ಕುಟುಂಬವಿಚ್ಛೇದವಾಗುವುದಂತೂ ಇಂದಿನ ಸಮಾಜದಲ್ಲಿ ಹೊಸವಿಷಯವಲ್ಲ.

"ಹೆತ್ತ ಸೂತಕವು ಹತ್ತು ದಿನಕ್ಕೇ ಪರಿಹಾರವಾದರೆ, ಸತ್ತ ಸೂತಕವು ಹನ್ನೊಂದಕ್ಕೆ; ಆದರೆ ಸಾಲದ ಸೂತಕವು ಮತ್ತೊಂದು ಜನ್ಮಕ್ಕೆ." ಆದರೂ, ಹೀಗೆ ಹೇಳಿದ ಮಹನೀಯನಾಗಲಿ, "ಸಾಲದಾ ಗೋಳು ಬೇಡ" ಎಂದು ಸುಲಭವಾಗಿ ಸಾರಿಹೇಳಿದ ಸರ್ವಜ್ಞನಾಗಲಿ, "Neither a borrower nor a lender be, for loan oft loses both itself and friend" ಎಂದು ಹಿಂದು ಮುಂದು ನೋಡದೆ ಬರೆದ ಶೇಕ್ಸ್‌ಪಿಯರನಾಗಲಿ ಈಗಿನ ಕಾಲದಲ್ಲಿರುತ್ತಿದ್ದರೆ, ಆಧುನಿಕ ಜೀವನದ ಸೆಳೆತದಲ್ಲಿ ಸಿಕ್ಕುಬಿದ್ದು, ಸಾಲದ ಕೆಸರಿನಲ್ಲಿ ಮೂಗಿನವರೆಗೆ ಮುಳುಗಿ, ಎಷ್ಟು ಸಲ "ಕೋರ್ಟಿ"ನ ಮೆಟ್ಟಲುಹತ್ತಿ, ನ್ಯಾಯಾಧೀಶರ ಮುಂದೆ ಕೈಕಟ್ಟಿ ನಿಲ್ಲಬೇಕಾಗಿ ಬರುತ್ತಿತ್ತೋ ಹೇಳಬರುವುದಿಲ್ಲ. ಎದುರಿಗೆ ದೊಡ್ಡವರೆಂದು ಕಾಣಿಸಿಕೊಂಡರೂ, ಒಳಗಿಂದೊಳಗೆ ಸಾಲದ ಬಲೆಗೆ ಬೀಳದ ಭಾಗ್ಯಶಾಲಿಗಳು ಈಗಿನ ಕಾಲದಲ್ಲಿ ಬಹಳ ವಿರಳ.

"ಸಾಲವನು ಕೊಂಬಾಗ ಹಾಲೋಗರುಂಡಂತೆ, ಸಾಲಿಗರು ಬಂದು ಎಳೆವಾಗ ಕಿಬ್ಬದಿಯ ಕೀಲು ಮುರಿದಂತೆ" ಆಗುವುದು ಕೊಂಡ ಸಾಲವನ್ನು ತೀರಿಸುವ ಮನಸ್ಸಿದ್ದವರಿಗೆ ಮಾತ್ರ; ಆದರೆ, ಈಗಿನ ಜನರಲ್ಲಿ ಕೆಲವರಿಗೆ ಹೀಗೆ ಆಗುವುದೇ ಇಲ್ಲ. "ಕೊಟ್ಟವ ಕೋಡಂಗಿ, ಕೊಂಡವ ವೀರಭದ್ರ" ಎಂಬ ಮಾತು ಸುಳ್ಳಲ್ಲ; "ಕೊಟ್ಟವ ಕೆಟ್ಟಂ" ಎಂಬುದನ್ನು ಅಕ್ಕಸಾಲಿಗರು ಕೂಡ ಊರಿಗೇ ಸಾರುತ್ತಿರುವರು. ಅಸಲುಹಣದ ವಸೂಲಿಗಾಗಿ ಆಸಾಮಿಯ ಮನೆಗೆ ಮುನ್ನೂರ-ಅರುವತ್ತು ದಿನ

“ಮಾರ್ಗಕ್ಕೆ ದಾಮರು ಹಾಕಿ”ದರೂ, ಆ ಪುಣ್ಯಾತ್ಮನ “ಭೇಟಿ”ಯಾಗುವುದು ಕಷ್ಟ. ಸಾಲಕೊಟ್ಟವನ ತಲೆಯನ್ನು ಕಂಡೊಡನೆಯೇ ಮನೆಯೊಳಗೆ ಅವಿತುಕೊಂಡು, “ಅಪ್ಪನು ಮನೆಯಲ್ಲಿಲ್ಲ” ಎಂಬ ಪಾಠವನ್ನು ಮಕ್ಕಳಿಂದ ಕಂಠಪಾಠ ಹೇಳಿಸುವ ಮಹಾತ್ಮರು “ಖಾನೇಶುಮಾರಿ”ಯಲ್ಲಿ ಹಲವರು ಸಿಗಬಹುದು; ಆದರೆ, “ವಾರಂಟು-ಜಾರಿ”ಗೆ ಬಂದ ಪೇದೆಯು ಕೈಯನ್ನು ತಕ್ಕಮಟ್ಟಿಗೆ ಬಿಸಿಮಾಡದಿದ್ದರೆ, ಅವನ ಕೈಯಿಂದ ಜಾರಿಬಿಡುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಅಂತೂ, ಕೊಟ್ಟ ಹಣವು ವ್ಯಾಜ್ಯದ ಮೂಲಕವಲ್ಲದೆ ಮರಳಿ ಸಿಗುವುದು ಅಪರೂಪ. ಆದುದರಿಂದಲೇ ಈಗಿನ “ವಿಶ್ವಾಮಿತ್ರ”ರು ಈಗಿನ “ಹರಿಶ್ಚಂದ್ರ”ರಿಗೆ ಯಾವಾಗಲೂ ಬಗ್ಗಿಯೇ ನಡೆದುಕೊಳ್ಳಬೇಕಾಗುತ್ತದೆ. ವ್ಯಾಜ್ಯಕ್ಕೆ ಹೊರಟರೆ, ಇಬ್ಬರ ಜಗಳವು ಮೂರನೆಯವನ ಆದಾಯವಾಗುವುದು: ಸರಕಾರಕ್ಕೆ ಕಾಣಿಕೆ ಬೇರೆ, ನೌಕರರಿಗೆ ಹರಕೆಗಳು ಪ್ರತ್ಯೇಕ; “ಕೋರ್ಟು-ಕಛೇರಿ”ಗಳ ಕಂಭಗಳಿಗೆ ಕೂಡ ಹಣ್ಣು-ಕಾಯಿ ಸಲ್ಲಿಸಲೇ ಬೇಕು. ಒಟ್ಟಿನಮೇಲೆ, ವ್ಯಾಜ್ಯವು ತೀರುವಾಗ ಎರಡೂ ಆಸಾಮಿಗಳು “ಸೋತು ಸುಣ್ಣ!”

“ಫೇಟು ಅಸಲು-ಕೇಡಿ”ಗಳಾದ ಕೆಲವು ಮಹಾನುಭಾವರು ಸಾಲ ತೆಗೆದುಕೊಂಡು, ಕೇಳುವಾಗ “ಕೈಮುಗುಚು”ವುದರಲ್ಲಿ “ಪಕ್ಕಾ ಕದೀಮು”ರು. ಒಬ್ಬರಿಂದೊಬ್ಬರಿಗೆ “ಮಗ್ಗಾಹಾಕಿ” ಸಾಲ ತೆಗೆಯಿಸಿ ಕೊಟ್ಟು, ಇಬ್ಬರಿಂದಲೂ “ದಲಾಲಿ-ರುಸುಂ” ಹೊಡೆದು, ಸಿಕ್ಕಸಿಕ್ಕವರಿಗೆ “ಗಸಿಕೊಟ್ಟು” ಅಲ್ಲಿಷ್ಟು ಇಲ್ಲಿಷ್ಟು “ಒಳಗೆ ಹಾಕಿ” ಎಲ್ಲರಿಗೂ “ದಬಾಯಿಸಿ” ಬಿಡುವ “ಗೌಡಬಂಗಾಲೀ ವಿದ್ಯೆ”ಗಳೆಲ್ಲಾ ಇವರಿಗೇ ಕ್ರಯಚೀಟು. ಇಂಥವರ ಸ್ವಭಾವ ಗೊತ್ತಿದ್ದೂ, ಇವರ “ಪಟಾಕಿ”ಗಳಿಗೆ ಮರುಳಾಗದವರಿಲ್ಲ. ಈ ಆಸಾಮಿಗಳ ಸಾಲಕ್ಕೆ “ನೋಟು-ಚೀಟು”ಗಳೇನೂ ಇಲ್ಲ—ಎಲ್ಲಾ “ಚಿಲ್ಲರೆ ಬಾಬು”ಗಳೇ—ಮೂರು ನಾಲ್ಕು ದಿನದ ಮಾತಿನ “ಕೈಲಾಸ ಕಡಗಳು!” ವಸೂಲಿಗಾರನು ಬಂದು ಕೇಳುವಾಗ ಉತ್ತರ ತಯಾರು—“ಏನಯ್ಯಾ, ಕೊಟ್ಟ ಹಣವನ್ನು ಹಿಂದಕ್ಕೆ ಕೊಡಬೇಕೆಂದು ನೀವು ಮೊದಲೇ ಹೇಳಿಬಿಡುತ್ತಿದ್ದರೆ, ನಿಮ್ಮಿಂದ ಸಾಲತೆಗೆದುಕೊಳ್ಳಬೇಕಿತ್ತೆ? ಈಗಿನ ಕಾಲದಲ್ಲಿ ಕರೆಕರೆದು ಕಾಲುಹಿಡಿದು ಸಾಲಕೊಡು

ವವರು ಮುಕ್ಕಾಲಿಗೆ ಮುನ್ನೂರು ಮಂದಿ ಬೇಕಾದರೂ ಇದ್ದಾರೆ, ಕೊಟ್ಟಹಣ, ತೊಟ್ಟಬಾಣ, ಬಿಟ್ಟಪ್ರಾಣ—ಈ ಮೂರೂ ಒಂದೇ. ಮರಳಿ ಸಿಗುವ ಶರ್ತವೇ ಇಲ್ಲ. ನಿಮ್ಮ ಹಣವನ್ನು ಮರಳಿ ಕೊಡಬೇಕೆಂದು ಕೇಳುತ್ತೀರಲ್ಲ—ನಮಗೆ ಕೊಡಬೇಕಾದವರು ಕೊಟ್ಟರೊ ಹೇಳಿ! ಕೊಟ್ಟದ್ದು ಕೊಟ್ಟುಹೋಯಿತು! ಲೋಕದಲ್ಲಿ ಹೊನ್ನು, ಹೆಣ್ಣು, ಮಣ್ಣು —ಈ ಮೂರನ್ನು ಮರಳಿ ಕೊಡಲೂ ಬಾರದು, ಕೊಳ್ಳಲೂ ಬಾರದು ...." ಈ ರೀತಿಯ ಮಾತುಗಳು ಕೆಲವರಿಗೆ ಕಟ್ಟಿಟ್ಟ ಪಿತ್ರಾರ್ಜಿತ ಗಂಟುಗಳು. ಇವುಗಳನ್ನು ಸಂದರ್ಭ ಬಂದಾಗ ದಿನಕ್ಕೆ ಮೂರು ನಾಲ್ಕು ಸಲ ಬಿಚ್ಚಿಯೇಬಿಡುವರು. ಜನರು ಸಾಲಗಾರರಿಗೆ ಎಷ್ಟು ಹೆದರುತ್ತಾರೆಂಬುದಕ್ಕೆ ಪ್ರತ್ಯಕ್ಷ "ನಿಶಾನಿ"ಯೆಂದರೆ—ಅಂಗಡಿಗಳಲ್ಲಿ, "ಕಾಫಿ ಹೋಟೆಲು"ಗಳಲ್ಲಿ ತೂಗಾಡುವ "ಕಡ ಕೇಳಬೇಡಿರಿ! ನಗದು ವ್ಯಾಪಾರ" ಎಂದು ಬರೆದಿರುವ "ನೋಟೀಸು-ಬೋರ್ಡು"ಗಳು.

ಈ ರೀತಿಯಲ್ಲಿ, ಸಾಲದ ಪ್ರಭಾವವೆಂದರೆ ಅಷ್ಟಿಷ್ಟಲ್ಲ. ಸಾಲವು "ಒಲಿದರೆ ನಾರಿ, ಮುನಿದರೆ ಮಾರಿ"—ಅದರಿಂದ ಉಪಕಾರವೂ ಇದೆ, ಅಪಕಾರವೂ ಇದೆ; ಪಾಲನ ಮತ್ತು ಪ್ರಳಯ, ಈ ಎರಡು ಅಧಿಕಾರಗಳೂ ಅದರ ಕೈಯಲ್ಲಿವೆ. ರಾಷ್ಟ್ರದ ಯೋಗಕ್ಷೇಮಕ್ಕಾಗಿ ಸರಕಾರವೂ ಸಾಲವೆತ್ತುವುದಿಲ್ಲವೆ? ಸಾಲತೆಗೆದೇ ವ್ಯಾಪಾರಮಾಡಿ, ಲಾಭಸಂಪಾದಿಸಿ, ಅಸಲು-ಬಡ್ಡಿಗಳನ್ನು ಸಲ್ಲಿಸಿ ಎಷ್ಟೋ ಮಂದಿ ಕುಬೇರನ ಸಹೋದರರಾಗುವುದಿಲ್ಲವೆ? ವ್ಯಾಪಾರ-ವಹಿವಾಟುಗಳು ನಡೆಯಬೇಕಾದರೆ, ವ್ಯಕ್ತಿ-ಸಂಘ-ಸಮಾಜ-ರಾಷ್ಟ್ರ-ರಾಷ್ಟ್ರಗಳೊಳಗೆ ಮೈತ್ರಿ-ವೈಮನಸ್ಸುಗಳು ಬೆಳೆಯಬೇಕಾದರೆ, ಜನಾಂಗವು ಜೀವಂತವಾಗಿ ಬಾಳಬೇಕಾದರೆ, ಸಾಲ ಕೊಡುವ-ಕೊಳ್ಳುವ ಪದ್ಧತಿಗಳು ಬೇಕೇ ಬೇಕು. ಸಾಕಾಗಿ ಹೆಚ್ಚಾದಾಗ ಸಾಲಕೊಡಬೇಕು, ಸಾಲದಾಗ ಸಾಲತೆಗೆಯಬೇಕು. ಇದೇ ಪ್ರಪಂಚದ ವ್ಯವಹಾರಕ್ಷೇತ್ರದ ಮುಖ್ಯ ಸಾಧನ.

೬. ತಾಳಮದ್ದಲೆ

ತಾಳಮದ್ದಲೆಯು ನಮ್ಮ ಜಿಲ್ಲೆಯವರಿಗೆ ಹೊಸತಲ್ಲ. ಇದು ಯಕ್ಷಗಾನಕಲೆಯ ಮೂಲವಾದ ಬಯಲಾಟದ ಸುಸಂಸ್ಕೃತರೂಪ; ಮಳೆಗಾಲದ ಕಾರಿರುಳನ್ನು ಕಳೆಯಲು ಹಳ್ಳಿಯ ಹಿರಿಯರು ಏರ್ಪಡಿಸಿದ ಒಂದು "ಏರ್ಪಾಡು" ಅಥವಾ "ವಿಲೆವಾರಿ." ಈ "ವಿಲೆವಾರಿ"ಗೆ ತಾಳ ಅಥವಾ ಜಾಗಂಟೆ, ಮದ್ದಲೆ, ಶ್ರುತಿ— ಇಷ್ಟು ಅಗತ್ಯ.

ಇಂದಿನ ಸುಧಾರಿತರ ದೃಷ್ಟಿಯಲ್ಲಿ ಹಿಂದಿನ ತಾಳಮದ್ದಲೆಯ ಕೂಟವೆಂದರೆ, ಹತ್ತು ಜನ ಹಳ್ಳಿಯ "ಬೆಪ್ಪ ತಕ್ಕಡಿ"ಗಳ ಕೂಟ. ತಾಳಮದ್ದಲೆಯು ಸಮಾಪ್ತಿ ಹೊಂದಿದ ಮೇಲು ಕೂಡ—"ಈ ದಿನ ಯಾವ ಪ್ರಸಂಗವಾಗಿತ್ತು ಸ್ವಾಮಿ, ಪಂಚವಟಿಯೋ ಅಲ್ಲ ಕೃಷ್ಣಸಂಧಾನವೋ?" ಎಂದು ಸಂಶಯದಲ್ಲಿ ಬಿದ್ದು, ಕೊನೆಗೆ ಯಾರಿಗೂ ಯಾವುದೂ ನಿರ್ಧಾರವಾಗದೆ, ತಲೆತೂಕಡಿಸುತ್ತ ಮನೆಗೆ ಹೋಗುವ "ಬೆಚ್ಚರ್ಪ್ಪ" ಗಳೇ ಆ ಕೂಟದ ಸಭಿಕರಾಗುತ್ತಿದ್ದರು. ಹಿಂದಿನ ತಾಳಮದ್ದಲೆಯ ಸರಿಯಾದ ಪರಿಚಯವಾಗಬೇಕಾದರೆ, ಆ ಹಳೆಯ ಕೂಟದ ಚಿತ್ರವೊಂದನ್ನು ಕಲ್ಪಿಸಿಕೊಂಡು, ಆ ಕೂಟದಲ್ಲಿ ನಾವೂ ಸೇರಿಕೊಳ್ಳಬೇಕಾಗಿದೆ. ತಾಳಮದ್ದಲೆಯ ದಿನವು ಮೊದಲೇ ನಿಶ್ಚಿತವಾಗುವುದು. ಊರ ಪಟೇಲರಿಗೆ, ಶ್ಯಾನುಭಾಗರಿಗೆ, ಮೊಕ್ತೇಸರರಿಗೆ, ಗೌಡರಿಗೆ, ಗುತ್ತೆಯವರಿಗೆ, ಹೆಬ್ಬಾರರಿಗೆ ಎಲೆ ಅಡಿಕೆ ಸೀಯಾಳಗಳ ಕಾಣಿಕೆಯೊಂದಿಗೆ ಹೇಳಿಕೆಯಾಗುವುದು. ನಾಲ್ಕು ದಿನಗಳಿಗೆ ಮೊದಲೇ ಊರಲ್ಲೆಲ್ಲಾ ತಾಳಮದ್ದಲೆಯ ಸುದ್ದಿ, ತಾಳಮದ್ದಲೆಯ ಸಿದ್ಧತೆ, ತಾಳಮದ್ದಲೆಯ ಪ್ರತಾಪ! ಭಾಗವತರು ದಿನಾಲೂ ಕಷಾಯ-ಗಿಷಾಯ ಕುಡಿದು, ಗಂಟಲು-ಗಿಂಟಲು ಸರಿಪಡಿಸಿಕೊಳ್ಳುವರು; ಅರ್ಥಧಾರಿಗಳು ಅರ್ಥವನ್ನು ಗಟ್ಟಿಮಾಡಿಕೊಳ್ಳುವರು; ಮದ್ದಲೆಯವರು ಮದ್ದಲೆಗೆ "ಕುಟ್ಟಿಹಾಕಿ" ಸರಿಮಾಡುವರು.

ಕೊನೆಗೊಂದು ದಿನ ತಾಳಮದ್ದಲೆಯ ನಿಶ್ಚಿತದಿನವು ಬಂದೇ ಬರುವುದು. ಮಳೆಗಾಲದ ಕಾರಿರುಳಲ್ಲಿ ಕೊಳ್ಳಿದೆವ್ವಗಳಂತೆ "ಸೂಟೆ"ಗಳನ್ನು

ಬೀಸುತ್ತಾ ದೂರದೂರದಿಂದ ನಡೆದು ಬಂದು, ಜನರೆಲ್ಲಾ ನಿಶ್ಚಿತಸ್ಥಳದಲ್ಲಿ ಕೂಡುವರು. ಹೆಚ್ಚಾಗಿ ಗ್ರಾಮಚಾವಡಿ, ಅಥವಾ ಗ್ರಾಮಶಾಲೆಯೇ ತಾಳಮದ್ದಲೆಯ ರಂಗಸ್ಥಳ. ರಂಗಸ್ಥಳದ ಮಧ್ಯೆ ಮಿಣಮಿಣನೆ ಉರಿಯುತ್ತಾ, ಮಳೆಗಾಳಿಗೆ ಕುಣಿಯುವ, ಹಾರುವ, ಒದ್ದಾಡುವ ದೀಪ, ಅದರೆದುರು ಭಾಗವತರ "ಸೀಟು," ಮುಂದೆ ಎರಡೂ ಬದಿಗಳಲ್ಲಿ ಅರ್ಥಧಾರಿಗಳ "ಲೈನು", ಅವರ ಹಿಂದೆ ಅರ್ಥವನ್ನಾಲಿಸುವವರ ಸಭೆ. ಆ ಸಭೆಯಲ್ಲಿ ಅಲ್ಲಿ ಗುತ್ತಿನವರು, ಇಲ್ಲಿ ಪಟೇಲರು, ಆಚೆಯಲ್ಲಿ ಗುರಿಕಾರರು, ಈಚೆಯಲ್ಲಿ ಮೊಕ್ತೇಸರರು. ಎಲ್ಲರ ಮುಖದಲ್ಲಿಯೂ ಶ್ರದ್ಧೆ, ಭಕ್ತಿ, ಆತುರ, ಆದರ. ಎಲ್ಲರ ದೃಷ್ಟಿಯೂ ಅರ್ಥಧಾರಿಗಳ ಮೇಲೆ, ಭಾಗವತರ ಮೇಲೆ.

ತಾಳಮದ್ದಲೆಗೆ ಭಾಗವತರು ಅತಿ ಅಗತ್ಯ. ಭಾಗವತರೆಂದರೆ—ಅವರನ್ನು ನೋಡುವಾಗಲೇ--"ಇದು ಒಂದು ಜನ ಹೌದು!" ಎನ್ನಿಸಬೇಕು, ಅಂಥವರು! ಜರಿಯು ನೆಗೆದು ಕಾಣುವಂತೆ ನೆರಿನೆರಿಯಾಗಿ ಮಡಚಿ ಉಟ್ಟ ಉದ್ದವಾದ ದೋತರ; ಕುತ್ತಿಗೆಯಿಂದ ಮೊಣಕಾಲಿನ ವರೆಗೆ ತೊಟ್ಟ ಇಪ್ಪತ್ತೈದು ಗುಬ್ಬಿಗಳಿರುವ ಮಾಂಧಾತರಾಯನ ಕಾಲದ ಕರಿಯ "ಕೋಟು"; ಅದರ ಮೇಲೆ ಹಿಂದೊಂದು ಮುಂದೊಂದು ಬಾಲವನ್ನಿಳಿಯಬಿಟ್ಟ ಜರಿಯ ಶಾಲು; ಅರ್ಥ ತಲೆಯನ್ನು ಸರಿಯಾಗಿ ಮುಚ್ಚುವ ಮೂವತ್ತು ಮೊಳದ ಜರಿಯ ಮುಂಡಾಸು! ಇಷ್ಟೆಲ್ಲಾ ವೇಷಭೂಷಣಗಳಿಂದೊಪ್ಪಿ, ಗಂಧಾಕ್ಷತೆಗಳಿಂದಲಂಕೃತರಾಗಿ, ಬಾಯಿತುಂಬಾ ಎಲೆ-ಅಡಿಕೆಯನ್ನು "ಜಮಾಯಿಸಿ"ಕೊಂಡ ಅನಂತರವೇ ಭಾಗವತರ ಸಭಾಪ್ರವೇಶ.

ಒಂದೊಂದು ಸಲ ಭಾಗವತರು ಬಾರದೆ ತೊಂದರೆಯಾಗುವುದೂ ಇದೆ. ಮಳೆಯಿಂದಾಗಿ ಹೊಳೆ ಕಟ್ಟಿಹೋದರೆ, ಶೀತದಿಂದಾಗಿ ಗಂಟಲು ಬಿದ್ದುಹೋದರೆ, ಕೊಡೆ ಮುರಿದುಹೋಗಿ ಮುಂಡಾಸು ಒದ್ದೆಯಾದರೆ, ಭಾಗವತರು ಆ ದಿನ ನಾಮ! ಆದರೂ ಕಾಲಕ್ಷೇಪವು (ತಾಳಮದ್ದಲೆಯ ಇನ್ನೊಂದು ಹೆಸರು) ಹೇಗಾದರೂ ಸುಧಾರಿಸಿಯೇ ಹೋಗುವುದು. ಕಾಲಕ್ಷೇಪಕ್ಕೆ ಕೂಡಿದ ಜೋಮ, ದೂಮುರಂತಹ ನಾಲ್ಕಾರು

ಜನರ ಪೈಕಿಯಲ್ಲಿ ಒಬ್ಬನು ಭಾಗವತನಾಗುವನು, ಇನ್ನೊಬ್ಬನು ಮದ್ದಲೆಗೆ ಪೆಟ್ಟುಹಾಕುವನು, ಮತ್ತೊಬ್ಬನು ಶ್ರುತಿಹಿಡಿಯುವನು. ಅರ್ಥಧಾರಿಗಳ ಸಂಖ್ಯೆಯು ಕೂಡ ಕಡಮೆಯಾದರೆ, ಭಾಗವತರೂ ಮದ್ದಲೆಯವರೂ ಸೇರಿಕೊಂಡು, ಹೇಗಾದರೂ ಅರ್ಥವನ್ನು "ಹಾರಿಸಿಬಿಡು"ವರು.

ಭಾಗವತರ ಸವಾರಿಯು ಚಿತ್ತೈಸಿದೊಡನೆಯೇ ಅರ್ಥಧಾರಿಗಳೆಲ್ಲರೂ ಸರಿಯಾಗಿ ಕುಳಿತುಕೊಳ್ಳುವರು. ಪ್ರಸಂಗವು ಹೆಚ್ಚಾಗಿ ಆ ಮೇಲೆಯೇ ನಿಶ್ಚಿತವಾಗುವುದು. ಕೆಲವು ವೇಳೆ ಚರ್ಚೆಯುಂಟಾಗಿ ಅಧಿಕ-ಪ್ರಸಂಗವಾಗುವುದೂ ಇದೆ. ಅರ್ಥ ಹಂಚುವಾಗಲಂತೂ ದೊಡ್ಡ "ಗದ್ದೆಗೋರಿ"ಯೇ ಆಗಿ, ಅನರ್ಥವಾಗುವುದು. ಹೇಗೂ, ಮಧ್ಯರಾತ್ರಿಯೊಳಗೆ ಇದೆಲ್ಲಾ ಮುಗಿದು, "ಗಜಾನನಂ ಭೂಥಗಣಾಧಿಸೇ ವಿಥಪಥಂ" ಎಂಬ ಗಣಪತಿ ಪ್ರಾರ್ಥನೆಯೊಂದಿಗೆ ತಾಳಮದ್ದಲೆಯು ಪ್ರಾರಂಭವಾಗುವುದು.

ಬುಟ್ಟಿಯೊಳಗಿನ ನಾಗರಹಾವಿನ ಹೆಡೆಯಾಡಬೇಕಾದರೆ, ಡೊಂಬರವನ ಶ್ರುತಿಯು ಕಿವಿಗಿಂಪಾಗಿರಬೇಕು. ಹಾಗೆಯೇ, ಭಾಗವತರ ಬುರುಡೆಯಲ್ಲಾಡಿ ರಾಗವು ಹೊರಗುರುಳಬೇಕಾದರೆ, ಶ್ರುತಿಯು ಕಿವಿಯ ಬಳಿಯಲ್ಲೇ ಇದ್ದು, ಭಾಗವತರ ಕಂಠಕ್ಕೆ ಕೂಡಬೇಕು; ಇಲ್ಲವೆ ಭಾಗವತರ ಕಂಠವು ಶ್ರುತಿಗೆ ಕೂಡಬೇಕು; ಇವೆರಡೂ ಮದ್ದಲೆಯ ಸ್ವರಕ್ಕೆ ಜೊತೆಯಾಗಬೇಕು. ಇವುಗಳೊಳಗೆ ಎಣ್ಣೆ-ಸೀಗೆಯ ಸ್ನೇಹವೇ ಹೆಚ್ಚು. ಹೇಗಿದ್ದರೂ, ಈ ಮೂರು ಸ್ವರಗಳೂ ಒಟ್ಟಿಗೆ ಬೆರೆತು, ಕೇಳುವವರಿಗೆ "ಕೇಳೋಣ" ಎನ್ನಿಸಬೇಕಾದರೆ, ಹೆಚ್ಚು-ಕಡಮೆ ಒಂದು ಘಂಟೆಯಾದರೂ ಬೇಕು. ಈ ಮಧ್ಯೆ ಮದ್ದಲೆಗೆ ಕುಟ್ಟಿಹಾಕಿಕೊಳ್ಳುವುದು, ಶ್ರುತಿಯ ಕಣ್ಣುಗಳಿಗೆ ಮೇಣ ಅಂಟಿಸಿಕೊಳ್ಳುವುದು, ಭಾಗವತರ ಗಂಟಲನ್ನು "ಸಪಾಯಿ" ಮಾಡಿಕೊಳ್ಳುವುದು, ಎಲೆ-ಅಡಿಕೆ ಜಗಿಯುವುದು ಮತ್ತು ಉಗುಳುವುದು — ಈ ಕಾರ್ಯಗಳೆಲ್ಲಾ ಆಗಬೇಕು. ಶ್ರುತಿಯ ಸ್ವರವನ್ನು ಆಲಿಸುತ್ತ ಆಲಿಸುತ್ತ, ಭಾಗವತರಿಗೆ ಹಾಗೆ ಒಂದು ನಮೂನೆಯಾಗಿ, ಮೈಮೇಲೆ ಆವೇಶವು ಬರತೊಡಗುವುದು. ಅವರು ಮೆಲ್ಲ ಮೆಲ್ಲನೆ ಮುಂಡಾಸಿನ ಅಡಿಯಲ್ಲಡಗಿದ ತಲೆಯನ್ನಲ್ಲಾಡಿಸುತ್ತಾ, ಮಾಸೆ

ಹುರಿಯೇರಿಸಿ, ಕಣ್ಣಾಲಿಗಳನ್ನು ಮೇಲೇರಿಸಿ, ನಿಧಾನವಾಗಿ ಹಾವ-ಭಾವ-ಸ್ವಭಾವ-ದುರ್ಭಾವಯುಕ್ತವಾಗಿ ಬಾಯಿತೆರೆದು "ಫೋರ್ಸಿ"ನಿಂದ ಒಂದು "ಪಾತಾಳ ಮೈರಾವಣನ ರಾಗ" ತೆಗೆದು ಅರಚಿದರೆಂದರೆ, ಇಂಪಾದ ಆ ಸಂಗೀತ-ಚೀತ್ಕಾರವನ್ನು ಕೇಳಿ, ಎರಡು ಮೈಲು ವಿಸ್ತೀರ್ಣದೊಳಗಿನ ನಾಯಿಗಳೆಲ್ಲಾ ಒಂದೇ ಸಲ ಹೌಹಾರಿ ಬೀಳುವುದೂ ಇದೆ. ಓರೆ-ಕೋರೆಯಾಗಿ, ಏರು-ತಗ್ಗಾದ ನಾನಾ ತಿರುಗಾಸುಗಳಿಂದ ಕೂಡಿದ ಈ ಸ್ವರವು ಹೊಟ್ಟೆಯಲ್ಲಿ ಹುಟ್ಟಿ, ಗಂಟಲಿನಲ್ಲಿ ಸಿಲುಕಿ, ಬಾಯಿಯಲ್ಲಿ ಹೊರಳಿ, ಮರಳಿ, ಕೆರಳಿ, ಹೊರಗುರುಳುವಾಗ ಈ ಸ್ವರಕ್ಕೂ, ಶ್ರುತಿ ಮತ್ತು ಮದ್ದಲೆಯ ಸ್ವರಕ್ಕೂ ಸ್ವರ್ಗ-ಮರ್ತ್ಯ-ಪಾತಾಳಗಳೊಳಗಿರುವಷ್ಟು ಅಂತರವೇ ಬಂದುಬಿಡುವುದು. ಸ್ವರವು ಏರುತ್ತಾ ಹೋದಂತೆ, ಭಾಗವತರೂ ಕುಳಿತಲ್ಲಿಯೇ ಹಾರಿ ಹಾರಿ ಬೀಳುವರು. ನಮ್ಮೂರಿನಲ್ಲಿ ಒಬ್ಬ ವಿಚಿತ್ರ ಭಾಗವತರಿದ್ದಾರೆ. ಅವರು ಜಾಗಟೆಯನ್ನು ಹಿಡಿದರೆಂದರೆ, ಅವರ ಆವೇಶವೇ ಆವೇಶ! ಜಗುಲಿಯ ಒಂದು ತುದಿಯಲ್ಲಿ ಕುಳಿತಿದ್ದರೆ, ಪದ ಹಾಡುವ ರಭಸದಲ್ಲಿ "ಗೋಂಕುರು ಕಪ್ಪೆ"ಯಂತೆ ಕುಪ್ಪಳಿಸುತ್ತಾ, ಜಗುಲಿಯ ಇನ್ನೊಂದು ಮೂಲೆಗೆ ಪ್ರಯಾಣ ಬೆಳೆಯಿಸಿಬಿಡುವರು. ಮದ್ದಲೆ ಮತ್ತು ಶ್ರುತಿಯವರ ಪರಿವಾರವೂ ಅವರೊಂದಿಗೇ "ಸರ್ಕೀಟು" ಬಿಟ್ಟರೆ ಸರಿ; ಇಲ್ಲವಾದರೆ, ಶ್ರುತಿಗಾರರೊಂದು ಕಡೆ, ಮದ್ದಲೆಗಾರರು ಮತ್ತೊಂದೆಡೆ, ಭಾಗವತರು ಬೇರೊಂದೆಡೆ!

ತಲೆಯ ನಾಟ್ಯವನ್ನು ನೋಡಬೇಕಾದರೆ, ಮದ್ದಲೆಗಾರರ ಕಡೆಗೆ ದೃಷ್ಟಿಹೊರಳಿಸಬೇಕು. ಎಲ್ಲಾ ರೀತಿಯ ಮುಖವಿಕಾರಗಳನ್ನೂ ಕಾಣಬಹುದು; ತಲೆಯ ಮೇಲೆ ಅಕ್ಕಿಯ ಮುಡಿಯನ್ನಿಟ್ಟರೂ ಹಾರಿ ಹೋಗಬಹುದು. ಶ್ರುತಿಯವರಿಗೆ ಎರಡೇ ಕೆಲಸ; ಶ್ರುತಿಯನ್ನೂದುತ್ತಾ ಊದುತ್ತಾ ನಿದ್ದೆಮಾಡುವುದು, ಮತ್ತು ಭಾಗವತರ ಕುಟ್ಟಿ ಬಿದ್ದೊಡನೆ ಕಣ್ಣುತಿಕ್ಕಿಕೊಂಡು ಪುನಃ ಶ್ರುತಿಯನ್ನೂದುವುದು.

ತಾಳಮದ್ದಲೆಯು "ಗಡದ್ದು" ಆಗುವುದು ಅರ್ಥಧಾರಿಗಳ ಮಾತುಕತೆಗಳ ಚಾತುರ್ಯದಿಂದ, ಅರ್ಥದ ಬಲದಿಂದ. "ಬಲ" ಎಂದರೆ, ಚರ್ಚೆಯು ಹೆಚ್ಚಾದರೆ, ಕೊನೆಗೆ ಜಗಳವೇ ಬಲವಾಗುವುದು. ಭಾಗ

ವತರ ಒಂದೊಂದು ಪದವು ಮುಗಿದೊಡನೆಯೇ ಅರ್ಥಕ್ಕೆ ಪ್ರಾರಂಭ ವಾಗುವುದು. ಒಬ್ಬೊಬ್ಬ ಅರ್ಥಧಾರಿಯು, ಮೊದಲೇ ನಿಶ್ಚಿತವಾದಂತೆ, ಪ್ರಸಂಗದೊಳಗಿನ ಒಂದೊಂದು ಪಾತ್ರದ "ದಲಾಲೀ-ವಕಾಲತ"ನ್ನು ವಹಿಸಿಕೊಂಡು ಮಾತನಾಡುವನು. ಪ್ರಥಮದಲ್ಲಿ ಹೆಚ್ಚಾಗಿ ಒಡ್ಡೋಲ ಗದ ಅರ್ಥವೇ ಬರುವುದು. ರಾವಣ, ಮೈರಾವಣ, ಭೀಮ, ಕೌರವ, ಕೀಚಕ— ಇತ್ಯಾದಿ ಪಾತ್ರಗಳನ್ನು ಬಣ್ಣದ ಅರ್ಥವೆಂದು ಕರೆಯುವರು. ಇವು ಕೆಲವರಿಗೆ ಮಾತ್ರ ಕಟ್ಟಿಟ್ಟ ಅರ್ಥ. ಧರ್ಮರಾಯ, ಸುಗ್ರೀವ, ಧೃತರಾಷ್ಟ್ರ, ಋಷಿಗಳು ಇತ್ಯಾದಿ ಪಾತ್ರಗಳನ್ನು ಬರೀ "ಪಾಪದ ಜನ" ರಿಗೇ ಕೊಡುವುದು ವಾಡಿಕೆ; ಬಯಲಾಟದಲ್ಲಾದರೆ, ಧರ್ಮರಾಯನ ಪಾತ್ರವು ಪೆಟ್ಟಿಗೆ ಹೊರುವವನ ಪಾಲಿಗೆ ಬೀಳುವುದೇ ಹೆಚ್ಚು. ಸ್ತ್ರೀ ಪಾತ್ರಗಳ ಅರ್ಥವನ್ನು ಯಾರೂ ವಹಿಸಿಕೊಳ್ಳಬಹುದು. ಯಾಕೆಂದರೆ, ತಾಳಮದ್ದಲೆಯಲ್ಲಿ ವಯಸ್ಸಿನ "ಪಿಕಲಾಟ"ವಿಲ್ಲ.

ಒಡ್ಡೋಲಗದ ಅರ್ಥವನ್ನು ಹೇಳುವವರು ಪೀಠಿಕೆಯಲ್ಲೇ ರಾಮಾ ಯಣ-ಭಾಗವತ-ಭಾರತಗಳ ಅರ್ಥಾಂಶವನ್ನು ಮುಗಿಸಿಬಿಡುತ್ತಾರೆ. ಇದರಲ್ಲಿ ಅಷ್ಟದಿಕ್ಪಾಲಕರು, ಅವರ ಪಟ್ಟಣ ಮತ್ತು ವಾಹನಗಳ ಹೆಸರು ಗಳೆಲ್ಲಾ ಬರಬೇಕು; ಜೊತೆಗೆ ಅಮರದ ಎಂಟು-ಹತ್ತು ಶ್ಲೋಕಗಳ ನ್ನಾದರೂ ಹೇಳದಿದ್ದರೆ, ಆ ಅರ್ಥಕ್ಕೆ ಬೆಲೆಯೇ ಇಲ್ಲ. ಅಷ್ಟ ದಿಗ್ಗಜ ಗಳು, ಹದಿನಾಲ್ಕು ಲೋಕಗಳು, ಹದಿನೆಂಟು ಪುರಾಣಗಳು—ಇವೆಲ್ಲಾ ಸಾಮಾನ್ಯವಾಗಿ ಎಲ್ಲಾ ಅರ್ಥಗಳಲ್ಲಿಯೂ ಬಂದೇ ಬರುತ್ತವೆ. ಅತಳ, ವಿತಳ, ಸುತಳ—ಕೊನೆಗೆ ತಳಪಳಾದಿ "ಈರೇಳು ಹದಿನಾಲ್ಕು ಚತು ರ್ದಶ" ಭುವನಗಳನ್ನೆಲ್ಲಾ ತಂದು ಒಟ್ಟು ಸೇರಿಸಿ, ಒಂದು "ಕೋರ್ಜಿ"ಗೆ "ಭರ್ತಿ" ಮಾಡಿಬಿಡುವರು. ಯುದ್ಧಕ್ಕಾರಂಭವಾಯಿತೆಂದರೆ, ಯಾರೂ ಎಂದೂ ಕೇಳದ ಶಸ್ತ್ರಾಸ್ತ್ರಗಳ ಹೆಸರುಗಳೆಲ್ಲಾ ಬರುವುವು. ಅರ್ಜು ನನು ಇಂದ್ರಕೀಲಕಕ್ಕೆ ಹೋಗುವ ಮೊದಲೇ ಅವನ ಕೈಯಲ್ಲಿ ಪಾಶು ಪತಾಸ್ತ್ರ, ಗಾಂಡೀವಗಳು ಶೋಭಿಸುವುವು! ನಾಗಾಸ್ತ್ರ, ಉರಗಾಸ್ತ್ರ, ಪನ್ನಗಾಸ್ತ್ರ, ಸರ್ಪಾಸ್ತ್ರ, ವಜ್ರಾಸ್ತ್ರ—ಕೊನೆಗೆ ಅಂಗವಸ್ತ್ರವು ಕೂಡಾ ಈ ಅಸ್ತ್ರಗಳ ಜೊತೆಯಲ್ಲಿ ಸೇರಿಬಿಡುವುದಿದೆ. "ನಿನ್ನ ಶಸ್ತ್ರಾಸ್ತ್ರಗಳ

ನ್ನೆಲ್ಲಾ ನನ್ನ ಅಂಗವಸ್ತ್ರದಲ್ಲಿ ಕಟ್ಟಿ ಬಿಗಿದಿದ್ದೇನೆ!" ಎಂದು ಬಿಟ್ಟರೆ, ಎಂತಹ ಪ್ರಚಂಡ ಅರ್ಥಧಾರಿಯಾದರೂ ಬಾಯಿ ಮುಚ್ಚಲೇ ಬೇಕು! ತಾಳಮದ್ದಲೆಯಲ್ಲಿ ಹತ್ತು ಜನರಿಂದ "ಸೈ ಸೈ" ಎನ್ನಿಸಿಕೊಳ್ಳಬೇಕಾದರೆ, ಎದುರರ್ಥಗಾರನ ಬಾಯಿಯನ್ನು ಕಟ್ಟುವಷ್ಟು ಸಮರ್ಥನಾದ ಮಾತುಗಾರನಾಗಬೇಕು. ಗೋಣಿಗೆ ತಾಗಿದ ಮೇಣದಂತೆ ಸೋತರೂ ಮಾತನ್ನು ಬಿಡದ ಪ್ರತಿಸ್ಪರ್ಧಿಗಳೀರ್ವರೂ ಚರ್ಚೆಯ ಮಲ್ಲರಾದರೆ, "ಬಿಗುವಿನ ಅರ್ಥಧಾರಿ"ಗಳಾದರೆ, ಭಾಗವತರಿಗೆ "ಮೇಕೆ ಕಡೆ"ಯಲು ತುಂಬಾ ಸಮಯ ಸಿಗುವುದು. ಒಬ್ಬನು ಕೌರವನ ತಮ್ಮಂದಿರ ಹೆಸರುಗಳನ್ನು ಕೇಳಿದರೆ, ಎದುರಿಯುವನು ಕೃಷ್ಣನ ಹದಿನಾರು ಸಾವಿರದೆಂಟು ಮಂದಿ ಹೆಂಡತಿಯರ ಹೆಸರುಗಳ ಪಟ್ಟಿಯನ್ನು ಕೇಳುವನು. ಅಂತೂ, ಹೆಚ್ಚಾಗಿ ಅರ್ಥಗಾರರ ಚರ್ಚೆಯಲ್ಲೇ ಜಾಮ ಕೋಳಿಯು "ಬಾಂಗ್" ಕೊಡತೊಡಗುವುದು. ಕೊನೆಗೆ ಭಾಗವತರು ಪ್ರಸಂಗವನ್ನು "ಹಾರಿಸಿ" ಹೇಗೂ ಮಂಗಳ ಪದಕ್ಕೆ ಮುಟ್ಟಿಸಿಬಿಡುತ್ತಾರೆ.

ಪ್ರಸಂಗದ ಪದಗಳ ಸರಿಯಾದ ಅರ್ಥಜ್ಞಾನವಿಲ್ಲದ ಕೆಲವು ಅರ್ಥಧಾರಿಗಳು, ಪದಕ್ಕೂ ಅರ್ಥಕ್ಕೂ ಹೊಂದಿಕೆಯಾಗುವಂತೆ, ಅರ್ಥವನ್ನು ಮೊದಲೇ ಬರೆದು ಬಾಯಿಪಾಠ ಮಾಡಿಕೊಳ್ಳುವರು. ಅರ್ಥ ಹೇಳುವಾಗ ಭಾಗವತರ ಪದವು ಸ್ವಲ್ಪ ಹಿಂದು ಮುಂದಾಗಿ ಬಿಟ್ಟರೆ, ಪದಕ್ಕೂ ಅರ್ಥಕ್ಕೂ ತಾಳೆ ತಪ್ಪಿಹೋಗುವುದು. ಅರ್ಥಧಾರಿಯು ತಾನು ಕಲಿತ ಕ್ರಮದಿಂದಲೇ ಅರ್ಥವನ್ನು ಮುಂದುವರಿಸುತ್ತಾ ಹೋಗುವನು; ಅರ್ಥದ ಗಂಧವನ್ನೇ ಅರಿಯದ ಭಾಗವತರಂತೂ, ತಮ್ಮಷ್ಟಕ್ಕೇ ಪದ ಹಾಡುತ್ತಾ ಹೋಗುವರು; ಮುಂದಿನ ಪದವು ಮರೆತುಹೋದಾಗ ರಾಮಾಯಣದಿಂದ ಭಾರತಕ್ಕೂ "ಲಾಗ ಹಾಕು"ವರು. ಒಟ್ಟಾರೆ ಮೇಲೆ ಪದ ಒಂದಾದರೆ, ಅರ್ಥವಿನ್ನೊಂದು. ಪ್ರಸಂಗಾಂತ್ಯದ ವರೆಗೂ ಹೀಗೆಯೇ ಮುಂದುವರಿಯುವುದೂ ಇದೆ. ಇನ್ನು ಕೆಲವರು, ಪದವು ಯಾವುದೇ ಇರಲಿ, ಎಲ್ಲಾ ಪದಗಳಿಗೂ ಒಂದೇ ರೀತಿಯ ಅರ್ಥದಿಂದ "ಸುಧಾರಿಸಿ ಬಿಟ್ಟು" ಊದುವ ಶಂಖವನ್ನು ಊದಿಯೇ ಬಿಡುವರು.

ರಸಪೋಷಣೆಯಲ್ಲಂತೂ ಅರ್ಥಧಾರಿಗಳು ಅಸಮಾನವೀರರು.

ದುಃಖರಸವನ್ನು ವ್ಯಕ್ತಪಡಿಸಬೇಕಾದಲ್ಲಿ—"ಅಯ್ಯೋ, ಇಂಥಾ ಕಠಿಣ ವಾಗಿಕ್ಕೊಂಡಿರತಕ್ಕಂಥಾ ಧುಃಕ್ಕದಲ್ಲಿ ಏನು ಹೇಳಲಿಕ್ಕೂ ಬರುವುದಿಲ್ಲ ವಲ್ಲಾ, ಏನು ಮಾಡಲಿ?" ಎಂದು ಅಲ್ಲಿಗೇ ಪೂರ್ಣಾಹುತಿಗೊಳಿಸಿದರೆ ಮುಗಿಯಿತು. ಪ್ರಚಂಡ ರೋಷವನ್ನು ತೋರ್ಪಡಿಸಬೇಕಾದರೆ—"ಆಹಾ! ಈ ಕೂಡಲೇ ನಾನು ಸಿಟ್ಟೆಂಬಂಥಾ ಕೋಪದ ಕ್ರೋಧಾಗ್ನಿಯನ್ನು ನಖಶಿಖಾಂತದ ವರೆಗೆ ಧರಿಸುವಂಥವನಾಗುತ್ತೇನಯ್ಯ! ಕೇಳಿ ಕೇಳಿ!" ಎನ್ನುತ್ತಾ ಒಂದೆರಡು ಭಯಂಕರ ಆರ್ಭಟೆಗಳನ್ನು ಕೊಟ್ಟುಬಿಡುವರು. ವೀರರಸಕ್ಕೆ ಚೆಂಡೆ ಮತ್ತು ಆರ್ಭಟೆಗಳೇ ಪ್ರಧಾನ. ಇನ್ನುಳಿದ ರಸ ಗಳೆಲ್ಲಾ ಇವರ ಪಾಲಿಗೆ ಪಾದರಸವೇ ಸರಿ. ಸಾಯುವ ಸಂದರ್ಭದಲ್ಲಿ ಕೆಲವು ಅರ್ಥಧಾರಿಗಳು ಹೀಗೆ ಹೇಳುವುದೂ ಇದೆ– "ಆಹಾ, ವೈರಿಯ ಕೂರಸಿಯ ಮಾರ್ಘಣೆಗಳೆಂಬ ಶರಭಾಣಗಳ ವೇಧನೆಯನ್ನು ತಡೆಯ ಲಾರದೆ, ನನ್ನ ಪಂಛ ಪ್ರಾಣಗಳೆಂಬಂಥಾ ಜೀವಗಳು ಹೋಗಿಬಿಡು ವಂಥಾದ್ದಾಯಿತಲ್ಲಾ, ಹಯ್ಯೋ! ಇದಕ್ಕೇನುಪಾಯಮಾಡಲಿ?" ಅಕ್ಷರ ಗಳ ಹಾಗೂ ಶಬ್ದಗಳ ಸರಿಯಾದ ಉಚ್ಚಾರಣೆಯನ್ನರಿಯದ ಕೆಲವು ಅರ್ಥಧಾರಿಗಳ ಅರ್ಥ-ಶೈಲಿಯು ಕೇಳುವುದಕ್ಕೆ ಬಲು ಸೊಗಸಾಗಿರು ವುದು—"ಏ ಅಭಿಮಾನ್ಯ! (ಅಭಿಮನ್ಯು) ಈ ಚಕ್ರಹೂಯದಲ್ಲಿ ಉದ್ದ (ಯುದ್ಧ) ಮಾಡ್ಲಿಕ್ಕಾಗಿ ಈ ಕುರುಚೇತ್ರಕ್ಕೆ ನಾವುಗಳು ಬಂದುಕೊಂಡ ದ್ದಾಯಿತಲ್ವೊ? ಜೈರತ (ಜಯದ್ರಥ) ಬಾಗ್ಲಲ್ಲಿ ನಿಂತಿದ್ದಾನೆ 'ಕುತ್ತ!' ಹ್ಯಾಗೆ ಅವ್ನಣ್ಣ ಜೈಸೋದು? ನಾಣೇನು ಶಾಮಾಣ್ಯ (ಸಾಮಾನ್ಯ) ಸಾರತಿ ಎಂತ ತಿಳ್ಡಿದ್ದಿಯೊ ನೀಣು? ರತ ಹಾರಿಸ್ತೇಣೆ ನೋಡು!"

ತಾಳಮದ್ದಲೆಯನ್ನು ನೋಡಲು-ಯಾ-ಕೇಳಲು ಕುಳಿತ ಜನರ ದೃಶ್ಯವು ಬಹಳ ಮನೋಹರ. ಅರ್ಥದ ಸಾರವನ್ನು ಹೀರಿ ಅಮಲಾಗಿ, ಕುಳಿತಲ್ಲಿಯೇ "ಬೆಲ್ಲ ತೂಗು"ವವರು ಕೆಲವರು; ಅರ್ಥದ ಚಮತ್ಕಾ ರಕ್ಕೆ ಬೆರಗಾಗಿ ಬಾಯ್ಬಿಟ್ಟು ನೋಡುತ್ತಿರುವವರು ಕೆಲವರು; ಅರ್ಥದ ಅರ್ಥವನ್ನು ಹತ್ತಿರವಿದ್ದವರಿಗೆ ಹೊಗಳಿ ತಿಳಿಸುವವರು ಕೆಲವರು; ಕೈ ಕಾಲುನೀಡಿ, ಬಾಯಿಬಿಟ್ಟು, ಕಣ್ಣುಮುಚ್ಚಿ "ಗಮ್ಮತು" ಗೊರಕೆಹೊಡೆ ಯುತ್ತಾ ಕನಸಿನಲ್ಲಿಯೇ ತಾಳಮದ್ದಲೆಯ "ಮಜಾ" ನೋಡುವವರು

ಕೆಲವರು. ತಾಳಮದ್ದಲೆಯ ಪೂರ್ಣ ಸ್ವಾರಸ್ಯವನ್ನು ತಿಳಿಯಬೇಕಾದರೆ, ಮರುದಿನ ಬೆಳಗ್ಗೆ ಕಣ್ಣುತಿಕ್ಕಿಕೊಂಡು ಮನೆಗೆ ಹೋಗುತ್ತಿರುವ ಈ ಪ್ರೇಕ್ಷಕರ ಗುಂಪಿನ ಜೊತೆಗೆ ಸೇರಿಕೊಂಡರೆ ಸರಿ. "ಕರ್ಣನ ಅರ್ಥ ಎಂದ್ರೆ ಎಂಥಾ ಅರ್ಥಯ್ಯ ಅದು! ಒಂದೊಂದು ಮಾತಿಗೆ ಒಂದೊಂದು ಪವನು ಕೊಡಬೇಕಲ್ಲ! ಅರ್ಜುನನ ಒಂದೇ ಒಂದು ಮಾತಿಗೆ ಹನುಮಂತಾಚಾರ್ರು ಬಾಲ ಮಡಚಿಯೇ ಬಿಟ್ಟರಲ್ಲ!...........ಲಕ್ಕಪ್ಪರೈಳೆ ಮೋನೆಗ್ ಇನಿ ಪೊರ್ಲ್ ಆರತಿ ಆಂಡ್ಯೇ!...........ವೀರ ರಸತ್ತೊ ಅತೋರ್ಗು ನಮ್ಮ ಇಂಬೇರ್—ಸಯ್ತ್ಸಾರ್—ಪೂವಣಿ ಶೆಟ್ರ್ ಬಿಗುತ್ತಾರ್ಯೆ! ಇತ್ತೆ ಸುಧಾರಣೆತ ಮಷ್ಟ್‌ಗ್ ನಮ ಮೂಲೋರ್‌ಕೋಟು ಏರೆನ್ಲ ಬುಡ್ರಾಯೆರ್! ಮಲ್ಲೆ ಬಿರ್ಸೆ ಅತ್ತೊ!.......ಮುರಾಣಿದ ತಾಳ ಮದ್ದೋಳಿಡ್‌ದ್ ಇನಿತ್ತಾವು ಎಡ್ಡೆ ರೈಸಾತಂಡ್ ಅತ್ತೈ? ವಾ ಗಮ್ಮಸ್ತ್! ....ಅಂದೊ, ಎನ ಮೊಷ್ಟುತ ಜೋಡು ಯಾನ್ ಅವೈ ಬುಡ್ಯೇನೊ ದಾನೆ? ....ಎಷ್ಟಾದರೂ ಇವತ್ತಿನ ರಾವಣ ಸ್ವಲ್ಪ ಹಾಳು ಮಾಡಿಬಿಟ್ಟಯ್ಯ! ಭಾಗೋತ್ರ ಕಂಠ ಅಂದ್ರೆ ಕಂಠ ಅಲ್ವೊ ಇವತ್ತು!........ಭೀಮ ಎಲ್ಲಾ ಆದೀತು, ಅರ್ಥದಲ್ಲಾಗ್ಲಿ, ಸ್ವರದಲ್ಲಾಗ್ಲಿ, ಮಾತಿನಲ್ಲಾಗ್ಲಿ, ಗತ್ತಿನಲ್ಲಾಗ್ಲಿ ....ಆದ್ರೆ, ಆ "ಫೋರ್ಸು" ಇಲ್ಲ ನೋಡಿ!........ಪುತ್ತ ಮಾಸ್ತ್ರನ ಅರ್ಥ ಎಲ್ಲ ಒಳ್ಳೆದೇ. ಆದ್ರೆ, ಏನೂ "ರೈಸಿ"ದ್ದು ಸಾಲದು!........ಕೌರವನಿಗೆ ನಮ್ಮ ಶ್ಯಾನುಭೋಗ್ರು ಹಾಗೆ ಹೇಳಬಾರದಿತ್ತು "ಮುಂಡೆ ಗಂಡಾ"ಂತ! ....ಶೂರ್ಪನಖಿ ನೋಡ್ಬೇಕು ನಮ್ಮ ರಾಂಭಟ್ರದ್ದಯ್ಯ! ಆ ಹೊಟ್ಟೆ ನೋಡಿದರೆ ಸಾಕಲ್ಲ!........" ಈ ಟೀಕೆ-ಟಿಪ್ಪಣಿಗಳು ಕೆಲವು ಸಂದರ್ಭಗಳಲ್ಲಿ ಬಹಳ ಬಲವಾಗಿ ಈ ಗುಂಪಿನವರೊಳಗೇ ಪರಸ್ಪರ ಕೈಗೆ ಕೈಹತ್ತಿ "ಮಾರಾಮಾರಿ"ಯಾಗಿ ಮತ್ತೊಂದು ತಾಳಮದ್ದಲೆಯಾಗುವುದೂ ಇದೆ.

ಹಿಂದಿನ ತಾಳಮದ್ದಲೆ-ಕೂಟವು ಇಂದು ಎಷ್ಟೋ ಸುಧಾರಣೆ ಹೊಂದಿದೆ. ಕನ್ನಡದ ಸೇವೆಗೆ ಸೊಂಟಗಟ್ಟಿದ ಕೆಲವು ಮಹನೀಯರ ಸಾಹಸವೇ ಅದಕ್ಕೆ ಕಾರಣ. ಇಂದಿನ ಯಕ್ಷಗಾನ-ಸಭೆಗಳು ಅರ್ಥದ ಗಂಧವನ್ನರಿಯದ "ಪೆದ್ದಬಟ್ಟ"ರಿಂದಲ್ಲ—ನುರಿತ ಕಲಾವಿದರಿಂದ, ಅರಿತ ವಿದ್ವಾಂಸರಿಂದ ತುಂಬಿದೆ. ಆದರೆ, ತಮ್ಮ ತಮ್ಮ ಹೆಸರೇ ಮೇಲಾಗ

ಬೇಕೆಂಬ ದುರಾಗ್ರಹವು ಈ ಕ್ಷೇತ್ರದಲ್ಲಿಯೂ ತಾಂಡವವಾಡುತ್ತಿದೆ. ಇಂದಿನ ಹೆಚ್ಚಿನ ಅರ್ಥಧಾರಿಗಳು ವಕೀಲರನ್ನು ಕೂಡಾ ಮೇಲೆ-ಕೆಳಗೆ ಮಾಡಿಬಿಡುವರು. ಒಂದೊಂದು "ಕೇಸಿ"ನಲ್ಲಿ ಚಿಕ್ಕದೊಂದು "ಪೈಂಟು" ಸಿಕ್ಕಿದರೆ ಸಾಕು—ಯಕ್ಷಗಾನದ ಬದಲು ಹರಿಕತೆಯೇ ನಡೆದುಹೋಗುವುದು. ಮಾತಿನ ಮಲ್ಲಯುದ್ಧದ ಗರಡಿಯಲ್ಲಿ ಯಾವ ಜಟ್ಟಿಯು ಕೈ ಮೇಲಾಗುವುದೋ ಅವನೇ "ಭಯಂಕರ ಅರ್ಥಧಾರಿ!"—ಆ ದಿನದ "ಹೀರೊ!" ಅಥವಾ "ಹಿಟ್ಲರ್!" ಆತನ ಹೆಸರು ಮರುದಿನ ಪತ್ರಿಕೆಗಳಲ್ಲಿ ಮುದ್ದುಮುದ್ದಾಗಿ ಪ್ರಕಟಿಸಲ್ಪಡುವುದು; ಆತನನ್ನು ದೂರದೂರದ ಯಕ್ಷಗಾನ-ಸಭೆಗಳಿಗೆ ಕರೆದೊಯ್ಯಲು "ಸ್ಪೆಶಲ್ ಕಾರು"ಗಳು ಬರುವುವು. ಇಂದಿನ ಯಕ್ಷಗಾನ-ಸಭೆಗಳಲ್ಲಿ ಭಾಗವಹಿಸುವವರು "ಖಾಲಿ-ಪೋಲಿ, ಚಿಲ್ಲರೆ-ಜನ"ಗಳಲ್ಲ—ಡಾಕ್ಟರರು, ವಕೀಲರು, ಪ್ರೊಫೆಸರರೇ ಮೊದಲಾದವರು. ಹೀಗಿರುವಾಗ ಅರ್ಥಹೇಳುವ ಮಧ್ಯೆಮಧ್ಯೆ—"ಉಡುಗೆ ತೊಡುಗೆ" ಎಂಬ ಶಬ್ದದ ಬದಲು "ಡ್ರೆಸ್", "ಬಾಯಿಮುಚ್ಚು" ಎನ್ನುವುದರ ಬದಲು "ಶಟ್ ಅಪ್!" (Shut up) ಎಂಬಿತ್ಯಾದಿ "ಇಂಗ್ಲಿಷು" ಶಬ್ದಗಳು ಬಂದರೂ "No matter!".

ಈಗೀಗ ತಾಳಮದ್ದಲೆಯು ನಾಟಕದ ರಂಗವನ್ನು ಹತ್ತತೊಡಗಿದೆ. ಈ "ತಾಳಮದ್ದಲೆ-ನಾಟಕ"ದಲ್ಲಿ ಭಾಗವತ-ಮದ್ದಲೆಗಾರರ ದರ್ಶನವು ಪ್ರೇಕ್ಷಕರಿಗೆ ಸಿಗುವುದಿಲ್ಲ. ಅರ್ಥಧಾರಿಗಳೆಲ್ಲರೂ ವೇಷಧಾರಿಗಳೇ. ಈಗ ತಾನೇ "ಕಾಫಿಯನ್ನು ಮೇಲೆ-ಕೆಳಗೆ ಸರ್ಕಸು" ಮಾಡುತ್ತಿದ್ದ ಕಾಫೀ ಹೋಟೆಲಿನ "ಪ್ರೊಪ್ರೈಟರ್" ಸಾಹೇಬರು, ಸ್ವರ್ಗದ ಸಭೆಯ ನಡುವೆ, ದೇವೇಂದ್ರನಾಗಿ ಶಚಿಯೊಡನೆ ಒಡ್ಡೋಲಗಸ್ಥರಾಗಿದ್ದಾರೆ! ಗ್ರಾಮದ ಪಟೇಲರು ರಾವಣನ ಅರಮನೆಯ ದ್ವಾರಪಾಲಕನಾಗಿ, ಬಾಗಿಲಲ್ಲಿ ನೆಟ್ಟಗೆ ನಿಂತಿದ್ದಾರೆ! ಜವುಳಿ ಸಾಹುಕಾರರು ಕುಚೇಲನಾಗಿ ದ್ವಾರಕೆಗೆ ಹೊರಟಿದ್ದಾರೆ! ವಕೀಲ ಮಹಾಶಯರು ಬಾಲಕಟ್ಟಿಕೊಂಡು, ಸಮುದ್ರ ಹಾರಿ, ಸೀತೆಯನ್ನು ಹುಡುಕಲು ಹೊರಟಿದ್ದಾರೆ—ಅಷ್ಟರಲ್ಲಿ, ಕಟ್ಟಿದ ಬಾಲವು ಉದುರಿಹೋಯಿತೆಂದು ಸಮುದ್ರಹಾರುವುದನ್ನು ಬಿಟ್ಟು, "ಗ್ರೀನ್ ರೂಮಿ"ನ ಕಡೆಗೆ ತಿರುಗಿದ್ದಾರೆ!........ಈ ನಾಟಕದಲ್ಲಿ ಒಂದೊಂದು ಸಲ

ಅತ್ಯದ್ಭುತವಾದ "ಟ್ರಾನ್ಸ್‌ಫರ್ ಸೀನೆರಿ"ಗಳು ತೋರಿಸಲ್ಪಡುತ್ತವೆ. ರಾವಣನಿಗೆ ಕಟ್ಟಿದ ಒಂಬತ್ತು ತಲೆಗಳ ಪೈಕಿ, ಒಂದೆರಡು ತಮ್ಮಷ್ಟಕ್ಕೇ ಉದುರಿ ಬೀಳುವುವು. ಕರ್ಣಾರ್ಜುನರಿಗೆ ಬಲವಾಗಿ ಯುದ್ಧ ನಡೆಯುತ್ತಾ ಇರುವಾಗ, ಅರ್ಜುನನ ಒಂದು ಬದಿಯ ಮೀಸೆ ಬಿದ್ದುಹೋಗುವುದು; ಉಳಿದ ಅರ್ಧ-ಮೀಸೆಯನ್ನು ಸಿಟ್ಟಿನಿಂದ ಕಿತ್ತೊಗೆಯುವನು. ಹನುಮಂತನು ಸಮುದ್ರವನ್ನು ಹಾರುವುದಕ್ಕಾಗಿ ಆಲೋಚನೆ ಮಾಡುತ್ತಾ ಇರುವಾಗಲೇ, "ರೊಟ್ಟೆ"ಯ ಹನುಮಂತನು ಸರಿಗೆಯ ಮೂಲಕ ಸಮುದ್ರವನ್ನು ಹಾರುತ್ತಾ ಹಾರುತ್ತಾ, ಮಧ್ಯದಾರಿಯಲ್ಲಿ (ಸರಿಗೆ ಸುರುಟಿ ಹೋದುದರಿಂದ) ಸಿಕ್ಕಿಬಿದ್ದು, ತಲೆಕೆಳಗಾಗಿ ತೂಗಾಡುವನು; ಪಾತ್ರಧಾರಿ ಹನುಮಂತರಾಯರು ಅದನ್ನು ಹೇಗಾದರೂ ಸರಿಮಾಡಿ, ಸಮುದ್ರವನ್ನು ಹಾರಿಸಿಯೇಬಿಡುವರು! ಸ್ತ್ರೀ-ಪಾತ್ರಧಾರಿಗಳು ತಲೆಯ "ಟೋಪನು"ಗಳು ಜಾರಿಬಿದ್ದಾಗ ತಲೆಹೋಕರಾಗಿ ನಿಲ್ಲುವರು! "ಸ್ಪ್ರಿಂಗಿ"ನ ಲಾಂಗೂಲಾಸನದ ಮೇಲೆ ಕುಳಿತ ಅಂಗದ ರಾಯನು "ಬೆಲೆನ್ಸ್" ತಪ್ಪಿ, ಬಾಲ ಕಡಿದು, "ಸ್ಟೇಜಿ"ನ ಮೇಲೆ ಉರುಳಿಬೀಳುವನು!........ಈ ಎಲ್ಲಾ ವೇಷಧಾರಿಗಳೂ, ಭಾಗವತರು ಪದಹಾಡುವಾಗ ಗೂಟಗಳಂತೆ ನೆಟ್ಟಗೆ ನಿಂತುಕೊಳ್ಳುವರು. ಈ "ತಾಳಮದ್ದಲೆ-ನಾಟಕ"ವು ಆಚೆ ಬಯಲಾಟವೂ ಅಲ್ಲ, ಈಚೆ ನಾಟಕವೂ ಅಲ್ಲ—ಇವೆರಡರ "ಬೆಸಿಗೆ". ಅಂತೂ ಯಕ್ಷಗಾನ-ಪ್ರಪಂಚದಲ್ಲುಂಟಾದ ಕ್ರಾಂತಿಯು ಕುಂದುಕೊರತೆಗಳಿದ್ದರೂ, ಪ್ರಶಂಸನೀಯವಾಗಿದೆ.

೭. ಕನ್ನಡಿ

ಇದು ಕನ್ನಡಿ-ಯುಗ. ಯುಗವೇ ಕನ್ನಡಿಯಾಗಿ ಜನತೆಯ ಮುಂದೆ ನಿಂತಿದೆ—ನೋಡುವವರು ನೋಡಿಕೊಳ್ಳಬಹುದು, ಕಣ್ಣಿದ್ದವರು ಕಂಡುಕೊಳ್ಳಬಹುದು; ಮನಸ್ಸಿದ್ದವರು ತಮ್ಮನ್ನು ತಾವು ಅರಿತುಕೊಳ್ಳಬಹುದು, ಇನ್ನೊಬ್ಬರನ್ನು ತಿಳಿದುಕೊಳ್ಳಬಹುದು; ತಮ್ಮ ದೋಷಗಳನ್ನು ತಿದ್ದಿಕೊಳ್ಳಬಹುದು, ನಿದ್ದೆಯಿಂದ ಎದ್ದುಕೊಳ್ಳಬಹುದು. ಕನ್ನಡಿಯಲ್ಲಿ ಪ್ರಪಂಚವನ್ನೇ ಕಾಣಬಹುದು, ಅರಿಯಬಹುದು. ಅದು ಆತ್ಮಸಾಕ್ಷಾತ್ಕಾರದ ಸಾಧನ, ಪ್ರಪಂಚಜ್ಞಾನದ ಸೋಪಾನ.

ಕನ್ನಡಿಯು ಸರ್ವಾಂತರ್ಯಾಮಿಯಾದ ವಸ್ತು. ಅದಿಲ್ಲದ ಸ್ಥಳವಿಲ್ಲ. ಮನೆ, ಮಠ, ಮಂದಿರ, ಮಹಲುಗಳಲ್ಲೆಲ್ಲಾ ಕನ್ನಡಿಯು ಇದ್ದೇ ಇದೆ. ಅದು ಗುಡಿಸಲನ್ನು ಶೋಭಿಸುವುದು, ಅರಮನೆಯನ್ನು ಅಲಂಕರಿಸುವುದು. ಅಲಂಕಾರಬೇಕಾದರೆ, ಸೌಂದರ್ಯಬೇಕಾದರೆ ಕನ್ನಡಿ ಬೇಕು. ಅದು ಬಡವನಿಗೂ ಅಗತ್ಯ, ದೊಡ್ಡವನಿಗೂ ಅಗತ್ಯ; ಮಕ್ಕಳಿಂದ ಹಿಡಿದು, ಮುದುಕರ ತನಕ ಎಲ್ಲರಿಗೂ ಕನ್ನಡಿ ಬೇಕು. ಆದುದರಿಂದ ಇಂದಿನ ಯುಗವು ಕನ್ನಡಿ-ಯುಗ. ಮುಖವು ಹೃದಯದ ದರ್ಪಣ; ಮುಖದ ಭಾವವನ್ನರಿಯಲು ಕನ್ನಡಿ ಬೇಕು; ಕನ್ನಡಿಯನ್ನು ನೋಡುವುದರಿಂದ ತನ್ನನ್ನು ತಾನು ಅರಿಯಬಹುದು, ಆತ್ಮಸಾಕ್ಷಾತ್ಕಾರವನ್ನು ಹೊಂದಬಹುದು. ತನ್ನನ್ನು ತಾನರಿತವನು ಲೋಕವನ್ನೇ ಅರಿಯಲಾಪನು. ಪ್ರಪಂಚವೇ ಕನ್ನಡಿಯಾಗಿದೆ; ಅದೇಕೆಂದರೆ, ಪ್ರಪಂಚದಲ್ಲಿ ಕನ್ನಡಿ ನೋಡದವರಿಲ್ಲ. ಪ್ರಪಂಚವನ್ನರಿತವನು ಪರಮಾತ್ಮನನ್ನೇ ಕಾಣುವನು; ಏಕೆಂದರೆ, ಪ್ರಪಂಚವು ಪರಮಾತ್ಮನ ಪ್ರತಿಬಿಂಬ, ಆತನ ದರ್ಪಣ. ಹೀಗೆ ಕನ್ನಡಿಯನ್ನು ನೋಡುವುದರ ಮೂಲಕ ತನ್ನನ್ನೂ, ತನ್ನಿಂದ ಪ್ರಪಂಚವನ್ನೂ, ಪ್ರಪಂಚದಿಂದ ಪರಮಾತ್ಮನನ್ನೂ ತಿಳಿಯಬಹುದಾಗಿದೆ.

ತನ್ನನ್ನು ತಾನು ಕಂಡುಕೊಳ್ಳುವ ಆತ್ಮಸಾಕ್ಷಾತ್ಕಾರವು ಅತ್ಯಂತ ಸುಲಭ. ಮನುಷ್ಯನ "ಮುಖಕ್ಕೆ ಮಸಿ"ಯಾದಾಗ ಅವನು ಕನ್ನಡಿಯನ್ನು ನೋಡಿ ಮಸಿಯನ್ನೊರಸಿಕೊಳ್ಳುವನು, ಕಲಂಕವನ್ನು ದೂರ

ಗೊಳಿಸುವನು, ದೋಷವನ್ನು ಹೋಗಾಡಿಸಿಕೊಳ್ಳುವನು. ವ್ಯವಹಾರದಲ್ಲಿ ತಪ್ಪಿಬಿದ್ದಾಗ, "ತಲೆ ಕೆದರಿ"ಹೋದಾಗ, ಮುಖವು ಮಲಿನವಾದಾಗ ಮನುಷ್ಯನು ಕನ್ನಡಿಗೆ ಶರಣು ಬಂದು, ತನ್ನನ್ನು ತಾನು ಸುಧಾರಿಸಿಕೊಳ್ಳುವನು, ತಲೆಯನ್ನು "ಸರಿಪಡಿಸಿ"ಕೊಳ್ಳುವನು, ತಿದ್ದಿಕೊಳ್ಳುವನು. ಬೆಳಗ್ಗೆ ಎದ್ದೊಡನೆಯೇ, ಆ ದಿನದ ಎಲ್ಲಾ ಕೆಲಸಗಳಿಗೂ ತನ್ನನ್ನು ತಾನು ಸಿದ್ಧಮಾಡಿಕೊಳ್ಳುವುದು ಕನ್ನಡಿಯ ಎದುರಿನಲ್ಲಿ.

ಹೆಂಗುಸರು ಮನೆಗೆಲಸಕ್ಕೆ ಕೈಹಚ್ಚುವ ಮೊದಲು, ಕನ್ನಡಿಯ ದರ್ಶನವನ್ನು ಮಾಡಿ, ಬೈತಲೆಯನ್ನು ತಿದ್ದಿಕೊಂಡು, ಬೊಟ್ಟಿಟ್ಟುಕೊಳ್ಳುವರು. ಗಂಡುಸರಿಗಂತೂ, ಕನ್ನಡಿಯು ಎಲ್ಲಾ ಕೆಲಸ-ಕಾರ್ಯಗಳ ಸಿದ್ಧತೆಯ ಮುಖ್ಯಸ್ಥಳ, "ಹೆಡ್-ಆಫೀಸು." ಗಡ್ಡತೆಗೆಯದಿದ್ದರೆ ಮುಖಕ್ಕೆ ಲಕ್ಷಣವೇ ಇಲ್ಲ; ಗಡ್ಡತೆಗೆಯದೆ "ಆಫೀಸಿ"ಗೆ ಹೋಗಲು, ಪೇಟೆಗೆ ಹೋಗಲು ಸಾಧ್ಯವೇ ಇಲ್ಲ. ಹೀಗಿರುವಾಗ, ಕನ್ನಡಿ ಬೇಕೇಬೇಕು. ತಲೆಗೆ ಬಾಚಣಿಗೆ ಹಾಕಬೇಕಾದರೆ ಕನ್ನಡಿ, "ಡ್ರೆಸ್ಸು" ಮಾಡಬೇಕಾದರೆ ಕನ್ನಡಿ, ಮಾಡಿದ "ಡ್ರೆಸ್ಸ"ನ್ನು ಪುನಃ ಪುನಃ ನೋಡಿಕೊಳ್ಳಬೇಕಾದರೆ ಕನ್ನಡಿ, "ಕ್ರೋಪು"–ಮೀಸೆಗಳನ್ನು ತಿದ್ದಿಕೊಳ್ಳಬೇಕಾದರೆ ಕನ್ನಡಿ; ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಶಾಲೆಗೆ ಹೋಗಬೇಕಾದರೆ ಪುಸ್ತಕಗಳಿಗಿಂತಲೂ ಹೆಚ್ಚು ಅಗತ್ಯ ಕನ್ನಡಿ. ಅವರು ಕನ್ನಡಿಯ ಬಳಿಯಲ್ಲಿ ಕಳೆಯುವಷ್ಟು ಸಮಯವನ್ನು ಆಟ-ಪಾಟಗಳಲ್ಲಿಯೂ ಕಳೆಯುವುದಿಲ್ಲ. ಕೈಯಲ್ಲಿ ಪುಸ್ತಕ ಹಿಡಿದರೆ ನಿದ್ದೆ ತೂಗುವುದು, ಆದರೆ ಕನ್ನಡಿ ಹಿಡಿದರೆ ನಿದ್ದೆ ಓಡಿಹೋಗುವುದು. ಕನ್ನಡಿಯಲ್ಲಿ ಅಷ್ಟು ಶಕ್ತಿಯಿದೆ, ಸಾಮರ್ಥ್ಯವಿದೆ.

ಕನ್ನಡಿಯು ಈಗಿನವರಿಗೆ ಮಾತ್ರವಲ್ಲ, ಹಿಂದಿನವರಿಗೂ ಬೇಕಾಗಿತ್ತು. "ಕುರುಡನಿಗೆ ಕನ್ನಡಿ ಏಕೆ?" ಎಂದು ಕೇಳಿದ ಹಿಂದಿನವರು "ಕಣ್ಣಿದ್ದವರಿಗೆ ಕನ್ನಡಿ ಬೇಕೇಬೇಕು" ಎಂದು ಸಾರಿಹೇಳಿದಂತಾಗಲಿಲ್ಲವೆ? "ಅಂಗೈ ಹುಣ್ಣಿಗೆ ಕನ್ನಡಿ ಬೇಕೆ?" ಇದು ಒಂದು ಹಳೆಯ ಗಾದೆ. ಅಂಗೈ ಹುಣ್ಣಿಗೆ ಕನ್ನಡಿ ಬೇಡವಾದರೂ, ನಮಗೆ ಅಗತ್ಯವಾಗಿ ಬೇಕೆಂದು ಬೇರೆ ಹೇಳಬೇಕಾಗಿಲ್ಲವಷ್ಟೆ. ಹಿಂದಿನ ಕಾಲದಲ್ಲಿ ಸ್ತ್ರೀಯರ ಮುಖ್ಯ ಕೆಲಸ, ಕನ್ನಡಿಯ ಮುಂದೆ ನಿಂತು ಶೃಂಗಾರ ಮಾಡಿಕೊಳ್ಳುವುದು. ಅರ

ಮನೆಯ ಸ್ತ್ರೀಯರಿಗಂತೂ ಬೇರೆ ಕೆಲಸವೇ ಇಲ್ಲ. ಯೋಧರು ಯುದ್ಧಕ್ಕೆ ಹೋಗುವ ಮೊದಲು, ಕನ್ನಡಿಯ ದರ್ಶನವಾಗಲೇಬೇಕು. ಕಿರೀಟ, ತುರಾಯಿ, ಮುಂಡಾಸುಗಳನ್ನಿಡಲು, ಗಂಧಾಕ್ಷತೆಗಳನ್ನು ಧರಿಸಲು ಕನ್ನಡಿಯು ಅತಿ ಅಗತ್ಯ. ಸಿನಿಮಾ-ನಾಟಕ ಕಂಪೆನಿಗಳ ನಟನಟಿಯರಿಗೆ, ಬಯಲಾಟದ ವೇಷಧಾರಿಗಳಿಗೆ, ಹುಲಿವೇಷದ ಬಣ್ಣಗಾರರಿಗೆ, ಭೂತಕಟ್ಟುವ ಪರವನಿಗೆ, ತಲೆಬೋಳಿಸುವ ಕ್ಷೌರಿಕನಿಗೆ—ಕನ್ನಡಿಯಿಲ್ಲವಾದರೆ "ಗಾಡಿಯೇ ನಡೆಯದು." "ಸೆಲೂನು"ಗಳ ಮುಖ್ಯಾಲಂಕಾರವಾದ ಕನ್ನಡಿಯಲ್ಲಿ, ನಾವು ನಮ್ಮ "ಹಿಂದು-ಮುಂದು"ಗಳನ್ನೆಲ್ಲಾ ಪ್ರತ್ಯಕ್ಷ ಕಂಡುಕೊಳ್ಳಬಹುದಾಗಿದೆ. ಹಿಂದಿನ ಕಾಲದಲ್ಲಾಗಲಿ, ಇಂದಿನ ಕಾಲದಲ್ಲಾಗಲಿ—ಕುರೂಪಿಗಾಗಲಿ, ಸುರೂಪಿಗಾಗಲಿ—ಕನ್ನಡಿಯು ಜೀವನದ ಮುಖ್ಯಾಂಗ. ಕುರೂಪಿಗಂತೂ ಶೃಂಗಾರದ ಆಸೆ, ತನ್ನ ಮುಸುಡಿನ ಸೌಂದರ್ಯವನ್ನು ನೋಡಿಕೊಳ್ಳುವ ಆತುರ ಬಹಳ ಹೆಚ್ಚು. ಶಿಖಂಡಿಯಾದ ಬೃಹನ್ನಳೆಯು ಕೂಡ ಯುದ್ಧಕ್ಕೆ ಹೊರಡುವಾಗ "ಕನ್ನಡಿಯಂ ನೋಡಿ ಬಲ ಮೀಸೆಯಂ ತಿರುಂಪ"ಲಿಲ್ಲವೆ?

"ಕನ್ನಡಿಯಲ್ಲಿ ಮುಖನೋಡುವವರು ಒಂದು ವಿಧದಿಂದ ಮಂಗಗಳಂತಾಗುವರು" ಎಂದು ಕೆಲವರ ಹೇಳಿಕೆ. ಈ ಮಾತಿನಲ್ಲಿ ಒಂದಿಷ್ಟು ಸತ್ಯವಿದೆ ಎನ್ನಬಹುದು. ಏಕೆಂದರೆ, ಕನ್ನಡಿಯಲ್ಲಿ ಮುಖನೋಡಿದೊಡನೆಯೇ ಮುಖವಿಕಾರಮಾಡುವುದು, ಹಲ್ಲುಕಿರಿಯುವುದು, ಕಣ್ಣು ದೊಡ್ಡದು ಮಾಡುವುದು, ಮೀಸೆಹುರಿಯೇರಿಸುವುದು, ಮೀಸೆಯಿಲ್ಲದಿದ್ದರೆ ಹುಬ್ಬನ್ನಾದರೂ ತಿದ್ದಿಕೊಳ್ಳುವುದು, ಅಥವಾ ಹುಬ್ಬುಹಾರಿಸುವುದು, ನರೆತ ಕೂದಲನ್ನು ಕೀಳುವುದು, ಮುಖದ ಮೊಡವಿಗಳನ್ನು ಚಿವುಟುವುದು, ನಾಲಿಗೆ ಹೊರಗೆಹಾಕುವುದು—ಮೊದಲಾದ ನಾನಾ ವಿಕಾರ ಚೇಷ್ಟೆಗಳನ್ನು ಮಾಡುವುದು ಸಾಮಾನ್ಯವಾಗಿ ಎಲ್ಲರ ಸ್ವಭಾವವಾಗಿದೆ. ಬೀಡಿ-"ಸಿಗರೇಟು"ಗಳನ್ನು ಸೇದಿ, ಹೊಗೆಯನ್ನು ಸುರುಳಿ ಸುರುಳಿಯಾಗಿ ಬಿಡುತ್ತಾ, ಅದರ "ಮೋಜ"ನ್ನು ಕನ್ನಡಿಯಲ್ಲಿ ನೋಡಿ ಆನಂದಪಡುವುದು ಕೆಲವರಿಗೊಂದು ಆಟ. ಇವನ್ನೆಲ್ಲಾ ಮಂಗನ ಚೇಷ್ಟೆಗಳೆಂದು ಹೇಳಲು ಬೇಸರವಾದರೂ, "ಮಂಗಚೇಷ್ಟೆ"ಗಳೆಂದು ಹೇಳದೆ ನಿರ್ವಾಹವಿಲ್ಲ.

"ಕಾಫೀ ಹೋಟೆಲು"ಗಳಿಗೆ ಹೋದರೆ, "ಕುರ್ಸಿ"ಯನ್ನು ಕನ್ನಡಿಗೆದುರಾಗಿ ಎಳೆದಿಟ್ಟು ಕುಳಿತುಕೊಳ್ಳುವುದು, ಸಾಮಾನ್ಯವಾಗಿ ಯುವಕರೆಲ್ಲರ ಪದ್ಧತಿ. ಕನ್ನಡಿಯಲ್ಲಿ ಮುಖನೋಡುತ್ತಾ ನೋಡುತ್ತಾ, ಅದರಲ್ಲೇ ತಲ್ಲೀನರಾಗಿಬಿಡುವವರೂ ಕೆಲವರಿದ್ದಾರೆ. ತಿಂಡಿ ಕೊಡುವವನು ಹತ್ತಿರ ಬಂದು—"ಚಟ್ಟಂಬಡೆ, ಉಟ್ಟುಂಬೊಡೆ, ಉರುಟಂಬಡೆ, ಮುಸುಕಂಬಡೆ, ತೈರಂಬಡೆ, ಕಾಲಿ-ದೋಸೆ, ತುಪ್ಪ-ದೋಸೆ, ರವಾ-ದೋಸೆ; ಬಾದಶಾಹ, ಜಹಾಂಗೀರ್, ಶಾಹಜಾನ್; ವಾಂಗೀಭಾತ್, ಕೇಸರೀಭಾತ್, ಆಬಾತ್, ಈಬಾತ್; ಬಾದಾಮ್ ಹಲ್ವ, ಬೊಂಬ್ಯಾ ಅಲ್ವ, ಕಾಶಿ ಅಲ್ವ, ಗೋಕರ್ಣ ಅಲ್ವೊ?..........." ಎಂದು ಮೊದಲಾಗಿ ತನ್ನ ನಿತ್ಯದ "ದೇವೀಮಹಾತ್ಮೆಯ ಪಾರಾಯಣವನ್ನೊಮ್ಮೆ ಮುಗಿಸಿ,—"ಏನು "ಕೊಡಲಿ" ಸ್ವಾಮೀ? ಎರಡು ಇಡಲಿ ಇಡಲಿಯೊ? ಅಲ್ಲ, ಖಾಲಿ ಖಾಲಿ-ದೋಷ ಕೊಡಲಿಯೊ?" ಎಂದು ಕೇಳಿದರೂ ಉತ್ತರ ಸಿಗದಿದ್ದುದನ್ನು ಕಂಡು, ಕೊನೆಗೆ "ಇಡಲಿ-ಕೊಡಲಿ-ಕಾಲಿದಾಸಾ"ದಿಗಳನ್ನು "ಪ್ಲೇಟಿ"ನಲ್ಲಿಟ್ಟು ಮೇಜಿನ ಮೇಲೆ ತಂದಿಡುವುದನ್ನು ಕನ್ನಡಿಯಲ್ಲಿ ಕಂಡು, ಸಮಾಧಿಯಿಂದ ಎಚ್ಚರಗೊಳ್ಳುವ "ಆದರ್ಶದೃಷ್ಟಿಯ ಜನ"ರೂ ಕೆಲವರಿರುವರು. "ಇಡಲಿಯನ್ನು ಕೊಡಲಿಯಿಂದ ಕಡಿದು, ಕಾಲಿದಾಸನನ್ನು ಚಟ್ನಿಮಾಡಿ, ಜುಮ್ಮಾ ಬಾಯೊಳಗಿಟ್ಟು ಗಂಟಲೊಳಗೆ ನೂಕುವ ಚಂದವನ್ನು ಪ್ರತ್ಯಕ್ಷ ಕಾಣಬೇಕಾದರೆ, ಕನ್ನಡಿಯ ಎದುರೇ ಕುಳಿತುಕೊಳ್ಳಬೇಕು. ಇಂತಹ "ಕೊಡಲಿ-ರಾಮರು" ಹಲವು "ಇಡಲಿ-ಕಾಲಿದಾಸ"ರನ್ನು ಹೊಡೆದುಹಾಕಿ, ಕೊನೆಗೆ "ಹೋಟೆಲಿನ ಬಿಲ್ಲು-ಬಾಣ"ಗಳಿಗೆ ತಲೆಬಾಗಿ, ದಕ್ಷಿಣೆ-ತೆತ್ತು, ತಲೆತುರಿಸುತ್ತಾ ಹೊರಟುಹೋಗುವರು. ಸಾರಾಂಶವೇನೆಂದರೆ, ಕನ್ನಡಿಯ ಎದುರಿನಲ್ಲಿ, ನಾವು ನಮ್ಮನ್ನೇ ಮರೆತುಬಿಟ್ಟು ಧ್ಯಾನಾಸಕ್ತರಾಗಿ ಬಿಡುವೆವು, ಲೋಕವನ್ನೇ ಮರೆತು ಏಕಮನಸ್ಕರಾಗುವೆವು, ವಿಶ್ವವ್ಯಾಪಾರದಿಂದ ವಿರಕ್ತರಾಗಿ ಸಮಾಧಿಸ್ಥರಾಗತೊಡಗುವೆವು!

ಕನ್ನಡಿ ಎಂಬುದು ಮುದ್ದಿನ ಹೆಸರು. ಕೇಶಿರಾಜನೇನೋ ತನ್ನ ವ್ಯಾಕರಣ ಪುಸ್ತಕಕ್ಕೆ "ದರ್ಪಣ"ವೆಂಬ ಸಂಸ್ಕೃತದ ದಪ್ಪವಾದ ಶಬ್ದವನ್ನು

ಹೆಸರಾಗಿಟ್ಟಿದ್ದರೂ, ಅದನ್ನು ಕನ್ನಡಿಸುವಾಗ "ಕನ್ನಡಿ" ಎಂದೇ ಆಗುವುದು. ಗೀತೆಯು ಕೈಗನ್ನಡಿ, ಹೊಸಗನ್ನಡ ನುಡಿಗನ್ನಡಿ ಮೊದಲಾದ ಕನ್ನಡಿಗಳು ಕನ್ನಡಿಗರಿಗೆ ತೀರ ಪರಿಚಯುದವು. ಇನ್ನು ಬೇಕಾದರೆ, "ಉದ್ದ ಕನ್ನಡಿ—ಉರುಟು ಕನ್ನಡಿ—ದೂರನೋಟದ ಕನ್ನಡಿ, ಓರೆಕಣ್ಣಿಗೆ ನೇರು ಕನ್ನಡಿ........" ಮತ್ತೂ ಬೇಕಾದರೆ "ಭೂತಕನ್ನಡಿ, ಪ್ರೇತಕನ್ನಡಿ, ಪಿಶಾಚಕನ್ನಡಿ........" ಮುಂತಾದುವನ್ನು ಸ್ಮರಣೆಗೆ ತಂದುಕೊಳ್ಳಬಹುದು. ಇನ್ನು, ಉಪಾಧ್ಯಾಯರಿಗೆ "ಉಪಾಧ್ಯಾಯರ ಕೈಪಿಡಿ"ಬೇಕು, ವಿದ್ವಾಂಸರಿಗೆ "ಕನ್ನಡ ಕೈಪಿಡಿ" ಬೇಕು, ಒಕ್ಕಲಿಗರಿಗೆ "ಒಕ್ಕಲಿಗರ ಕೈಪಿಡಿ" ಬೇಕು, ಶಾಲಾಮಕ್ಕಳಿಗೆ ಬೇಕು—"ಗಣಿತ ಕೈಪಿಡಿ". ಹೇಗೂ, ಒಂದಲ್ಲ ಒಂದು ವಿಧದಿಂದ, ಒಬ್ಬೊಬ್ಬರಿಗೆ ಒಂದೊಂದು "ಕೈಪಿಡಿ" ಬೇಕು. ಯುವಕರಿಗಂತೂ, ಯಾವುದಾದರೂ ಒಂದು ರೀತಿಯಿಂದ "ಕೈಪಿಡಿ" ಬೇಕೇಬೇಕು; ಏಕೆಂದರೆ, ಕೈಪಿಡಿಯುನ್ನುಪಯೋಗಿಸಿ ಅನುಭವವಿಲ್ಲದ ಯುವತಿಯು ಕೈ ಪಿಡಿಯಲು ಯುವಕರಿಗೆ ಮನಸ್ಸಾಗುವುದು ದುರ್ಲಭ. ಹೀಗೆ "ಕೈಪಿಡಿ"ವ ಕಾಲದಲ್ಲಿ ಕಲಶಕನ್ನಡಿ ಬೇಕು.

ಕನ್ನಡಿಯು ಮನುಷ್ಯನ ಕಣ್ಣು. "ಚಾಳೀಸು" ಬಂತೆಂದರೆ, ಹಳಬರು ಕನ್ನಡಕವನ್ನಿಡುತ್ತಿದ್ದರು. ಆದರೆ, ಈಗ ಹಾಗೇನೂ ಕಾಯದೆಯಿಲ್ಲ; ಕಣ್ಣಿದ್ದವರಿಗೂ, ಇಲ್ಲದವರಿಗೂ—ಎಲ್ಲರಿಗೂ ಕನ್ನಡಕವಿಡಬಹುದಾಗಿದೆ. ಕನ್ನಡಕವಿಟ್ಟರೆ, "ಮೇಲೆ-ಕೆಳಗೆ" ಎಂದರೆ, ಸ್ವರ್ಗ-ಪಾತಾಳಗಳು ಕಾಣುವುವು—ಮರ್ತ್ಯವು ಮಾತ್ರ ಕಾಣದು. ಏಕೆಂದರೆ, ಕನ್ನಡಕ ಇಟ್ಟೊಡನೆಯೇ ಲೋಕದ ಜನರ ಮೇಲೆ ದೃಷ್ಟಿಯೇ ಬೀಳಲಾರದು, ಜನರೇ ಕಾಣಲಾರರು. ಕನ್ನಡಕ ಇಟ್ಟೊಡನೆಯೇ "ಹಿಂದು-ಮುಂದು" ಎಂದರೆ, ಭೂತ-ಭವಿಷ್ಯತ್ತುಗಳೂ ಕಾಣುವುವು—ಆದರೆ, ವರ್ತಮಾನ, ಎಂದರೆ ತನ್ನ ಸದ್ಯದ ಸ್ಥಿತಿಯು—ತಾನೆಲ್ಲಿರುವೆನೆಂಬುದು ಮಾತ್ರ ಕಾಣಲಾರದು, ಅದು ಮರೆತೇ ಹೋಗುವುದು. ಕನ್ನಡಕವಿಟ್ಟಾಗ ಲೋಕದಲ್ಲಿ ಬಹಳ "ಏರು-ತಗ್ಗು"ಗಳು ಕಾಣುವುವು—ಕೆಲವರು ದೊಡ್ಡವರಾಗಿ, ಕೆಲವರು ಬಡವರಾಗಿ ಕಾಣುವರು. ದೂರದವರು ಹತ್ತಿರವಾಗುವರು, ಹತ್ತಿರವಿದ್ದವರು ದೂರವಾಗುವರು. (Short sight and long sight.)

"ಕಣ್ಣಿನ ಡಾಕ್ಟರ"ರು (Eye-Doctor) ಈಗೀಗ ಪೇಟೆಯಲ್ಲಿ ತುಂಬಿಹೋಗಿರುವರು. "ಯಾರ ಕಣ್ಣು ಹಾಳಾಗುತ್ತದೆ?" ಎಂದು ಕಣ್ಣು-ಹಾಕುವುದೇ ಅವರ ಕೆಲಸ. ಅವರ ಮುಖ್ಯ ಆಸೆ—"ಎಲ್ಲಾ ಜನರ ಕಣ್ಣು ಹಾಳಾಗಲಿ, ನನ್ನ ಬಳಿಗೆ ಬರಲಿ" ಎಂದು. ಕಣ್ಣುಪರೀಕ್ಷೆಯಲ್ಲಿ ಅವರಿಗೆ ಎಷ್ಟೊಂದು ಅನುಭವವಿದೆಯೆಂದರೆ, ಅವರ ಬಳಿಗೆ ಪರೀಕ್ಷೆಗಾಗಿ ಬಂದ ಎಲ್ಲಾ ಕಣ್ಣುಗಳಲ್ಲಿಯೂ ಅವರಿಗೆ ಕಾಣುವುದು ದೋಷವೇ! ಅವರ ದೃಷ್ಟಿಯಲ್ಲಿ ಬಹುಶಃ ಲೋಕದಲ್ಲಿ ಯಾರ ಕಣ್ಣುಗಳೂ ಸರಿಯಿರಲಾರವು!....ಇದೆಲ್ಲಾ ಕನ್ನಡಿಯ ಪ್ರಭಾವ!

ಕನ್ನಡಿಯು ಈ ರೀತಿಯಲ್ಲಿ ಪ್ರಪಂಚದಲ್ಲೆಲ್ಲಾ ವ್ಯಾಪಿಸಿ, ಪ್ರಪಂಚವೇ ತಾನಾಗಿ, ತಾನೇ ಪ್ರಪಂಚವಾಗಿ, ಪ್ರಪಂಚದೊಳಗೂ ಇದ್ದು, ಪ್ರಪಂಚವನ್ನೇ ತನ್ನೊಳಗೆ ಇಟ್ಟುಕೊಂಡಿರುವುದು. ಕನ್ನಡಿಯ ತತ್ವವನ್ನರಿತವನು ಪ್ರಪಂಚದ ತತ್ವವನ್ನು ಸುಲಭವಾಗಿ ತಿಳಿದುಕೊಳ್ಳಬಹುದು, ಆತ್ಮಸಾಕ್ಷಾತ್ಕಾರವನ್ನು ಹೊಂದಬಹುದು; ಆದುದರಿಂದ ಅದು ಮನುಷ್ಯನ ಉನ್ನತಿಯ ಮುಖ್ಯಸಾಧನ. ಕನ್ನಡಿಯಲ್ಲಿ ಪ್ರಪಂಚವು ತನ್ನ ಪ್ರತಿಬಿಂಬವನ್ನು, ಸೃಷ್ಟಿಕರ್ತನ ಪ್ರತಿಚ್ಛಾಯೆಯನ್ನು ಕಾಣುತ್ತಿದೆ. ಅದು ನಿಜವಾದುದಲ್ಲ, ಮಾಯೆ. ಶರೀರವು ಒಂದು ಛಾಯೆ ಮಾತ್ರ, ಅದು ಯಥಾರ್ಥವಾದುದಲ್ಲ. ಸ್ಥಿರ, ಯಥಾರ್ಥ ಹಾಗು ಶಾಶ್ವತವಾದುದು ಆತ್ಮ. ಆತ್ಮಜ್ಞಾನದ ಮೂಲಕ ಪರಮಾತ್ಮಪದಸಾಧನೆಯೇ ಜೀವನದ ಗುರಿ—ಎಂಬ ಅಧ್ಯಾತ್ಮತತ್ವದ ವಿರಕ್ತಿಮಾರ್ಗವನ್ನು ಕನ್ನಡಿಯು ಪ್ರಪಂಚಕ್ಕೇ ತೋರಿಸುತ್ತಿದೆ. ಇನ್ನೊಂದು ರೀತಿಯಿಂದ, ಕನ್ನಡಿಯು ಜೀವನದ ಬೇರೊಂದು ತತ್ವವನ್ನೇ ಬೋಧಿಸುತ್ತಿದೆ—"ನೀನು ನಕ್ಕರೆ ಲೋಕವೇ ನಗುವುದು, ನೀನು ಅತ್ತರೆ ಲೋಕವೂ ಅಳುವುದು....ಮನುಷ್ಯನು ತಾನು ಬಿತ್ತಿದ್ದನ್ನೇ ತಾನು ಉಣ್ಣುತ್ತಾನೆ, ಕರ್ಮಕ್ಕೆ ತಕ್ಕ ಫಲವು ಕೂಡಲೇ ಇಲ್ಲಿ ದೊರೆಯುವುದು........"

ಈ ಪ್ರಕಾರ ಕನ್ನಡಿಯು ಆತ್ಮ ಹಾಗು ಮಾನವ ಕರ್ತವ್ಯಗಳ ದಿವ್ಯಜ್ಞಾನವನ್ನೂ, ಜೀವನದ ಮುಖ್ಯತತ್ವವನ್ನೂ ಬೋಧಿಸುತ್ತಿದ್ದರೂ, ಅದರ ಬೆಲೆಯನ್ನು ನಾವು ತಿಳಿದುಕೊಂಡಿಲ್ಲ. ಆದರೆ, ವ್ಯಾಪಾರಿಗಳು

ಅದರ ಬೆಲೆಯನ್ನು ಚೆನ್ನಾಗಿ ಅರಿತಿರುವರು. ಆದುದರಿಂದಲೇ ಅವರು ತಮ್ಮ "ಗಿರಾಕಿ"ಗಳನ್ನು ಕಣ್ಣುಕಟ್ಟಿಸಿ, ಒಂದಕ್ಕೆ ನಾಲ್ಕರಷ್ಟು ಕ್ರಯವನ್ನು ತೆಗೆಯುತ್ತಾರೆ. ಆದರೆ, ಈಗೀಗ ಕನ್ನಡಿಯ ಬೆಲೆಯು ಇತರ ವಸ್ತುಗಳ ಬೆಲೆಯಂತೆಯೇ ಬಹಳ ಏರಿದೆ. ಅದರಲ್ಲಿಯೂ "ಬ್ಲೇಕ್‌ಮಾರ್ಕೆಟು" ನಡೆಯುತ್ತಿದೆ. ಜನರಿಗೆ ಕನ್ನಡಿಯ ನಿಜವಾದ ಮೌಲ್ಯವು ಇನ್ನೂ ಗೊತ್ತಾಗದಿದ್ದುದು ಶೋಚನೀಯವಾದ ವಿಷಯ.

ಕನ್ನಡಿಯ ಬೆಲೆ ಗೊತ್ತಿಲ್ಲದವರಿಗೆ, ಅದರ ಮೇಲೆ ಅಷ್ಟೊಂದು ಪ್ರೇಮವಿಲ್ಲ; ಕಾರಣವೇನೆಂದರೆ, ಅವರಿಗೆ ಅದರ ತತ್ವವು ತಿಳಿದಿಲ್ಲ. "ನಾವು ಎಷ್ಟೋ ಸಮಯವನ್ನು ಹಾಳುಮಾಡುತ್ತೇವೆ. ಆದರೆ, ಕನ್ನಡಿಯಲ್ಲಿ ಮುಖನೋಡುವುದಕ್ಕಾಗಿ ಹಾಳುಮಾಡುವ ಸಮಯವು, ಎಲ್ಲದಕ್ಕಿಂತಲೂ ನಿಕೃಷ್ಟ-ಯೂ-ನಿಷ್ಪ್ರಯೋಜಕವಾದುದು. ಕನ್ನಡಿಯನ್ನು ನೋಡುವುದರಿಂದ ಮುಖದ ಆಕಾರವನ್ನು ಬದಲಾಯಿಸಬರುವುದಿಲ್ಲ; ಅದರ ಬಣ್ಣವು ಬೇರೆಯಾಗುವುದಿಲ್ಲ. ಆದುದರಿಂದ ಕನ್ನಡಿ ಎಂಬುದು ಪ್ರಯೋಜನವಿಲ್ಲದ ವಸ್ತುವಾಗಿದೆ" ಎಂದು ಇಂಥವರ ಅಭಿಪ್ರಾಯ—"Looking glass is a piece of furniture, a great deal worse than useless. Looking at the face will not alter its shape or its colour, and, perhaps, of all wasted time none is so foolishly wasted as that which is employed in surveying one's own face."—ಈ ಮಾತಿನಲ್ಲಿ ಎಷ್ಟು ತಥ್ಯಾಂಶವಿದೆ ಎಂಬುದನ್ನು ಲೋಕವು ಕನ್ನಡಿಯಲ್ಲಿ ಕಂಡುಕೊಳ್ಳಲಿ!

೮. ಪಂಡಿತರ ಕೂಟ

"ಸಾಹಿತ್ಯವು ಬೆಳೆಯಬೇಕಾದರೆ, ಉನ್ನತಿ ಹೊಂದಬೇಕಾದರೆ, ಅದರಲ್ಲಿ ಕ್ರಾಂತಿಯಾಗಬೇಕು. ಕ್ರಾಂತಿಯಾಗಬೇಕಾದರೆ, ಪ್ರಗತಿಶೀಲ ಸಾಹಿತಿಗಳು ಮುಂದೆಬರಬೇಕು, ಒಟ್ಟುಕೂಡಬೇಕು, ಭಾಷೆಯಲ್ಲಿ ಸುಧಾರಣೆಗಳನ್ನು ಮಾಡಬೇಕು. ಇತರ ಸಾಹಿತ್ಯಗಳೆಲ್ಲಾ ಮುಂದೆ ಮುಂದೆ ಓಡುತ್ತಿವೆ, ನಮ್ಮ ಕನ್ನಡವು ಮಾತ್ರ ಹಿಂದೆ ಜಾರುವುದೆಂದರೇನು? ಅದನ್ನು ಮುನ್ನಡೆಸುವುದು, ಅದರಲ್ಲಿ ನವಚೈತನ್ಯವನ್ನು ತುಂಬುವುದು ನಮ್ಮ ಕೈಯಲ್ಲಿದೆ"—ಎಂಬ ಮಹತ್ತಾದ ಭಾವನೆಯಿಂದ, ದೃಢವಾದ ನಿರ್ಧಾರದಿಂದ, ಕ್ರಾಂತಿಯ ಕಿಡಿಗಳನ್ನುಗುಳುತ್ತಾ, ಕೆಲವು ಕನ್ನಡ ಪಂಡಿತರು ಒಂದಾನೊಂದು ದಿನ ಶುಭಮುಹೂರ್ತದಲ್ಲಿ, ಪಂಡಿತರ ಪ್ರಚಂಡ ಪರಿಷತ್ತನ್ನು ಜರಗಿಸಿದರು. ವಿದ್ವಾನ್, ವಿದ್ಯಾಲಂಕಾರ, ವಿದ್ಯಾಭೂಷಣ, ಸಾಹಿತ್ಯಭೂಷಣ, ಸಾಹಿತ್ಯಶಿರೋಮಣಿ, ಸಾಹಿತ್ಯಾಲಂಕಾರ, ಉಭಯಭಾಷಾವಿಶಾರದ, ಅಖಿಲಪಂಡಿತ, ಕನ್ನಡಜಾಣ, ಕನ್ನಡಕಳಕಂಠ, ಕನ್ನಡಕೋಕಿಲ...." ಮೊದಲಾದ ಅನೇಕಾನೇಕ ಬಿರುದಾಂಕಿತರಾದ ಘನಪಂಡಿತರು ಆ ಸಭೆಯನ್ನಲಂಕರಿಸಿದ್ದರು. ಪ್ರಮುಖ ಪಂಡಿತರೊಬ್ಬರು ಅಧ್ಯಕ್ಷಸ್ಥಾನವನ್ನು ವಹಿಸಿದ ಅನಂತರ ಕಾರ್ಯಕಲಾಪಗಳು ಪ್ರಾರಂಭವಾದುವು.

ಸಭೆಯ ಮುಖ್ಯ ಉದ್ದೇಶವು—"ಕನ್ನಡ ಭಾಷೆಯನ್ನು ಉದ್ಧರಿಸುವುದು ಹೇಗೆ? ಅದರಲ್ಲಾಗಬೇಕಾದ ಮಹಾ ಮಾರ್ಪಾಡುಗಳಾವುವು?" ಎಂಬಿತ್ಯಾದಿ ವಿಷಯಗಳನ್ನು ಆಲೋಚಿಸುವುದು. ಮೊದಲನೆಯದಾಗಿ, ಕವಿವರ್ಯರೊಬ್ಬರು ಎದ್ದು ನಿಂತು ಹೀಗೆಂದರು,—"ಮಾನ್ಯ ಅಧ್ಯಕ್ಷರೇ, ಮತ್ತು ಸಭಾಸದರೇ! ನಮ್ಮಲ್ಲಿ ಅನೇಕರು ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಅದ್ಭುತಪಾಂಡಿತ್ಯವನ್ನು ಹೊಂದಿರುವರೆಂಬುದೇನೋ ನಿಜವಾದ ಮಾತಾಗಿದೆ, ಅದಕ್ಕೆ "ಅಪ್ಪೀಲು" ಇಲ್ಲ. ಆದರೆ, ಅವರಿಂದ ಬರೆಯಲ್ಪಟ್ಟಿರುವ ಕೆಲವು ಕಾವ್ಯಗಳನ್ನು ವಾಚಿಸಿದಲ್ಲಿ, ನನಗೆ ಹಲ

ಕೆಲವು ದೋಷಗಳು ದೃಗ್ಗೋಚರವಾಗುತ್ತಿವೆ. ಅಂಥಾ ದೋಷಗಳಲ್ಲಿ ಕೆಲವನ್ನು ನಿಮ್ಮಗಳ ಸ್ಮೃತಿಗೆ ತರಲು ಆಶಾಬದ್ಧನಾಗಿದ್ದೇನೆ. ಒಂದನೆಯುದಾಗಿ, ಅನೇಕ ಕವಿಗಳು—"ರಾಯ-ನಿಂತೆಂದಾ, ಧರಣೀಶ-ನಿಂತೆಂದಾ, ಭೂಪ-ನಿಂತೆಂದಾ" ಎಂದು ಮುಂತಾಗಿ ಬರೆದಿರುತ್ತಾರೆ. ಇವುಗಳನ್ನು ಸಂಧಿವಿಂಗಡಿಸುವಾಗ,—"ರಾಯ+ನಿಂತು+ಎಂದಾ"—"ಭೂಪ+ನಿಂತು+ಎಂದಾ"—ಎಂದಾಗುತ್ತದಲ್ಲವೆ? ಅದೇಕೆ, ನಿಂತುಕೊಂಡೇ ಹೇಳಬೇಕೆಂದು ಪದ್ಧತಿಯಿದೆಯೆ? ಅದರ ಬದಲು, "ಕುಳಿತೆಂದಾ, ಮಲಗೆಂದಾ" ಎಂದರೆ ದೋಷವೇನು?..........ಎರಡನೆಯುದಾಗಿ, ಹಲವೆಡೆಗಳಲ್ಲಿ, "ಏನೆಂದೇ ತಮ್ಮ ನೀ ಏನೆಂದೇ"—"ರಾಮ ಕೇಳೆಂದಾ" ಎಂದು ಬರೆದಿರುವುದನ್ನು ಕಂಡಿದ್ದೇನೆ. ಒಂದು ಭಾಷೆಯಲ್ಲಿ "ಏನು?" ಎಂದು ಕೇಳಿದರೆ ಸಾಲದೆ? ಅದೇ ಅರ್ಥವನ್ನು ಕೊಡುವ "ಎಂದ?" ಎಂಬ ಮಲಯಾಳೀ ಶಬ್ದವನ್ನು ಕೂಡ ಏಕೆ ಉಪಯೋಗಿಸಬೇಕು?...........ಹೀಗೆಯೇ ಇಂತಹ ಅನೇಕ ಉದಾಹರಣೆಗಳನ್ನು ಕೊಡಬಹುದು. ಈ ರೀತಿಯಾಗಿ ಕವಿಗಳು ಬರೆದಿರುವುದರಿಂದಲೇ ನಮ್ಮ ಭಾಷೆಯು ಅವನತಿಹೊಂದಲು ಕಾರಣವಾಗಿದೆ. ನಮ್ಮ ಕಾವ್ಯದ ಬೆಳೆಯಿಂದ ಇಂತಹ ಕಳೆಗಳನ್ನು ಕಿತ್ತುಕಳೆಯದಿದ್ದರೆ, ಕಾವ್ಯಕಳೆಯು ಕಾಲಕಳೆಯುತ್ತಾ ಕಳಾಹೀನವಾಗುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ." ಹೀಗೆ ಹೇಳಿ, ಕವಿವರ್ಯರು ಸ್ವಸ್ಥಾನದಲ್ಲಿ ಗಂಭೀರವಾಗಿ ಕುಳಿತುಕೊಂಡರು.

ಅಷ್ಟರಲ್ಲಿ ಇನ್ನೊಬ್ಬ "ಕವಿಶ್ರೇಷ್ಠರು" ಎದ್ದು ನಿಂತು, "ಕವಿವರ್ಯ"ರನ್ನುದ್ದೇಶಿಸಿ ಹೀಗೆಂದರು—"ನೀವು ಹೇಳಿದ್ದೇನೋ ನಿಜವಿರಬಹುದು. "ರಾಮ ಕೇಳೆಂದಾ" ಎಂದು ನಾನು ಕೂಡ ಬರೆದಿರುವೆನು. ಅದರಲ್ಲಿ ಏನು ತಪ್ಪಿದೆ ಹೇಳಿ! "ರಾಮು, ಕೇಳು" ಎಂಬ ಹೆಸರು ಮಲೆಯಾಳಿಗಳದು. ಮಲೆಯಾಳಿಗಳ ವಿಷಯವಾಗಿ ಹೇಳುವಾಗ "ಎಂದಾ" ಎಂಬ ಮಲೆಯಾಳೀ ಶಬ್ದವನ್ನು ಉಪಯೋಗಿಸಬೇಕಲ್ಲದೆ, ಕನ್ನಡ ಶಬ್ದವನ್ನು ಉಪಯೋಗಿಸಿದರೆ ಅದಕ್ಕೆ ಬೆಲೆಯಿಲ್ಲ.

ಕವಿವರ್ಯ:—ಓಹೊ, ಕ್ಷಮಿಸಿರಿ! ತಾವು ಬರೆದದ್ದೆಂದು ನನಗೆ ಗೊತ್ತಿರಲಿಲ್ಲ. ನಾನು ಹಿಂದಿನ ಕವಿಗಳ ವಿಷಯವಾಗಿ ಟೀಕಿಸಿದೆ, ಅಷ್ಟೆ.

ನಮ್ಮ ವಿಚಾರ ಬಿಡಿ. ನೋಡಿ, ಹಳೆಯ ಕವಿಗಳಿಗೆ ಪ್ರಪಂಚಜ್ಞಾನವು ಏನೂ ಇರಲಿಲ್ಲವೆನ್ನಬೇಕು. ರಾಮಾಯಣವನ್ನು ಬರೆಯುವಾಗ "ಕೇಳು, ಎಂದ" ಎಂಬ ಮಲೆಯಾಳೀ ಶಬ್ದಗಳನ್ನು ಪ್ರಯೋಗಿಸಿದ್ದು ಸಂದರ್ಭೋ ಚಿತವೆಂದು ನೀವು ತಿಳಿಯುತ್ತೀರೊ?

ಕವಿಶ್ರೇಷ್ಠ:—ಆ ಸಂದರ್ಭವನ್ನು ನೀವು ತಿಳಿದುಕೊಳ್ಳಲಿಲ್ಲ. ರಾಮನು, "ಸೇತುವೆಯನ್ನು ಕಟ್ಟಿಸುವುದು ಹೇಗೆ?" ಎಂಬ ವಿಚಾರದಲ್ಲಿ ಮಗ್ನನಾಗಿದ್ದಾಗ, ಮಲೆಯಾಳ ದೇಶದ "ಕೇಳು ಮೇಸ್ತ್ರಿ"ಯು ಅಲ್ಲಿಗೆ ಬಂದಿದ್ದನು. ಆತನನ್ನು ನೋಡಿ, ರಾಮನು "ಎಂದಾ?" ಎಂದು ಕೇಳಿ ದನು; ಅಂದರೆ, "ಈ ಸೇತುವೆಯನ್ನು ನೀನು ಕಟ್ಟುವೆಯೋ ಏನು?" ಎಂದರ್ಥ. ಆದುದರಿಂದ "ರಾಮ ಕೇಳೆಂದಾ" ಎಂಬುದು ಸಂದರ್ಭೋ ಚಿತವಾದ, ಸಮಂಜಸವಾದ ವಾಕ್ಯ. ನನ್ನ ಮೇಲೆ ದೋಷವನ್ನು ಹೇಳುತ್ತೀರಲ್ಲ,—ಬಹು ದೊಡ್ಡ ಪಂಡಿತರೆಂದು ಹೇಳಿಕೊಳ್ಳುವ ನೀವಾ ದರೂ ಬರೆದದ್ದೇನು?

ಕವಿವರ್ಯ:—ಏನು, ಏನು ಬರೆದಿದ್ದೇನೆ?

ಕವಿಶ್ರೇಷ್ಠ:—"ಕುರುಕುಲರಾಯ ಕೌರವ-ಗಂಜಿ" ಎಂದು ಬರೆ ದಿದ್ದೀರಲ್ಲ—ಇದರ ಅರ್ಥವೇನು? ಕುರುರಾಯನಾದ ಕೌರವನು ಒಂದು ದಿನವಾದರೂ "ಗಂಜಿ" ಉಂಡದ್ದಿದೆಯೆ?

ಕವಿವರ್ಯ:—ಹೊ ಹೊ ಹೊ!........ಸಾಕಯ್ಯ ಗೊತ್ತಿದೆ! ನೀವು ಬರೆದ ಕವಿತೆಯನ್ನು ನಾನು ಕೂಡ ನೋಡಿದ್ದೇನೆ. ಅರ್ಥ ನೋಡಿ ದರೆ, ಅನರ್ಥ! ನೀವು ಬರೆದ ಯಕ್ಷಗಾನ ಪ್ರಸಂಗದಲ್ಲಿ—"ಏನಾಯಿ ತಿಂದೀ....ಗ" ಎಂದು ಇದೆಯೋ ಇಲ್ಲವೋ? ಇಲ್ಲಿ, ನಾಯಿಯನ್ನು ತಿಂದದ್ದು ಯಾರು ಹೇಳಿ!

ಶ್ರೇಷ್ಠ:—ಹೋ! ಅದೋ? ನೀವು ನೋಡಿ—"ಕೌರವ ಗಂಜಿ" ಎಂದು ಬರೆದಿದ್ದೀರಿ, ಇನ್ನೊಂದು ಕಡೆಯಲ್ಲಿ—"ನೀನು ಬೂ-ತಂಗಳ ಹಾಗೆ" ಎಂದು ಬರೆದಿದ್ದೀರಿ. ನಿಮ್ಮ "ಗಂಜಿ" ಮತ್ತು "ತಂಗಳ" ಎರ ಡನ್ನೂ ನನ್ನ "ನಾಯಿ ತಿಂದೀಗ......." ತೃಪ್ತಿ ಹೊಂದಿದೆ!

ವರ್ಯ:—"ತಿನ್ನಲಿಕ್ಕೆ 'ಕೂಳಿ'ಲ್ಲದವನು" ಗಂಜಿ ತಿನ್ನುವುದು

ಹೇಗಯ್ಯ? (ಶ್ರೀಪ್ಮರ ಬಾಯಿಯ ಎದುರಿನ ಒಂದು "ಕೂಳಿ" ಎಂದರೆ ಹಲ್ಲು, ಕಳಚಿ ಹೋಗಿತ್ತು. ಮಾತ್ರವಲ್ಲದೆ, ಅವರು ತಮ್ಮದೊಂದು ಪುಸ್ತಕದಲ್ಲಿ ಬಡತನದ ಕಷ್ಟವನ್ನು ಬಣ್ಣಿಸುತ್ತಾ, "ತಿನ್ನಲಿಕ್ಕೆ ಕೂಳಿಲ್ಲ ವಯ್ಯಾ"— ಎಂದು ಬರೆದಿದ್ದರು. ಇಲ್ಲಿ "ಕೂಳು" ಎಂದರೆ ಅನ್ನ ಎಂಬ ಅರ್ಥ. ಅಂತೂ ಶ್ರೀಪ್ಮರಿಗೆ ಈ ಮಾತು ಸ್ವಲ್ಪ ತಾಗಿತು.)

ಶ್ರೀಪ್ಮ:—ಕೂಳಿಲ್ಲದ ಕಾರಣವೇ ಗಂಜಿಯನ್ನು "ನಕ್ಕಿದನು!".... ರಾಯರೇ, "ನಕ್ಕನು" ಎಂಬ ಶಬ್ದದ ಬದಲು, ನೀವು ಮಾತ್ರೆಯ "ಭರ್ತಿ" ಗಾಗಿ "ನಕ್ಕಿದನು" ಎಂದು ಬರೆಯಲಿಲ್ಲವೇ?

ವರ್ಯ:—ನಕ್ಕಿದರೂ ನಾಯಿಗೆ ತೃಪ್ತಿಯಾಗಲಿಲ್ಲವೆಂದಾಯಿತು! ಪಾಪ, ಇನ್ನೂ ಬೊಗಳುತ್ತಾ ಇದೆ!........ಅರ್ಥವಿಲ್ಲದ ಅಸಂಬದ್ಧ ಶಬ್ದ ಗಳನ್ನು ಕಾವ್ಯದಲ್ಲಿ ಸೇರಿಸಿ, ಇತರರ ಶೈಲಿಯಲ್ಲಿ ಹುಳುಕು ನೆಕ್ಕುವುದು ಇಂಥಾ ನಾಯಿಗಳ ಸ್ವಭಾವ!

ಅಧ್ಯಕ್ಷರು (ಎದ್ದು ನಿಂತು):—ಕವಿವರ್ಯರೇ, ಕವಿಶ್ರೀಪ್ಮರೇ! ನಾವು ಇಲ್ಲಿ ಕೂಡಿದ್ದು ನಮ್ಮನಮ್ಮೊಳಗೆ ಜಗಳವಾಡುವುದಕ್ಕಲ್ಲ. ನಮ್ಮ ನಮ್ಮ ಕೊರತೆಗಳನ್ನು ನಾವು ನಾವೇ ಹೊರಗೆ ತೋರಿಸಬಾರದು. "ಇತ ರರು ಏನು ತಪ್ಪುಮಾಡಿದ್ದಾರೆ? ಅವುಗಳನ್ನು ತಿದ್ದಿ, ಹೇಗೆ ಸುಧಾರಣೆ ಗಳನ್ನು ಮಾಡಬೇಕು?" ಎಂಬುದೇ ನಮ್ಮ ಪ್ರಕೃತದ ಗಂಭೀರವಾದ ಪ್ರಶ್ನೆ. ಆದುದರಿಂದ ಸಭೆಯಲ್ಲಿ ಯಾರೂ ಜಗಳವಾಡಬಾರದು, ಅವಾಚ್ಯ ಶಬ್ದಗಳನ್ನು ಹೇಳಬಾರದು.

ಅಧ್ಯಕ್ಷರು ಕುಳಿತುಕೊಂಡರು. ಕವಿ ಮಹಾಶಯರಿಬ್ಬರೂ ತಣ್ಣಗೆ ತಮ್ಮ ತಮ್ಮ ಆಸನಗಳನ್ನಲಂಕರಿಸಿದರು. ಸ್ವಲ್ಪ ವಿಶ್ರಾಂತಿಯ ಬಳಿಕ, ಎರಡನೇ ದೃಶ್ಯದ ಫರದೆಯು ಮೇಲೆ ಹೋಯಿತು. ಕನ್ನಡದಲ್ಲಿ ಸುಪ್ರ ಸಿದ್ಧರಾದ ಪೆಂಕಯ್ಯಾಚಾರ್ಯ ಪಂಡಿತರು ಎದ್ದುನಿಂತು, ತೋರಸ್ವರ ದಿಂದ (ಅವರ ಕುತ್ತಿಗೆ ಸ್ವಲ್ಪ ದಪ್ಪ) ಹೀಗೆಂದರು—"ಮಹಾಜನರೇ, ಹಿಂದಿನ ಕಾವ್ಯಗಳನ್ನು ಮಗುಚುತ್ತಾ ಹೋಗುವಾಗ, ಅಲ್ಲಲ್ಲಿ ಕಂಡು ಬಂದ ತಪ್ಪುಪ್ರಯೋಗಗಳಲ್ಲಿ ಕೆಲವನ್ನು ನಿಮ್ಮ ಮುಂದಿಡಲು ಬಯಸು ತ್ತೇನೆ. ಹಲವು ಕವಿಗಳು ತಮ್ಮ ಕಾವ್ಯಗಳ ಆದಿಯಲ್ಲಿ ಅಥವಾ ಅಂತ್ಯ

ದಲ್ಲಿ—"ಮಂಗಳಂ ಕರಿವದನ" ಎಂದು ಬರೆದುದನ್ನು ನೀವೆಲ್ಲರೂ ನೋಡಿರಬಹುದು. "ಕರಿವದನ" ಎಂದರೆ "ಕಪ್ಪುಮುಖ" ಎಂದರ್ಥವೋ? ಇದು ಶುದ್ಧ ತಪ್ಪು. ಗಣಪತಿಯ ಮುಖ ಖಂಡಿತವಾಗಿಯೂ ಕಪ್ಪಲ್ಲ—ಬೂದು. ಆದುದರಿಂದ "ಬೂದುವದನ" ಅಥವಾ "ಬೂದಿವದನ" ಎಂಬುದೇ ಸರಿ".

ಅಷ್ಟರಲ್ಲಿ ಇನ್ನೊಬ್ಬ ಮಹಾಶಯರು ಎದ್ದುನಿಂತು ಹೀಗೆಂದರು—"ಆಛಾರ್ರೇ! ಬಹುಶಃ ನೀವು ಮಾಡಿರೋ ಅರ್ಥ್ವೇ ತಪ್ಪೆಂತ ತೋರ್‍ತ್ತೆ ನೋಡ್ರಿ! "ಕರಿ" ಅಂದ್ರೆ ಆನೆ, "ವ" ಅಂದ್ಕೊಂಡ್ರೆ "ಅಥ್ವಾ"; ಆದ್ಕಾರಣ ಅದನ್ನು ಓದ್ಕೊಂಬಾಗ ಸಂಧಿ ವಿಂಗಡ್ಸ್ಕೊಂಡು, ಅರ್ಥಕ್ಸರಿಯಾಗೋ ರೀತಿ ಓದ್ಕೊಳ್ಳೋದು ವಾಚ್ಕರ ಬುಧ್ವಂತಿಗೆ ಕಾಣ್ರಿ! "ಕರಿ-ವ-ದನ" ಅಂದ್ರೆ, "ಆನೆ-ಅಥ್ವಾ-ದನ"—ಎಷ್ಟು ಛೆನ್ನಾಗಿ ಅರ್ಥ್ವಾಗ್ತೆ ನೋಡ್ರಿ!

ಮತ್ತೊಬ್ಬ ಗಜಪಂಡಿತರು ಕಚ್ಚೆ ಸರಿಮಾಡಿಕೊಂಡು, ಆಸನದಿಂದ ಏಳುವಂಥವರಾಗಿಕೊಂಡರು. ಎರಡು ಸಲ ನಸ್ಯವೇರಿಸಿ ನೆತ್ತಿಗೇರಿದ, ನಸ್ಯಾವೇಶದಿಂದ ಹೇಳಿದರು,—"ನೀವಿಬ್ಬರು ಹೇಳಿದ್ದೂ ತಪ್ಪು! ಅದು ಬಹುಶಃ "ಕರಿವ-ದನ" ಆಗಿರಬೇಕು. ಕಾವ್ಯವನ್ನು ಪ್ರಾರಂಭಿಸುವಾಗ, ಕವಿಗಳಿಗೆ ತಮ್ಮ ಕರೆಯುವ ದನದ ನೆನಪಾಗಿ, "ಕರಿವ-ದನ" ಎಂದು ಮನೆಮಾತಿನಲ್ಲಿ, 'ಪುಲಿಗೆರೆಯ ಕನ್ನಡದೊಳ್' ಬರೆದಿರಬೇಕು."

ಆಛಾರ್ರು:—ಗಜಪಂಡಿತರೇ, ನಿಮ್ಮ ಅರ್ಥಕ್ಕೆ ಆಧಾರವೆಲ್ಲಿದೆ?

ಗಜಪಂಡಿತ:—ಆಧಾರವೇ? ಸ್ವಕಪೋಲಕಲ್ಪಿತ ನಿಘಂಟಿನಲ್ಲಿ ಇಂಥಾ ಶಬ್ದಗಳಿಗೆ ಎಷ್ಟು ಬೇಕಾದರೂ ಆಧಾರಗಳಿವೆ. "ಕರಿವ-ದನ" ಎಂಬ ಶಬ್ದವೇ ಸರಿ, ಎಂಬುದಕ್ಕೆ ಕವಿಯೇ ಆಧಾರಕೊಟ್ಟಿದ್ದಾನೆ. ಅದರ ಅನಂತರದ ಪದ್ಯದಲ್ಲಿ ನೋಡಿ—"ಅಂಬಾ ಪಾಲಯಂ" ಎಂದು ಬರೆಯ ಲಿಲ್ಲವೆ? ಇದೇ ಮೇಲಿನ ಶಬ್ದಕ್ಕೆ ತಕ್ಕ ಸಮರ್ಥನೆ.

ಆಛಾರ್ರು:—ಅರ್ಥವಾಗಲಿಲ್ಲ ಸ್ವಾಮಿ!

ಗಜಪಂಡಿತ:—ಅದಕ್ಕೇ ನೋಡಿ, ಸ್ವಕಪೋಲಕಲ್ಪಿತ ನಿಘಂಟನ್ನು ನೀವು ಯಾರೂ ನೋಡಲಿಲ್ಲವೆನ್ನುವುದು! ಆ ದಿನ ಕವಿಗಳ ದನವು "ಪಾಲ್+ಲಯಂ" ಎಂದರೆ, ಹಾಲು ಇಲ್ಲದ್ದರಿಂದ, ಬರೀ "ಅಂಬಾ"

ಎಂದು ಕರೆಯಿತು. ಇದನ್ನೇ ಕವಿಗಳು ಕಾವ್ಯದಲ್ಲಿ ಬರೆದರು. "ರವಿ ಕಾಣದುದಂ ಕವಿ ಕಂಡಂ" ಎಂದು ಸುಮ್ಮನೆ ಹೇಳುತ್ತಾರೆಯೆ?

ಆಚಾರ್ರ್ರು:—(ಸಿಟ್ಟಿನಿಂದ) ಹಾಗಾದರೆ, "ಅಂಬಾ ಪಾಲಯಂ" ಎನ್ನುವುದಕ್ಕಿಂತ ಮೊದಲು "ಪ್ರಫುಲ್ಲವದನೆ" ಎಂದು ಬರೆದಿದ್ದಾರಲ್ಲ— ಅದಕ್ಕೂ ಹೀಗೆ ಅನರ್ಥವನ್ನು ಮಾಡುತ್ತೀರಾ?

ಗಜಪಂಡಿತ:— ಸಿಟ್ಟಾಗಬೇಡಿ ಆಚಾರ್ರೇ! ನಿಮಗೆ ಹಳೆಗನ್ನಡದ ಜ್ಞಾನ ಏನೂ ಇಲ್ಲ ನೋಡಿ! "ಪ್ರಫುಲ್ಲವದನೆ" ಎಂಬುದು ಸಂಸ್ಕೃತ ಶಬ್ದ; ಅದರ ಹಳೆಗನ್ನಡರೂಪವೇ "ಪರಪುಲ್ಲವದನೆ". ಕವಿಗಳ ಕರಿಯುವ ದನವು "ಅಂಬಾ" ಎಂದು ಕರೆಯುವಾಗ ಕವಿಗಳ ಕರುಣಾರಸವು ಉಕ್ಕಿಬಂದು, ಅಟ್ಟದಲ್ಲಿದ್ದ "ಪರಪುಲ್ಲ" ಎಂದರೆ "ಹಳೆಯ ಹುಲ್ಲನ್ನು", "ಅದನೆ" ಎಂದರೆ "ಅದನ್ನೇ",— ಒಟ್ಟರ್ಥ—"ಹಳೆಯ ಹುಲ್ಲನ್ನೇ" ಅದಕ್ಕೆ ತಿನ್ನಲು ಹಾಕಿದರು.

ಆಚಾರ್ರ್ರು:— ಇರಲಿ, ಕರಿವ ದನವನ್ನು "ಮಂಗಳಂ ಕರಿವ ದನ" ಎಂದದ್ದು ಯಾಕೆ?

ಪಂಡಿತರು:— "ಕರಿವ-ದನ-ಮಂಗಳಂ" ಎಂದರೆ, ಕರೆಯುವ ದನವು ಬಹುಶಃ "ಮಂಗಳ-ಮಂಗಳ"ವಾಗಿದ್ದಿರಬೇಕು!

ಗಜಪಂಡಿತರ ಪಾಂಡಿತ್ಯಕ್ಕೆ ಸಭಾಸದರ ಮುಂಡಾಸುಗಳೆಲ್ಲಾ ತೂಗಿದುವು! ಅಷ್ಟರಲ್ಲಿ ಪಂಡಿತರ ಮಾತನ್ನು ಖಂಡಿಸುವುದಕ್ಕೆಂದು ಎದ್ದರೇ ಎದ್ದರು "ಭಟ್‌ಕವಿ"ಗಳು! ಇವರು ವ್ಯಾಕರಣವನ್ನು ಗೋಕರ ಣಕ್ಕೆ ಹೋಗಿ ಅಭ್ಯಾಸಮಾಡಿದ್ದರು.

ಭಟ್‌ಕವಿ:— ಹೌದೊ ಪಂಡಿತರೇ, ನೀವು ಇಷ್ಟೊಂದು ಅರ್ಥ ಮಾಡುತ್ತೀರಲ್ಲ— ನೀವು ಬರೆದ "ಹಾರವಲಯಂ" ಎಂಬುದರ ಅರ್ಥ ವೇನು?

ಪಂಡಿತರು:— "ಹಾ! ರವ-ಲಯಂ!" ಎಂದರೆ, "ಹಾ!" ಎಂಬ ಆರ್ತನಾದವು "ಲಯಂ!" ಎಂದರೆ "ನಾಶವಾಗಿದೆ" ಎಂದರ್ಥ.

ಭಟ್‌ಕವಿ:— ಹಾಗೋ? ಅಥವಾ, "ಹಾರವ-ಲಯಂ" ಎಂದರೆ, "ಬ್ರಾಹ್ಮಣ ಸತ್ತ" ಎಂತಲೊ?

ಪಂಡಿತರು:—ಹುಂ, ಇರಲಿ, ನೀವು ಬರೆದಿದ್ದೀರಲ್ಲ—"ಹಾರವರಲ್ಲ ದೇವರ ಭಕ್ತರೂ" ಎಂದು. ಹಾರವರು "ಅಲ್ಲಾ" ದೇವರ ಭಕ್ತರಾಗುವುದು ಹೇಗಯ್ಯ?

ಭಟ್‌ಕವಿ:—ಸಾಕು ಸಾಕು. ನಿಮ್ಮ ಕಾವ್ಯದಲ್ಲಿ ನಾನೇ ನೋಡಿರುವೆನು—"ಏಸು ಹೇಳಿದರು ಮುಹಮುದರೂ" ಎಂದು ಬರೆದುದನ್ನು! ಹಿಂದೂಕಾವ್ಯದಲ್ಲಿ ಏಸು, ಮುಹಮ್ಮದ—ಇವರನ್ನೆಲ್ಲಾ ತಂದು ಜಾತಿಗೆಡಿಸಿದ್ದೇಕೆ?........ಅದೆಲ್ಲಾ ಹೋಗಲಿ, ನೀವು ವಿಷ್ಣುವನ್ನು "ಪೂಗಣ್ಣ"ನೆಂದು ಹೇಳಿದ್ದೀರಲ್ಲ—ಅವನ ಕಣ್ಣು ಹೂ ಬಂದಿದೆಯೆ?

ಪಂಡಿತರು:—ಹಾಗಾದರೆ ನೀವು, "ಸ್ವರ್ಗತಾ ನೆರೆಮನೆಯ ಅಕ್ಕು" ಎಂದೇಕೆ ಬರೆದಿರಿ? "ಅಕ್ಕು" ನಿಮ್ಮ ನೆರೆಮನೆಯವಳೊ?

ಭಟ್‌ಕವಿಗಳಿಗೆ ಸಿಟ್ಟು ತಡೆಯಲಾರದೆ ಹೋಯಿತು. "ಅಕ್ಕು" ನಿಜವಾಗಿಯೂ ಅವರ ಹತ್ತಿರದವಳೇ ಆಗಿದ್ದಳು. ಪಾಪ, ಭಟ್ ಮಹಾಶಯರಿಗೆ ತಮ್ಮ "ತುರ್ಪು ಔಟು" ಆದದ್ದಕ್ಕೆ ಬಂದ ಸಿಟ್ಟೆಂದರೆ ಅಷ್ಟಿಷ್ಟಲ್ಲ. ಪಂಡಿತರಿಗೆ ಶಾಪಕೊಟ್ಟು ಬೂದಿ ಮಾಡಿಬಿಡೋಣವೆನ್ನಿಸಿತು ಅವರಿಗೆ! ಆದರೆ, ಶಾಪದ ಫಲವೇನೂ ಆಗಲಿಕ್ಕಿಲ್ಲವೆಂದು "ಖಾತ್ರಿ" ಗೊತ್ತಿದ್ದ ಕಾರಣ, ತಣ್ಣಗಾಗಬೇಕಾಯಿತು. ಅವರು ಪಂಡಿತರನ್ನು ಸೋಲಿಸಿಬಿಡಬೇಕೆಂದು, ಮಾತಿನ ಭರದಲ್ಲಿ ಮುಂದೆ ಮುಂದೆ ಬಂದಿದ್ದರು. ಈಗ ಸಿಟ್ಟಿನ "ಫೋರ್ಸಿ"ನಲ್ಲಿ ಥಟ್ಟನೆ ಕುಳಿತುಬಿಟ್ಟರು. ಆದರೆ, ಆಸನವು ಅವರ ಜೊತೆಯಲ್ಲಿಯೇ ಮುಂದೆ ಹೋಗಿರಲಿಲ್ಲವಾದ ಕಾರಣ ಕವಿಗಳು ಪಾಪ, ಕೆಳಗುರುಳಬೇಕಾಯಿತು. ಸೊಂಟದಲ್ಲಿ ಸಿಕ್ಕಿಸಿಕೊಂಡಿದ್ದ ಪುಡಿಬುರುಡೆಯು ಸಭಾಮಂಟಪದಲ್ಲೆಲ್ಲಾ "ಚಕ್ಕರ್" ಹೊಡೆದು, ಕೊನೆಗೆ ಅಧ್ಯಕ್ಷರ ಪಾದಕ್ಕೆ ಶರಣೆಂದಿತು. ಕವಿಗಳಿಗೆ ಅಪಮಾನದ ಮೇಲೆ ಅಪಮಾನ; ಆದರೆ, ಉಪಾಯವಿರಲಿಲ್ಲ, ಧೂಳು ಒರಸಿಕೊಂಡು ಎದ್ದರು. ಬಳಿಯಲ್ಲೇ ಭಟ್‌ಕವಿಗಳ ಮಗ ಕುಳಿತಿದ್ದರು. ಅವರು ಸ್ವಲ್ಪ "ಇಂಗ್ಲಿಷು-ಗಿಂಗ್ಲಿಷು" ಕಲಿತು ಸುಧಾರಿಸಿದ "ಅರೆ-ಪಂಡಿತರು." "ಇಂಗ್ಲಿಷಿ"ನಲ್ಲಿ ಅವರು "ಬಾವಲಿ" (ಬಿ. ಒ. ಎಲ್.)ಗಳಾಗಿದ್ದರು. ಈ ಬಿರುದು-ಬಾವಲಿ ದೊರಕಿಸಿಕೊಳ್ಳಲು ಅವರು ಎಷ್ಟೋ

ವರ್ಷ ತಪಸ್ಸುಮಾಡಿ ಕೈಕಾಲು ಬಡೆದುಕೊಂಡಿದ್ದರು. ನೋಡುವಾಗಲೇ ಅವರ ಸುಧಾರಣೆಯು ಎದ್ದುಕಾಣುತ್ತಿತ್ತು—ತಲೆಯಲ್ಲಿ ಇತರ ಪಂಡಿತ ರಂತೆ ಮುಂಡಾಸಿರಲಿಲ್ಲ, ತಲೆಯೂ ಸಂಪೂರ್ಣ ಇರಲಿಲ್ಲ—ಅರೆತಲೆ-ಯೂ-ಮುರಿತಲೆಯುವರಾಗಿದ್ದರು; ಕೆಲವರು ಅವರನ್ನು "ತಲೆಹೋಕ" ರೆಂದೂ ಕರೆಯುತ್ತಿದ್ದರು. ಇರಲಿ, ಪಂಡಿತರೊಡನೆ ಹೇಗಾದರೂ "ಒಂದು ಕೈ ನೋಡಿಯೇ ಬಿಡಬೇಕೆ"ಂದು ಎನ್ನಿಸಿತು ಅವರಿಗೆ. ಫಕ್ಕನೆ ಎದ್ದು ಹೀಗೆ ಕೇಳಿದರು—"ಏನಯ್ಯಾ ಪಂಡಿತರೇ, 'ಕೌಮುದಿ' ಎಂಬ ಶಬ್ದಕ್ಕೆ ನೀವು ಯಾವ ಅರ್ಥವನ್ನಿಟ್ಟುಕೊಂಡಿದ್ದೀರಿ?"

ಪಂಡಿತರು:—"ಕೌಮುದಿ" ಎಂದರೆ "ಜ್ಯೋತ್ಸ್ನ."

ಭಟ್ ಮಗ:—ಹಾಗೆಂದರೆ? What mean?

ಪಂಡಿತರು:—ಹೋಟ್-ಮೀನಲ್ಲ, ಹಸಿ-ಮೀನು!........ಜ್ಯೋತ್ಸ್ನ ಎಂದರೆ ಬೆಳದಿಂಗಳು.

ಭಟ್ ಮಗ:—ಹಾಂ, ಸೋತಿರಿ! ಕೌಮುದಿ ಎಂಬುದರ ಅರ್ಥವೇ ಬೇರೆ—quiet diffrent! "ಕೌ" means "ದನ", "ಮುದಿ" means "ಥೇಟ್ ಮುದಿ!" Therepore, "ಕೌಮುದಿ" meanings "ಮುದಿ ದನ" ಎಂದರ್ಥ......................

ಪಂಡಿತರ ಮುಖ ಸ್ವಲ್ಪ ಚಿರುಟಿತು. ಸ್ವಲ್ಪ ಹೊತ್ತು ಯೋಚಿಸಿ,—"ಹಾಗಾದರೆ "ಸೂಕರ" ಎಂದರೇನು?" ಎಂದು ಕೇಳಿದರು.

ಭಟ್ ಮಗ:—"ಸು" ಎಂದರೆ "ಒಳ್ಳೇ—good"; "ಕರ" ಎಂದರೆ, ಮಡಕೆ. So, "ಸೂಕರ" means "ಒಳ್ಳೆ ಮಡಕೆ—good madke" ....ನೀವೆಲ್ಲಾ ಓಬಿರಾಯನ ಕಾಲದ ಹಳೇ ಪಂಡಿತರು. Language ಗಳಲ್ಲಿ ಎಷ್ಟು refrom ಆಗಿದೆ ಎಂದು you pundits don't no! Caldwell ಸಾಹೇಬರು ಬರೆದ Comprative ಭಾಷಾ gramer ಪ್ರಕಾರ, ನಾವು ಶಬ್ದಗಳ ರೂಪಕ್ಕೆ ಬೇರೆ ಬೇರೆ ಭಾಷೆ ಗಳನ್ನು ಹುಡುಕಬೇಕಾಗುತ್ತದೆ. ತುಳು ಭಾಷೆಯಲ್ಲಿ how much good good ಒಳ್ಳೊಳ್ಳೇ ಶಬ್ದಗಳಿವೆ ಎಂಬುದು ಹಲವರಿಗೆ don't no! "ಪೂತ ವೃಕ್ಷಂಗಳಂ" ಎಂಬುದರಲ್ಲಿ "ಪೂತ" ಎಂಬ world (ಶಬ್ದ) pure ತುಳು!

ಪಂಡಿತರು:—ಸರಿ ಸರಿ, ನೀವು "ಕವಿ ಕವಿ" ಎಂದುಕೊಂಡು, ಏನೇನು ಬರೆಯುತ್ತೀರಿ ಬಾಯಿಗೆ ಬಂದದ್ದು! "ಅಲ್ಲಿರುವೆ, ಇಲ್ಲಿರುವೆ, ಎಲ್ಲಿರುವೆ,.......ಎಲ್ಲೆಲ್ಲಿಯೂ ಇರುವೆಗಳೇ! ಈಗಿನವರ ಕಾವ್ಯಗಳಿಗೆಲ್ಲಾ "ಇರುವೆ-ಕಾವ್ಯಗಳು" ಎಂದು ಹೆಸರಿಡಬೇಕಿತ್ತು.

ಭಟ್ ಮಗ:—ಪಂಡಿತರೇ, ನಿಮಗೆ ಇಷ್ಟು ದೊಡ್ಡ ಮುಂಡಾಸು ಇರುವ ಬದಲು, ಆ ಮುಂಡಾಸಿನೊಳಗೆ ಒಂದಿಷ್ಟು ಮೆದುಳು ಇರುತ್ತಿದ್ದರೆ, ನೀವು ಹೀಗೆ ಹೇಳುತ್ತಿರಲಿಲ್ಲ! You don't no nothing! ಇರುವೆ ಬರೋದು ಎಲ್ಲಿ ಸಿಹಿ ಉಂಟೋ ಅಲ್ಲಿಗೆ. ಈಗಿನ modren ಕಾವ್ಯರಸವು ಅಷ್ಟು ಮಧುರ, ಅಷ್ಟು sweet ಆಗಿದೆ. ನಿಮ್ಮಂಥಾ ತಗಣೆ, ಹೆಗ್ಗಣಗಳು ನಮ್ಮ ಕಾವ್ಯಕ್ಕೆ ಬರಲಾರವು, ಬರುವುದೂ ಬೇಡ. "ಗಣಗಳೊಳು ಹೆಗ್ಗಣ-ನೀ-ತಗಣೇ-ಶ" ಎಂದು ಬರೆದ ನಿಮ್ಮ ಕಾವ್ಯಕ್ಕೆ "ಹೆಗ್ಗಣ ಕಾವ್ಯ, ತಗಣೆ ಕಾವ್ಯ" ಎಂದು ಹೆಸರಿಡಬಾರದೆ?

ಪಂಡಿತರು:—ಗೊತ್ತಿದೆಯಯ್ಯ ನಿಮ್ಮ ಹೊಸ-ಕವಿಗಳ ಹಣೇಬರೆಹ! ನೋಡಿ, ನಿಮ್ಮ ಮಹಾಕಾವ್ಯ—

"ಕಾಫಿ ಕುಡಿದಾರ್ಭಟಿಸಿ, ತನ್ನಯ
ಚಾಪೆಯಮ ತರಹೇಳಿ ಮಲಗುತ
ಕೋಪದಲಿ ಕೈಕಾಲು ಬಡಿದನು ಭೂಪಕೇಳೆಂದಾ"

ಹೀಗೇಕೆ ಬರೆದದ್ದು? ಹಿಂದಿನ ಕಾಲದಲ್ಲಿ ಕಾಫಿಯನ್ನು ಯಾರು ಕುಡಿಯುತ್ತಿದ್ದರು? ಒಂದುವೇಳೆ ಕುಡಿಯುತ್ತಿದ್ದರೆಂದೇ ಭಾವಿಸೋಣ; ಹಾಗಾದರೆ, ಕಾಫಿಯನ್ನು ಕುಡಿದು ಯಾರಾದರೂ ಆರ್ಭಟಿಸುವುದುಂಟೆ? ಹಾಗೆ ಆರ್ಭಟಿಸಿದರೆಂದೇ ಇಟ್ಟುಕೊಳ್ಳೋಣ; ಆರ್ಭಟಿಸಿದಮೇಲೆ ಚಾಪೆಯ ಮೇಲೆ ಮಲಗಿದ್ದೇಕೆ? ಮಲಗಿದಮೇಲೆ ಕೋಪ ಬಂತಂತೆ, ಕೈಕಾಲು ಬಡೆದನಂತೆ, ಆ ಮೇಲೆ ಭೂಪಕೇಳಂತೆ! ಏನೇನೋ ಅಸಂಬದ್ಧ ಪ್ರಲಾಪ!

ಭಟ್ ಮಗ:—shut up! ಈ simple ಪದ್ಯವನ್ನು ಅರ್ಥ ಮಾಡಿಕೊಳ್ಳಲಾಗದ ನಿಮಗೆ ಏನೂ ಬುರುಡೆ ಇಲ್ಲವೆಂದೇ ಇಟ್ಟುಕೊಳ್ಳೋಣ. ಬುರುಡೆಯಿಲ್ಲದಮೇಲೆ ನೀವು ಮುಂಡಾಸು ಕಟ್ಟಿದ್ದೇಕೆ?

"ಕಾಫಿ"ಯು ರುಚಿ ಗೊತ್ತಿಲ್ಲದವರು ನೀವು ಪಂಡಿತರಂತೆ! what ಪಂಡಿತರಯ್ಯ ನೀವು? ಕಾವ್ಯ ಬರೆಯುುವುದು!........"ಚಾಟಿಯು ಬಡಿದು ಚಟ ಚಟ ಹಾಡತೊಡಗಿದನೂ"...........ಇದನ್ನು ಬರೆದವರು ನೀವೇ ಅಲ್ವೊ ಗಜ ಪಂಡಿತರು! quiet rong! "ಚಾ-ಟೀ" ಇವನ್ನೆಲ್ಲಾ ಕುಡಿಯುುವುದು ಹೊರತು, ಬಡಿಯುುವುದು ಹೇಗಯ್ಯಾ—to my head it do not goes. "ಚಾಟೀಯು ಕುಡಿದು ಹಾಡತೊಡಗಿದನೂ" ಎಂತ connection (correction) ಮಾಡಿದರೆ ಎಷ್ಟು good ಅರ್ಥವಾಗುತ್ತದೆ! ಚಾ-ಕುದಿದರೆ ಹಾಗೆ ಒಂದು ನಮೂನೆ "ಫೋರ್ಸ್" ಬರುತ್ತದೆ, ಆಗ sing ಮಾಡಲಿಕ್ಕೂ ಮನಸ್ಸಾಗುತ್ತದೆ. ಹೀಗೆ drinked sing then, ಕುಡಿದು ಹಾಡಿದರೆ, "ಚಾಟೀ-ಫಲಾಹಾರ"ದ ಪೂರ್ಣ ಫಲವೂ ಸಿಗುತ್ತದೆ!

ಪಂಡಿತರು ಸಾಧಾರಣ ಸೋತಂತೆ ಕಂಡರು. ಅವರ ಭಂಡಾರ "ಖಾಲಿ"ಯಾಗುತ್ತಾ ಬಂತು. ಭಟ್‌ಕವಿಗಳ ಮುಖ ಅರಳಿತು, ಬಿರಿಯಿತು. "ನನ್ನ ಮಗ ಹೌದು. ಪರ್ವಾ ಇಲ್ಲ, ಹೆಸರು ಹೇಳಿಸುವಂಥಾ ಮಗ, ಇದ್ದರೆ ಇಂಥವನೊಬ್ಬನಿದ್ದರೆ ಸಾಕು—ನೂರಒಂದು ಜನವಿದ್ದರೇನು ಫಲ?" ಎನ್ನಿಸಿತು ಕವಿಗಳಿಗೆ. ಕೈಚಪ್ಪಾಳೆಗಳೊಡನೆ ಭಟ್ ಮಗ ಗಂಭೀರವಾಗಿ ಕುಳಿತುಕೊಂಡರು. ಸ್ವಲ್ಪ ಹೊತ್ತು ಎಲ್ಲರೂ ಮೌನ.

ಎಲ್ಲರ ಹಿಂದಿನಿಂದ ಕುಳಿತವರು ಹಿಂದೀ ಮೌಲ್ವಿಗಳು. ಕನ್ನಡ ಗೊತ್ತಿದ್ದರೂ, ಮಾತೃಭಾಷೆ ಹಿಂದುಸ್ಥಾನಿಯಾದುದರಿಂದ, "ಹಿಂದಿನಿಂದಲೇ" ಮಾತನಾಡುತ್ತಿದ್ದರು. ಕನ್ನಡ ಮಾತನಾಡುವಾಗಲೂ, ಹಿಂದುಸ್ಥಾನೀ ಶಬ್ದಗಳೇ ಹೆಚ್ಚು ಬರುತ್ತಿದ್ದುವು. ಅವರು ಜಾತಿಯಲ್ಲಿ ಮುಸಲ್ಮಾನನಾಗಿದ್ದರೂ, ಪಂಡಿತ-ಜಾತಿಗೆ "ಜಮಾ" ತೆಗೆದುಕೊಳ್ಳಲ್ಪಟ್ಟ ಕಾರಣ, ಅವರಿಗೂ ಈ ಪಂಡಿತ-ಮಂಡಲಿಯಲ್ಲಿ ಸ್ಥಾನ ಕೊಡಲಾಗಿತ್ತು—ಹಿಂದಿನಿಂದ. ಅವರು ಒಂದು ರೀತಿಯಿಂದ ಹಿಂದೂ-ಮುಸ್ಲಿಮರಾಗಿದ್ದರು; ಅವರ ಹೆಸರು "ಮೌಲ್ವೀ ಅಬ್ದುಲ್ ಸಾಹೆಬ್" ಎಂದಾಗಿದ್ದರೂ, ಪಂಡಿತರೆಲ್ಲರೂ ಅವರಿಗೆ "ಅಬ್ದುಲ್ ಭಟ್ಟ"ರೆಂದು ನಾಮಕರಣ ಮಾಡಿ, ತಮ್ಮ ಗುಂಪಿಗೆ ಸೇರಿಸಿಕೊಂಡಿದ್ದರು. ಇದಿಷ್ಟು ಅವರ ಚರಿತ್ರೆ.

ಅಬ್ದುಲ್ ಭಟ್ಟರು "ದಾಡಿ" ತಿಕ್ಕಿಕೊಳ್ಳುತ್ತಾ ಮೆಲ್ಲನೆ ಎದ್ದು, ನಿಧಾನ ವಾಗಿ ಹೀಗೆ ಹೇಳಿದರು—

"ಅಧ್ಯಚ್ಚ (ಅಧ್ಯಕ್ಷ) ಸಾಹೆಬ್, ಹಮ್ಕು ಕೂಡಾ ಜರಾ ಜರಾ ಬರ್‍ತದೆಹೈ ನಿಮ್ದು...........

ಒಬ್ಬ ಪಂಡಿತರು:—(ಎದ್ದು ನಿಂತು) ಅಬ್ದುಲ್ ಭಟ್ಟರೇ, ಜ್ವರ ಬರುತ್ತದೆ ಎಂತಾದರೆ ಕುಳಿತುಕೊಳ್ಳಿ, ಅಥವಾ ಮಲಗಿಕೊಳ್ಳಿ. ಸುಮ್ಮನೆ ಆಯಾಸ ಪಟ್ಟರೆ...........

ಅಬ್ದುಲ್ ಭಟ್ಟ:—ನಯಿ ನಯಿ, ಹಮ್ಕು ಜರಾ ಜರಾ ನಹಿ!

ಪಂಡಿತರು:—ಏನ್ರೀ ಸಾಹೆಬರೆ, ತಲೆಗಿಲೆ ಕೆಟ್ಟಿತೊ ಏನು? ನಾಯಿ ಎಂದು ಯಾರಿಗೆ ಹೇಳುತ್ತಾ ಇದ್ದೀರಿ?

ಅಧ್ಯಕ್ಷ:—ಅಬ್ದುಲ್ಲ ಭಟ್ಟರೇ, ಸಭೋಚಿತವಾದ ಯೋಗ್ಯ ಶಬ್ದ ಗಳನ್ನೇ ಉಪಯೋಗಿಸಿರಿ.

ಅಬ್ದುಲ್ ಭಟ್ಟ:—ಠೀಕ್, ಠೀಕ್, ಹಮ್ಕು ಅದ್ಯಚ್ಚರೇ, ನೋಡಿ ಸಲ್ಪ ಸಲ್ಪ ಕನ್ನಡಿಯೊಲ್ಗೆ ಬರ್‍ತದೆ. ಲೇಕಿನ್ ನಮ್ಕು ನಿಮ್ಕು ತಿಲ್ಯೋದ್ಕೆ ಜರಾ ಮುಶ್ಕಿಲ್ ಹೈ. ಕನ್ನಡಿಯೊಲ್ಗೆ ನಮ್ದು ಅನುಬಾವ ಆಗಿ ಮೊಣ್ಣೆ ಮೊಣ್ಣೆ ಕರೀಬ್ ಒಂದು ವರ್ಸ ಕಲ್ದು ಹೋಗ್ತದೆ, ಅಸ್ಟೆಹೈ. ಮೊಣ್ಣೆ ಮೊಣ್ಣೆ ನಮ್ಕು ಬೀಬಿ ಮರ್ ಗಯೀ. ಹಂಗಾಗಿ ತಲೇ ಒಲ್ಗೆ ಫಿಕ್ರ್ ಬಂದ್ ಬಿಡ್ತು, ಕನ್ನಡಿ ಕಿತಾಬ್ ಗಿತಾಬ್ ಓದೋದು ಚಲಾ ಗಯಾ ಹೈ. ನಾವು ಈಗ ಏನು ಬಾಸನ ಕರ್‍ತದೆ ಹೈ—ನಿಮ್ಕು ಕನ್ನಡಿ ಓದೂದು ಬಾಲ ಅಚ್ಛಾ ಹೈ. ನಮ್ಕೆ ಬಹೂತ್ ಕುಶೀ ಉಂಟು. ಹಿಂದೂಕು ಮುಸ್ಲಿಮೂಕು ಬಹೂತ್ ಫರಕ್ ಇಲ್ಲಾ ಹೈ. ನಿಮ್ಕು ಧಾಡೀ ಇಲ್ಲಾ, ನಮ್ಕು ಚೋಟೀ ನಹೀ—ಹಮ್ಕು ಎಲ್ಲಾರೂ ಏಕ್ ಹೈ. ನಮ್ದು ಮುಲ್ಕ್ ಒಂದೇ. ಬಾಸೆ ಒಂದೇ ಕರ್ನೇಕೂ ನಮ್ಕೆ ಬಾಲ ಕೋಶಿಸ್ ಮಾಡ್ಬೇಕೂಂತ ನಾವು ಬಾಸನ ಮಾಡ್ತದೆ. ನಮ್ಮೊಳ್ಕೆ ಜಗ್ಡಾ ಗಿಗ್ಡಾ ಲಡಾಯಿ ಗಿಡಾಯಿ ಬೇಡಾಂತ ನಾವು ಸಲಾಮ್ ಮಾಡ್ತದೆ.

ಮೌಲ್ವೀ ಅಬ್ದುಲ್ ಭಟ್ಟರ ಭಾಷಣದಿಂದ, ಎಲ್ಲರಿಗೂ ಸಂತೋಷ ವಾಯಿತು, ಜಗಳಗಳೆಲ್ಲಾ ದೂರವಾದುವು. ಸ್ವಲ್ಪಹೊತ್ತು ಸಭೆಯು

ಮೌನವಾಗಿತ್ತು. ಅಧ್ಯಕ್ಷರು ಎದ್ದು—"ಇನ್ನೂ ಮಾತನಾಡುವವರಿದ್ದರೆ, ಮುಂದೆ ಬರಬಹುದು" ಎಂದರು.

ಇನ್ನೊಬ್ಬ ಮಹಾನುಭಾವರು ಎದ್ದು ನಿಂತರು. ಇವರು ಕನ್ನಡ "ಜಾಣ"ರಾಗಿದ್ದರು. ಕನ್ನಡವೆಂದರೆ ಅವರ ಪ್ರಾಣ. ಕನ್ನಡಕ್ಕಾಗಿ ಒಂದಾನೊಂದು ದಿನ ಅವರು ಪ್ರಾಣಬಿಡುವುದಕ್ಕೂ ಹಿಂದುಮುಂದು ನೋಡುವವರಲ್ಲ. ಜಾಣರ ಭಾಷಣವು ಪ್ರಾರಂಭವಾಯಿತು—

ಜಾಣ:—ಪಂಡಿತಗಣಮೆ! ನಿಮ್ಮೆಲ್ಲರ ಪಾಂಡಿತ್ಯಮಂ ಏಂ ಪೊಗಳ್ವುದೊ! ತಿರುಳ್ಗನ್ನಡ ನುಡಿಯೊಳ್ ದೋಷಮನಲ್ತು, ಆ ಬೆಳ್ನುಡಿಯೊಳ್ ಪುರುಳೆನಿತಿರ್ಪುದೆಂದರಸುವುದೆ ಎಮ್ಮಯ ಕಜ್ಜಂ. ದೋಷಮನರಸುವುದು ಕುಹಕಿಗಳ ಕಜ್ಜಮಲ್ತೆ? ಕನ್ನಡದ ಕತ್ತುರಿಯಂ ದೆಸೆದೆಸೆಗೆ ಪರ್ಬುವಂತೆಸಗಿದೊಡೆ ಸಾರ್ಥಕಮಪ್ಪುದೆಮ್ಮಬಾಳ್. ಬರಿದೆ ಬಾಯ್ಸೊಣಸಿನೇಂ?

ಅಬ್ದುಲ್ಲಭಟ್:—ಯೆ ಕ್ಯಾ ಬಾತ್ ಹೈ? ಹಮ್ಕು ಮಾಲುಮ್ ನಹೀ ಹೋತಾ!

ಜಾಣ:—(ಸಿಟ್ಟಿನಿಂದ) ಆರ್? ಹೋತನಾರ್? ಏಂ ಬಾಯ್ಗೆ ಬಂದಂತೆ ಗಳಪುವಯ್? ಗಡ್ಡಮುಳ್ಳಾತನೆ ಹೋತಂ! ಇಂತಿರೊಂದು ಮಾಳ್ಕೆಯಿಂ ಗಳ್ಕನೆದ್ದು ನಿಂದಿದಿರ ಜನಮಂ ಜರೆದೊಡೆ ಪರಿಣಾಮಂ ಲೇಸಾಗದು, ಎಚ್ಚರಮೆಚ್ಚರಂ! ಪೋ ಪೋ! ಇನ್ನೊಮ್ಮೆರ್ ಪೋತನೆಂದೊಡೆ ಪಲ್ಗಳನೆಲ್ಲಂ ಬಾಯೊಳ್ ತುರುಂಕದಿರ್ಪೆನೆ?

ಅಬ್ದುಲ್ಲಭಟ್:—ಏನ್ರಿ, ತುರುಂಕ ಎಂತಾ ಬಯ್ತುದೆ ಹಮ್ಕು? (ಗಡ್ಡ ತಿಕ್ಕುತ್ತಾ ಏಳುವರು.)

ಜಾಣ:—ಹಮ್ಕು ಎಂದೊಡೆ ಮಂಡೆಯನೆ ಬಿರ್ಚಿದಪೆಂ ನೋಡ!

(ಕೈ ಎತ್ತಿ ಹೊಡೆಯಲು ಮುಂದಾಗುವರು)

ಅಧ್ಯಕ್ಷರು:—ತಡೆಯಿರಿ, ತಡೆಯಿರಿ. ಶಾಂತಂ ಪಾಪಂ, ಶಾಂತಂ ಪಾಪಂ! ಇಬ್ಬರೂ ದಯವಿಟ್ಟು ಕುಳಿತುಕೊಳ್ಳಿರಿ!

ಇಬ್ಬರೂ ಕುಳಿತುಕೊಂಡರು. ಅಧ್ಯಕ್ಷರು ಮುಂದೆ ಯಾರನ್ನೂ ಮಾತಾಡಗೊಡದೆ, ತಾವೇ ಭಾಷಣಕ್ಕೆ ಪ್ರಾರಂಭಮಾಡಿದರು. ಅವರ ಅಮೋಘವಾದ ಭಾಷಣವು ಹೀಗಿತ್ತು—

"ಪ್ರಿಯ ಸಭಾಸದರೇ! ಬಂಧುಗಳೇ! ಕವಿಗಳೇ! ಅಖಂಡಮುಖಂಡ ಪಂಡಿತರೇ! ಭಾಷಾಭಿಮಾನಿಗಳೇ! ದೇಶಾಭಿಮಾನಿಗಳೇ! ವಿದ್ವನ್ಮಣಿಗಳೇ! ನೀವೆಲ್ಲರೂ ಈ ದಿನ ನನ್ನನ್ನು......."

ಅಬ್ದುಲ್ಲಭಟ್:— ಅಧ್ಯಚ್ಚರು ನಮ್ದು ಹಾಜ್ರಿ ಕರೀಲಿಲ್ಲ ಮಾಲೂಮ್ ಹೋತಾ ಹೈ!

ಅಧ್ಯಕ್ಷರು:— ಕ್ಷಮಿಸಿರಿ, ಮರೆತು ಬಿಟ್ಟೆ. ಮತ್ತೂ ಮೌಲ್ವೀ ಸಾಹೇಬರಾದ ಅಬ್ದುಲ್ಲ ಭಟ್ಟರೇ! ನೀವೆಲ್ಲರೂ ಈ ದಿನ ನನ್ನನ್ನು ಎತ್ತರದಲ್ಲಿ ಕುಳ್ಳಿರಿಸಿದ್ದಕ್ಕಾಗಿ........ನಾನು ನಿಮಗೆಲ್ಲರಿಗೂ ತುಂಬಾ...."ಇದು" ಆಗಿದ್ದೇನೆ. (ಎಂಥದೋ ಅವರಿಗೇ ಗೊತ್ತು). ನಿಮ್ಮೆಲ್ಲರ ಭಾಷಣಗಳನ್ನೂ, ಕಾವ್ಯವಿಮರ್ಶೆಗಳನ್ನೂ, ವ್ಯಾಕರಣಪಾಂಡಿತ್ಯವನ್ನೂ ಶಬ್ದಾರ್ಥಗಳ ಚಮತ್ಕಾರಗಳನ್ನೂ, ವಿದ್ಯಾಸಂಪತ್ತನ್ನೂ, ಅಪ್ರತಿಮ ವಾಗ್ವೈಖರಿಯನ್ನೂ, ವಿವಿಧ ವಿಚಾರಗಳ "ಇದನ್ನೂ" ಕೇಳಿ, ನನಗೆ ತುಂಬಾ ಸಂತೋಷವಾಗಿ ಬಿಟ್ಟಿದೆ, ತಲೆ ಕೆದರಿದೆ, ಎದೆ ಕದಡಿದೆ, ಕರುಳು ಕರಗಿದೆ, ಮುಖ ಬಿರಿದಿದೆ. ಜನಸಾಮಾನ್ಯರಲ್ಲಿ ಭಾಷಾಪಂಡಿತರಾದ ನಮ್ಮ ಮೇಲೆ ಬಹಳ ತಾತ್ಸಾರವಿದೆ. ನಾವು ಜನಾಂಗದ ಜೀವಾಳ, ಕನ್ನಡಭಾಷೆಯ ದಿಗ್ಗಜಗಳೆಂಬ ಮಾತು, ಕುರುಡು ಜನತೆಗೆ ಇನ್ನೂ ತಿಳಿದುಬರಲಿಲ್ಲ! (ಕೈ ಚಪ್ಪಾಳೆ) ಆದುದರಿಂದ ನಾವು ನಮ್ಮ ಶಕ್ತಿ, ಸಾಹಸ, ಧೈರ್ಯಸ್ಥೈರ್ಯಗಳಿಂದ ಇಂದು ಜನರನ್ನು ಎದುರಿಸಿ, ಅವರನ್ನು ಗಾಢನಿದ್ರೆಯಿಂದ ಎಬ್ಬಿಸಿ, ಈ ಮೂಢಭಾವನೆಯನ್ನು ಹೋಗಾಡಿಸಬೇಕಾಗಿದೆ. (ಕೈ ಚಪ್ಪಾಳೆ) ಇಂದು ನಾವು ಇಲ್ಲಿ ಒಟ್ಟುಕೂಡಿದ ಉದ್ದೇಶವು, ಬಿದ್ದ ಕನ್ನಡವನ್ನು ಎತ್ತಿ ಹಿಡಿಯುವುದಕ್ಕೆ; ಹಿಂದಿನವರು ಬರೆದ ದೋಷಗಳನ್ನು ತಿದ್ದಿ, ಕನ್ನಡದಲ್ಲಿ ಹೊಸ ಹುರುಪು, ಹೊಸ ಕ್ರಾಂತಿ ತರುವುದಕ್ಕೆ. ಜಗಿದ ಕಬ್ಬನ್ನು ಪುನಃ ಜಗಿದರೆ ರಸಬಾರದು. ಹಿಂದಿನ ಕವಿಗಳು ತುಳಿದದಾರಿಗಳಲ್ಲಿ ಪುನಃ ಪುನಃ ನಡೆಯುವುದರಲ್ಲಿ ಹುರುಳಿಲ್ಲ. ಕನ್ನಡದ ಕಡಲೇ ನಮ್ಮದು, ಬೇಕಾದಲ್ಲಿ ಹಡಗುನಡೆಯಿಸುವ ಅಧಿಕಾರ ನಮಗಿದೆ. ನಾವಿಂದು ಹೊಸ ಅಂಗಿಯನ್ನು ಧರಿಸಬೇಕು, ಹೊಸ ಉಪಮೆಗಳನ್ನು, ಹೊಸ ಭಾವಗಳನ್ನು ಹುಡುಕಬೇಕು. ಹಿಂದಿನವರು ಕಾವ್ಯಗ್ರಂಥಗಳಲ್ಲಿ

ಎಷ್ಟೆಷ್ಟೋ ತಪ್ಪುಗಳನ್ನು ಮಾಡಿದ್ದಾರೆ, ಅವರ ಜ್ಞಾನಭಂಡಾರ ಬಹಳ ಚಿಕ್ಕದು. ನಾವು ಹಾಗಲ್ಲ, ನಮ್ಮ ಜ್ಞಾನಭಂಡಾರ ಬೆಳೆದಿದೆ. ಅದರ ಬೀಗಮುದ್ರೆ ನಮ್ಮ ಕೈಯಲ್ಲಿದೆ. ಕಣ್ಣುಮುಚ್ಚಿ ನಾವು ಕೂಡ ಹಿಂದಿನವರಂತೆ ತಪ್ಪು ಮಾಡಿದರೆ, ಲೋಕ ಮೆಚ್ಚದು. ಕನ್ನಡವು ಬಹಳ ಪ್ರಾಚೀನವಾದ ಭಾಷೆ. ಅದರಷ್ಟು ಪ್ರಾಚೀನವಾದ ಭಾಷೆ ಜಗತ್ತಿನಲ್ಲಿ ಬೇರೊಂದಿಲ್ಲ. ಎರಡುಕೋಟಿ ವರ್ಷಗಳ ಹಿಂದೆಯೇ, ಕನ್ನಡಗ್ರಂಥಗಳು ಉದ್ಭವವಾಗಿದ್ದುವೆಂದರೆ, ಯಾರಿಗಾದರೂ ಸುಳ್ಳೆಂದೇ ಕಾಣಬಹುದು!

ಭಟ್ ಮಗ:—ಅಧ್ಯಕ್ಷ ಮಹಾಶಯರೇ, ಕನ್ನಡ ಗ್ರಂಥಗಳು ನಮಗೆ ದೊರೆಯುವುದು ಸಾಮಾನ್ಯ ಒಂಬತ್ತನೇ ಶತಮಾನದಿಂದೀಚೆಗೆ. ಕಾಲ್ಡ್‌ವೆಲ್ ಸಾಹೇಬರು, ಮತ್ತು ಇತರರು ಈ ವಿಷಯವಾಗಿ ತುಂಬಾ ಬರೆದಿದ್ದಾರೆ.

ಅಧ್ಯಕ್ಷ:—ಸತ್ತರು ನಿಮ್ಮ ಕಾಲ್ಡ್‌ವೆಲ್ ಸಾಹೇಬರು! ಅವರಿಗೆ ಕನ್ನಡದ ವಿಷಯ ಮಣ್ಣೂ ಗೊತ್ತಿಲ್ಲ. ಸುಮ್ಮಸುಮ್ಮನೆ ಬಾಯಿಗೆ ಬಂದುದನ್ನು ಬರೆದುಹಾಕಿದ್ದಾರೆ ಇಂಗ್ಲಿಷಿನಲ್ಲಿ. ಕನ್ನಡವು ಒಂದಾನೊಂದು ಕಾಲದಲ್ಲಿ, ಇಡೀ ಪ್ರಪಂಚದ ಭಾಷೆಯಾಗಿತ್ತು! ಬರಬರುತ್ತಾ ಕನ್ನಡವು ಹರಿಹಂಚಾಗಿ ಹೋಯಿತು. ನನ್ನ ಅಜ್ಜ ಒಂದುಸಲ ಕಾಶಿಗೆ, ಹರಿದ್ವಾರಕ್ಕೆ ಹೋಗಿದ್ದಾಗ, ಅಲ್ಲಿಯೂ ಕೂಡ ಅವರಿಗೆ ಕನ್ನಡ ಮಾತನಾಡುವ ಒಬ್ಬ ಕನ್ನಡಿಗರ ಭೇಟಿಯಾಗಿತ್ತೆಂದು ಅವರು ಹೇಳುತ್ತಿದ್ದರು! ಹುಡುಕುತ್ತಾ ಹೋದರೆ ಎರಡುಕೋಟಿಯಲ್ಲ, ಮೂರುಕೋಟಿ ವರ್ಷಗಳ ಹಿಂದಿನಿಂದಲೇ ಕನ್ನಡ ಭಾಷೆಯು ಜನಭಾಷೆಯಾಗಿತ್ತು. ಲಂಕೆಯಲ್ಲಿ ರಾವಣನ ಆಸ್ಥಾನದಲ್ಲಿಯೂ ಒಬ್ಬ ಕನ್ನಡ ಪಂಡಿತನಿದ್ದನಂತೆ! ಅವನು ಬರೆದ ಗ್ರಂಥಗಳೆಲ್ಲಾ ಲಂಕಾದಹನದಲ್ಲಿ ಸುಟ್ಟುಹೋದ ಕಾರಣ ನಮಗೊಂದೂ ಸಿಕ್ಕಲಿಲ್ಲ. ಕನ್ನಡವು ಆಸೇತುಹಿಮಾಚಲದ ವರೆಗಿನ ಸಮಸ್ತ ಭೂಖಂಡದ ಜನಭಾಷೆ, ಕಾವ್ಯಭಾಷೆಯಾಗಿತ್ತು. ಈಗ ಮಾತ್ರ ಇಂಗ್ಲಿಷಿನ ಕಾಲ, ಎಲ್ಲಿ ನೋಡಿದರೂ ಇಂಗ್ಲಿಷೇ. ಈಗ ನಾವು ಎಚ್ಚತ್ತಿದ್ದೇವೆ, ಕಣ್ಣು ಬಿಟ್ಟಿದ್ದೇವೆ. ಇನ್ನು ಇಂಗ್ಲಿಷರ ಆಟ ನಡೆಯಲಾರದು ನಮ್ಮ ಮೇಲೆ! ನಮ್ಮ ಕನ್ನಡವನ್ನು ಉದ್ಧರಿಸುವುದಕ್ಕಾಗಿ, ಈಗಲೇ ಸೊಂಟಗಟ್ಟಿ

ಬೇಕಾಗಿದೆ. ಇಂಗ್ಲಿಷಿನ ತಲೆಯನ್ನು ಮೆಟ್ಟಿ, ಕನ್ನಡದ ಬಾವುಟವನ್ನು ಹಾರಿಸುವ ಕೆಲಸಕ್ಕೆ ಇಂದೇ ತೊಡಗೋಣ! (ಕೈಚಪ್ಪಾಳೆ). ಆದುದರಿಂದ ನಾವು ಸುಮ್ಮನೆ ಕುಳಿತು ಪ್ರಯೋಜನವಿಲ್ಲ. ಈ ಕೂಡಲೇ ಈ ಪರಿಷತ್ತಿನಲ್ಲಿ, ಕನ್ನಡವನ್ನು ಕೂಡಲೇ ಪ್ರಪಂಚದ ಮುಖ್ಯಭಾಷೆಯನ್ನಾಗಿ ಮಾಡಬೇಕೆಂದು ನಿರ್ಣಯವನ್ನು ಮಾಡಿ, ಜಗತ್ತಿನ ಮೂಲೆಮೂಲೆಗಳಿಗೂ ಸಂದೇಶವನ್ನು ಕಳುಹಿಸಬೇಕು, ಸರಕಾರಕ್ಕೆ ಕಳುಹಿಸಬೇಕು, ಒಂದು ಪ್ರತಿಯನ್ನು ಕೂಡಲೇ ನಮ್ಮ ಇಂಗ್ಲಂಡು-ರಾಜರಿಗೆ ಕಳಿಸತಕ್ಕದ್ದು. (ಕೈಚಪ್ಪಾಳೆ).

ಹಿಂದಿನ ಕವಿಗಳೂ, ಲೇಖಕರೂ ತುಂಬಾ ತಪ್ಪುಗಳನ್ನು ಮಾಡಿದ್ದಾರೆಂಬುದಕ್ಕೆ ನೀವು ಬೇಕಾದಷ್ಟು ಉದಾಹರಣೆಗಳನ್ನು ಕೊಟ್ಟಿರುವಿರಿ. ಇದಕ್ಕೆ ಮುಖ್ಯ ಕಾರಣವೇನೆಂದರೆ, ಶಬ್ದಗಳ ಬಾಹುಳ್ಯ. ನಮ್ಮ ಭಾಷೆಯಲ್ಲಿ, ಇಂದು ಶಬ್ದಗಳು ವಿಪರೀತವಾಗಿ ಬೆಳೆದುಹೋಗಿವೆ. ಆದುದರಿಂದ, ಅಂತಹ ಕಾಡು-ಶಬ್ದಗಳನ್ನು ಕಿತ್ತು ಬಿಸಾಡಬೇಕಾಗಿದೆ, ಹೊಸಹೊಸ ಶಬ್ದಗಳನ್ನು ರೂಪಿಸಬೇಕಾಗಿದೆ. "ಹೆಣ್ಣು-ಹುಡುಗಿ" ಎಂಬ ಶಬ್ದವು ನಮ್ಮಲ್ಲಿ ವಾಡಿಕೆಗೆ ಬಂದದೆ; ಹಾಗೆಯೇ "ಗಂಡು-ಹುಡುಗಿ" ಎಂಬುದನ್ನು ವಾಡಿಕೆಗೆ ತಂದರೆ, "ಹುಡುಗ" ಎಂಬ ಶಬ್ದವು ತಾನಾಗಿಯೇ ಬಿದ್ದುಹೋಗುವುದು. ಅಪ್ಪ, ತಂದೆ, ಪಿತ ಎಂಬ ಹಲವು ಶಬ್ದಗಳ ಬದಲು, "ತಾಯಿ-ಗಂಡ" ಎಂಬ ಒಂದೇ ಶಬ್ದವು ಊರುಸುಡಲು ಸಾಕು. ಆತನು, ಈತನು ಎಂಬವುಗಳ ಜೊತೆಗೆ ಆತಳು, ಈತಳು ಶಬ್ದಗಳನ್ನು ಉಪಯೋಗಕ್ಕೆ ತರಲೇಬೇಕು. ಆನೆಯು ಬಣ್ಣ ಬೂದು, ಯಾ ಬಿಳಿ; ಅದನ್ನು "ಕರಿ" ಎಂದು ಕರೆದಿದ್ದಾರೆ—ಶುದ್ಧ ತಪ್ಪು. ಅದನ್ನು ಕೋಶದಿಂದ ತೆಗೆದುಹಾಕಬೇಕು. ಪೂರ್ವವು ದಿಕ್ಕುಗಳಲ್ಲಿ ಶ್ರೇಷ್ಠವಾದ ದಿಕ್ಕು; ಅದನ್ನು "ಮೂಡ ದಿಕ್ಕು" ಎಂದು ಕರೆಯುವುದು ಮೂಢತನ. "ಸುಕುಮಾರ" ಎಂಬ ಶಬ್ದವನ್ನು ಹಲವೆಡೆಗಳಲ್ಲಿ ಉಪಯೋಗಿಸಿರುವರು. ಇದು ತಪ್ಪುಶಬ್ದ. ಯಾಕೆಂದರೆ, "ಸು" ಎಂದರೆ "ಒಳ್ಳೆಯ"; "ಕು" ಎಂದರೆ "ಕೆಟ್ಟ"; "ಮಾರ" ಎಂದರೆ "ಮನ್ಮಥ". ಸುಕುಮಾರ, ಎಂದರೆ—"ಒಳ್ಳೇ ಕೆಟ್ಟ ಮನ್ಮಥ" ಎಂದರ್ಥವಾಗುತ್ತದೆ. ಇನ್ನು,

ಯಾವನೋ ಒಬ್ಬ ಕವಿಯು "ಭೂಮಿಗಾಗಿ ಆಸೆ ಪಡುವುದೇಕೆ" ಎಂಬ ಅರ್ಥದಲ್ಲಿ, "ಅವನಿಗಾಗಿ ಬಾಯಿ ಬಿಡುವುದೇತಕೆ" ಎಂದು ಬರೆದಿರುವನು. ಭೂಮಿಯು ಹೆಂಗುಸು, ಅವಳನ್ನು "ಅವನು" ಎಂದು ಪುಲ್ಲಿಂಗ ಶಬ್ದದಲ್ಲಿ ಹೇಳುವುದು ಸರಿಯಲ್ಲ. "ಅವಳಿಗಾಗಿ ಬಾಯಿ ಬಿಡುವುದೇತಕೆ" ಎಂದು ತಿದ್ದಿದರೆ, ಅರ್ಥಕ್ಕೆ ಬಹಳ ಸರಿಯಾಗುವುದು.

ಅಬ್ದುಲ್ ಭಟ್ಟ:—ಅದ್ಯಚ್ಚರೇ, ಅದಣ್ಣ "ಬೂತಾಯಿಗೆ ಬಾಯಿ ಬಿಡುವುದೇತಕೆ" ಎಂತ ತಿದ್ದೀದ್ರೆ ಹಮ್ಕೂ ನಿಮ್ಕೂ ಎಲ್ಲರಿಕ್ಕೂ ಠೀಕು ಹೋತಾ ನಹೀಕೀ?"

ಅಧ್ಯಕ್ಷರು:—ಭೇಷ್! ಇನ್ನೂ ಸೊಗಸಾದ ಅರ್ಥ! ಜನಭಾಷೆಯಾಗಬೇಕಾದರೆ, ಕನ್ನಡದಲ್ಲಿ ಇಂತಹ ಕ್ರಾಂತಿಗಳಾಗಬೇಕು. ನಿಮ್ಮಲ್ಲಿ ಯಾರೋ ಒಬ್ಬರು, "ಕೌಮುದಿ" ಎಂಬ ಶಬ್ದಕ್ಕೆ "ಮುದಿ ದನ" ಎಂಬ ಅರ್ಥವನ್ನು ಕಲ್ಪಿಸಿದ್ದು, ಅತ್ಯಂತ ಸಮಂಜಸವಾಗಿದೆ.

ಭಟ್ ಮಗ:—my self, my self!

ಅಧ್ಯಕ್ಷರು:—ನಿಮ್ಮಂಥವರು ನಮಗಿನ್ನೂ ಬೇಕು. ಹಿಂದಿನವರನೇಕರು ಶಬ್ದಕೋಶಗಳನ್ನೇನೋ ಬರೆದಿಟ್ಟಿರುವರು ಸರಿ. ಆದರೆ, ಅವರು ತಮ್ಮ ಮನಸ್ಸಿಗೆ ಹಿತವೆಂದು ತೋರಿದ ಅರ್ಥಗಳನ್ನು ಬರೆದಿಟ್ಟಿರುವರೇ ಹೊರತು, ಬೇರೇನೂ ಇಲ್ಲ, ಅವರ ಅರ್ಥಗಳಿಗೆ ತಕ್ಕ ಆಧಾರವಿಲ್ಲ. ನಮ್ಮ ಮನಸ್ಸಿಗೆ ಸರಿಯೆಂದು ತೋರಿದ ಅರ್ಥಗಳನ್ನು ಮಾತ್ರವಲ್ಲ, ತಕ್ಕ ಆಧಾರಗಳನ್ನೂ ಕಲ್ಪಿಸಿಕೊಂಡು, ಹೊಸಹೊಸ ಶಬ್ದಗಳನ್ನು ಉಂಟುಮಾಡಿ, ಹೊಸ "ಡಿಸ್ಕನರಿ"ಯನ್ನು ಜಾರಿಗೆ ತಂದರೆ ಮಾತ್ರ ನಮ್ಮ ಆಂದೋಲನವು ಯಶಸ್ವಿಯಾಗಬಹುದು. ನಮ್ಮಲ್ಲಿಂದು ತುಲನಾತ್ಮಕದೃಷ್ಟಿಯು ಹುಟ್ಟಬೇಕಾಗಿದೆ. ಯಾವುದೇಒಂದು ಶಬ್ದದ ಅರ್ಥವನ್ನು ತಿಳಿಯಬೇಕಾದರೆ, ಬೇರೆ ಬೇರೆ ಭಾಷೆಗಳಲ್ಲಿ ಆ ಶಬ್ದಗಳ ರೂಪ ಹಾಗು ಅರ್ಥಗಳು ಹೇಗಿವೆ ಎಂಬುದನ್ನು ಕಂಡುಕೊಂಡು, ಒಂದು ಹೂವಿನ ಗಿಡಕ್ಕೆ ಇನ್ನೊಂದು ಜಾತಿಯ ಹೂವಿನ ಗಿಡವನ್ನು ಕಶಿಮಾಡುವಂತೆ, ಬೇರೆ ಬೇರೆ ಭಾಷೆಯ ಶಬ್ದಗಳನ್ನು ಸೇರಿಸಿ, ಹೊಸಹೊಸ ಶಬ್ದಗಳ ಕಶಿ ಮಾಡತೊಡಗಿದೆವೆಂದರೆ, ಹಳೆಯ ಕುಂಬು-ಶಬ್ದಗಳೆಲ್ಲಾ

ನಾಶವಾಗಿ, ನಮ್ಮ ಭಾಷೆಯು ಆಧುನಿಕವಾತಾವರಣಕ್ಕೆ ಯೋಗ್ಯವಾಗಿ ಪ್ರಪಂಚದ ಭಾಷೆಯಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಕಾಲ್ಡ ವೆಲ್ ಸಾಹೆಬರಂತಹ ಜರ್ಮನ್ ಸಾಹಿತಿಗಳೂ ತಮ್ಮ ಜರ್ಮನ್ ಭಾಷೆಯನ್ನು ಬಿಟ್ಟು ಕನ್ನಡಕ್ಕೆ ಬಂದರೆಂದರೆ, ನಮ್ಮ ಕನ್ನಡ-ನಾಡು, ನಮ್ಮ ಕನ್ನಡ-ಭಾಷೆ, ನಮ್ಮ ಕನ್ನಡ-ನುಡಿ ಎಷ್ಟೊಂದು ಉಜ್ವಲವಾದು ದೆಂಬುದನ್ನು ನಾನು ಬೇರೆ ಹೇಳಬೇಕೆ? ಕನ್ನಡದ ನಡೆ-ನುಡಿ-ನಾಡುಗಳು ನಮ್ಮ ಅದ್ವಿತೀಯ, ಅಪ್ರತಿಮ, ಅವ್ಯಾಹತ ಸಾಹಸ-ಪರಿಶ್ರಮಗಳ ಮೇಲೆ ಹೊಂದಿಕೊಂಡಿವೆ. ಇನ್ನೂ ಒತ್ತಿ ಒತ್ತಿ (ಮೇಜನ್ನು) ಹೇಳುವು ದಾದರೆ, ನಾವು ನಮ್ಮ ಭಾಷೆಯನ್ನು ಹೊಸದಾರಿಗೆ ತಿರುಗಿಸಿ, ಕನ್ನಡ ಕಾವ್ಯರಮಣಿಯನ್ನು ಬೆರಗಿಸಿ, ಕರಗಿಸಿ, ತಿರುಗಿಸಿ, ಮರುಗಿಸಿ, ಕ್ರಾಂತಿ ಯನ್ನುಂಟುಮಾಡಬೇಕಾದರೆ, ನಾವು ಸಂಪೂರ್ಣ ಪ್ರಗತಿಶೀಲರಾಗಬೇಕು, ನವನವೀನರಾಗಬೇಕು. ಕವಿಗಳಾದ ನಮಗೆ, ಕನ್ನಡದ ಮತ್ತಗಜಗಳಾದ ನಮಗೆ, ಕನ್ನಡದ ಬಾಂದಳದ ಚಂಡಮಾರ್ತಾಂಡರಾದ ನಮಗೆ ಯಾರ ಲಕ್ಷ್ಯವೂ ಇಲ್ಲ, ಯಾರ ಹಂಗೂ ಇಲ್ಲ; ನಾವು ಯಾರಿಗೂ ಬೆದರೆವು, ಬೆಚ್ಚೆವು, ಬಗ್ಗೆವು, ಒಗ್ಗೆವು, ತಗ್ಗೆವು; ಜಗತ್ತೇ ನಮಗೆ ಬಗ್ಗಬೇಕು, ಜಗ್ಗಬೇಕು, ಕುಗ್ಗಬೇಕು! ನಮ್ಮ ಕ್ರಾಂತಿಯ ಕಿಡಿಯು ಇಂದು ಪ್ರಳ ಯಾಗ್ನಿಯಾಗಿದೆ, ಅದು ಲೋಕವನ್ನೇ ದಹಿಸಲಿ, ಅದು ಚಿರಾಯುವಾ ಗಲಿ! ಕ್ರಾಂತಿಯೇ ನಮ್ಮ ಗುರಿ, ಶಾಂತಿಯಲ್ಲ! ಪ್ರಗತಿಯೇ ನಮ್ಮ ಲಕ್ಷಣ, ನಿರ್ಗತಿಯಲ್ಲ! ಇದಕ್ಕಾಗಿ ನಾವು ಸಾಯೋಣ, ರಕ್ತದ ನದಿ ಯನ್ನೇ ಹರಿಸೋಣ! ಕವಿಗಳೇ, ಕನ್ನಡವೀರರೇ, ಎದ್ದೇಳಿ ಎದ್ದೇಳಿ ನಿದ್ದೆ ಗಣ್ಣನು ಬಿಟ್ಟು! ಎದ್ದೇಳಿ ಎದ್ದೇಳಿ ಖಡ್ಗಗಳ ತೊಟ್ಟು!..........ನೀವಿಂದು ನನಗೆ ಕೊಟ್ಟ ಮರ್ಯಾದೆ, ಈ ಪರಿಷತ್ತಿನಲ್ಲಿ ತೋರಿದ ಜಾಣ್ಮೆ, ಕನ್ನ ಡದ ಏಳಿಗೆಗಾಗಿ ಹೆಣಗಾಡಿದ ಸಾಹಸ ಲೋಕಕ್ಕೆ ಆದರ್ಶವಾಗಲಿ! ಈ ನಮ್ಮ ಕೂಟವು ಆಗಾಗ ಕೂಡಿ, ಭಾಷಾಭಿವೃದ್ಧಿಯ ಪ್ರಚಂಡ ಆಂದೋಲನವನ್ನು ಮುಂದೆ ಸಾಗಿಸಲಿ! ನಿಮಗೆಲ್ಲರಿಗೂ ಧನ್ಯವಾದ ಗಳನ್ನು ಅರ್ಪಿಸಿ, ನನ್ನ ಈ ಮಹತ್ತಾದ ಭಾಷಣವನ್ನು ಅಂತ್ಯಗೊಳಿಸು ತ್ತೇನೆ........"

ಹೀಗೆ ಹೇಳಿ ಅಧ್ಯಕ್ಷಮಹಾಶಯರು ತಮ್ಮ ಪ್ರಚಂಡಭಾಷಣವನ್ನು ಮುಗಿಸಿ, ಕರತಾಡನದೊಂದಿಗೆ ಸ್ವಸ್ಥಾನದಲ್ಲಿ "ಪುನರಪಿ ಸ್ಥಾಪಯಾಮಿ" ಮಾಡಿಕೊಳ್ಳತಕ್ಕವರಾಗಿಕೊಂಡರು...........ಕೂಟವು ಬಿರಿಯಿತು......... ಮರುದಿನ ಕನ್ನಡದ ಎಲ್ಲಾ ಪತ್ರಿಕೆಗಳಿಗೂ, ಪಂಡಿತರುಗಳ ಕೂಟದ ಸುದ್ದಿಯು ಹಬ್ಬವೇ ಹಬ್ಬ. ಅಧ್ಯಕ್ಷರ ಭಾಷಣವಂತೂ, ಎರಡು ವಾರಗಳ ವರೆಗೂ ಮುಂದುವರಿಸಿ ಮುಂದುವರಿಸಿ ಮುದ್ರಿತವಾಗುತ್ತಾ ಇತ್ತು. ಅಧ್ಯಕ್ಷರಿಗೆ ಪಾಪ, ಎರಡುಮೂರು ವಾರಗಳ ವರೆಗೆ "ಪೇಪರು"ಗಳನ್ನೋದುವುದಲ್ಲದೆ ಬೇರೇನೂ ಕೆಲಸವಿರಲಿಲ್ಲವಂತೆ!

೯. ಜೋಡು

ತ್ರೇತಾಯುಗದಲ್ಲಿ ಶ್ರೀರಾಮನ ಜೋಡನ್ನು ಅಯೋಧ್ಯೆಯ ರಾಜಸಿಂಹಾಸನದ ಮೇಲೇರಿಸಿ, ಪಾದುಕಾಪಟ್ಟಾಭಿಷೇಕವನ್ನು ನೆರವೇರಿಸಿದ ವಿಷಯವು ರಾಮಾಯಣದ ಪರಿಚಯವಿರುವವರಿಗೆಲ್ಲಾ ತಿಳಿದೇ ಇದೆ. ಆ ಕಾಲದಲ್ಲಿಯೇ ಜೋಡಿಗೆ ಎಷ್ಟೊಂದು ಮರ್ಯಾದೆಯು ಸಲ್ಲುತ್ತಿತ್ತೆಂದು ಬೇರೆ ಹೇಳಬೇಕಾಗಿಲ್ಲ. ಆ ಜೋಡು ಭರತನೊಬ್ಬನ ಹೃದಯದಲ್ಲಿ ಮಾತ್ರವಲ್ಲ, ಅಯೋಧ್ಯಾನಿವಾಸಿಗಳೆಲ್ಲರಲ್ಲಿಯೂ ಭಕ್ತಿ, ಶ್ರದ್ಧೆ, ಪ್ರೇಮ, ಉಲ್ಲಾಸಗಳ ಹೊನಲನ್ನು ಹರಿಸಿತು; ಶ್ರೀರಾಮನು ತನ್ನ ಜೋಡು (ಪತ್ನಿ) ಸಹಿತವಾಗಿ ಮರಳಿ ಅಯೋಧ್ಯೆಗೆ ಬರುವ ತನಕ ಸಾಮ್ರಾಜ್ಯವನ್ನು ನಡೆಸಿತು, ಭರತನ ಪ್ರಾಣವನ್ನು ಉಳಿಸಿತು. ಜೋಡಿಗೆ ಎಷ್ಟೊಂದು ಸತ್ವವಿದೆ ಎಂದರೆ, ಶ್ರೀರಾಮನ ಜೋಡನ್ನು ಭರತನು ಈಚೆಗೆ ಹೊತ್ತುಕೊಂಡು ಬಂದೊಡನೆಯೇ, ಆಚೆಗೆ ರಾವಣನು ಆತನ ಉಳಿದ ಜೋಡನ್ನು ಜಾರಿಸಿಯೇ ಜಾರಿಸಿದ. ಸರಿ, ಜೋಡುಬಿಟ್ಟುಹೋಯಿತು, ಹಾಡು ಮುಗಿದುಹೋಯಿತು! ಹೀಗೆ ತನ್ನ ಕಾಲಿನ ಜೋಡನ್ನು ಬಿಟ್ಟುದರಿಂದಲೇ, ಶ್ರೀರಾಮನಿಗೆ ತನ್ನ ಜೀವನದ ಜೋಡನ್ನು—ತನ್ನ ಶರೀರದ ಅರ್ಧಾಂಗವನ್ನು ಕಳೆದುಕೊಳ್ಳಬೇಕಾಯಿತು! ಜೋಡನ್ನು ಪುನಃ ಪಡೆಯುವುದಕ್ಕಾಗಿ ಕಾಡುಕಾಡು ಅಲೆಯಬೇಕಾಯಿತು! ಕೊನೆಗೆ ಮಂಗಗಳ "ದೋಸ್ತಿ" ಕೂಡ ಮಾಡಬೇಕಾಗಿ ಬಂತು! ಸುಗ್ರೀವನ ಜೋಡನ್ನು "ಜಬರದಸ್ತಿ"ಯಾಗಿ ಎಳೆದೊಯ್ದ ಜೋಡಿಲ್ಲದ ವೀರನಾದ ವಾಲಿಯನ್ನು ಕೊಂದು, ಅಪಮಾನಕ್ಕೀಡಾಗಬೇಕಾಯಿತು!

ತ್ರೇತಾಯುಗದ ಮಾತು ಕಲಿಯುಗಕ್ಕೆ ತಂಗುಳವಾಗಿ ಕಾಣಬಹುದು. ಕಲಿಯುಗದಲ್ಲಿಯೂ ಜೋಡಿನ ಮಹತ್ವವೇನೂ ಕಡಮೆಯಾಗಲಿಲ್ಲ. ಜೋಡಿಲ್ಲದವರು ಸಿಗುವುದೇ ಅಪರೂಪ. ಜೋಡು ಹುಡುಕುವವರ ಸಂಖ್ಯೆಗಂತೂ ಲೆಕ್ಕವೇ ಇಲ್ಲ. ಸರಿಯಾದ ಜೋಡು ದೊರೆಯಲಿಲ್ಲವೆಂದಾದರೆ, ಮುಂದಿನ ದಾರಿಯೇ ಸಾಗುವುದು ಕಷ್ಟ. ಜೋಡು ಇಡೀ ಶರೀರದ ಭಾರವನ್ನು ಆಧರಿಸುವ ಅಸ್ತಿವಾರ. ಜೀವ

ನದ ಸುಖದುಃಖಗಳು ಜೋಡನ್ನೇ ಹೊಂದಿಕೊಂಡಿವೆಯೆಂದರೆ, ಹೆಚ್ಚಿನ ಮಾತಲ್ಲ. ಕೆಲವರಿಗೆ ಎಷ್ಟು ಜೋಡಿದ್ದರೂ ತೃಪ್ತಿಯೇ ಇಲ್ಲ; ಒಂದು ಜೋಡು ಹಳೆಯದಾದೊಡನೆ ಇನ್ನೊಂದು ಜೋಡು ಬೇಕೇಬೇಕು. ಜೋಡುಕಳೆದುಕೊಂಡು ಬದುಕುವುದಕ್ಕಿಂತ ಮಾನಕಳೆದುಕೊಂಡು ಬದುಕುವುದು ಒಳ್ಳೆಯದಂತೆ. "ಪ್ರಾಣಕ್ಕಿಂತಲೂ ಮಾನ ಮೇಲು, ಮಾನಕ್ಕಿಂತಲೂ ಜೋಡು ಮೇಲು" ಎಂದು ಬೇರೆ ಹೇಳಬೇಕೆ?

ಈ ರೀತಿಯಲ್ಲಿ, ಜೋಡು ಜೀವನದ ಸಂಗಾತಿ, ಜೀವನದ ಜೀವಾಳ. ಆದುದರಿಂದಲೇ ದೇವಾಲಯದೊಳಗೆ ಹೋದಾಗಲೂ, ಜನರ ತಲೆಯಲ್ಲಿ ಜೋಡೇ ಇರುವುದು! ಜೋಡನ್ನು ಹೊರಗೆ ಕಳಚಿಟ್ಟು, ದೇವಾಲಯದೊಳಗೆ ಹೋಗುವುದು ಪದ್ಧತಿ. ಆದರೆ, ಕಾಲಿನಿಂದ ಕಳಚಿದೊಡನೆಯೇ ಅದು ತಲೆಗೆ ಹತ್ತಿಬಿಡುವುದು! ದೇವಸ್ಥಾನದೊಳಗೆ ಹೋಗಿ, ದೇವರ ಮುಂದೆ ನಿಂತು ಎರಡೂ ಕೈಗಳನ್ನು ಜೋಡಿಸಿ, ಜೋಡು ಹಣ್ಣುಕಾಯಿ ಮಾಡಿಸಿ ಹೊರಗೆ ಬರುವ ತನಕವೂ, ಭಕ್ತರೆಲ್ಲರಿಗೂ ತಲೆಯಲ್ಲಿ ತಮ್ಮ ತಮ್ಮ ಜೋಡುಗಳ ನೆನಪೇ ಹೊರತು, ದೇವರ ನೆನಪು ಸೊನ್ನೆ. ಯಾಕೆಂದರೆ, ಶುನಕರಾಯರಿಗೆ ಜೋಡಿನ ಮೇಲೆ ಬಹಳ "ದೋಸ್ತಿ." ಅವರು ಎಲ್ಲಿ ಅದಕ್ಕೆ ಪ್ರೀತಿಯಿಂದ ಮುತ್ತು ಕೊಟ್ಟುಬಿಡುತ್ತಾರೋ ಎಂದು ಎಲ್ಲರಿಗೂ ಚಿಂತೆ. ದೇವರ ಮುಂದೆ ಕೈಜೋಡಿಸಿ, ಕಣ್ಣುಮುಚ್ಚಿ ನಿಂತುಕೊಂಡು ಧ್ಯಾನಮಗ್ನರಾಗುವಾಗ, ಫಕ್ಕನೆ ತಮ್ಮ ಜೋಡನ್ನು ಕಚ್ಚಿಕೊಂಡು ಓಡುತ್ತಿರುವ ನಾಯಿ-ರಾಯರ ಚಿತ್ರವು ಎದುರಿಗೆ ಬಂತೆಂದರೆ ಸರಿ—ದೇವರ ಧ್ಯಾನವೆಲ್ಲಾ ಗುಡ್ಡೇ ತುದಿಯಲ್ಲಿ! ಕೆಲವರು ದೇವರ ಮುಂದೆ ನಿಂತು—"ಸ್ವಾಮಿ ದೇವರೇ, ನಾನು ನಿನ್ನ ದಿವ್ಯ ಸನ್ನಿಧಿಯಿಂದ ಹೊರಬೀಳುವ ತನಕ ನನ್ನ ಜೋಡು ಸುರಕ್ಷಿತವಾಗಿ ಉಳಿದುಕೊಂಡಿದ್ದರೆ, ನಿನಗೆ ಜೋಡು-ಕಾಣಿಕೆ (ಜೋಡು ಹಣ್ಣುಕಾಯಿ) ಕೊಡುತ್ತೇನೆ" ಎಂದು ಪ್ರಾರ್ಥನೆಮಾಡಿ, ಹರಕೆ ಹೊತ್ತುಕೊಳ್ಳುವವರು ಇದ್ದರೂ ಇರಬಹುದು! ಈ ಹರಕೆಯ ಅರ್ಥವೇನೆಂದರೆ, ಭಕ್ತರೆಲ್ಲರ ಜೋಡನ್ನು ಕಾಯುವ ಕೆಲಸ ದೇವರಿಗೆ! ಯಾಕೆಂದರೆ, ಭಕ್ತರೆಲ್ಲರೂ ದೇವಸ್ಥಾನದಲ್ಲಿ ಜೋಡು ಕಾಣೆಯಾಗಲಾರದೆಂದು ದೇವರ ಮೇಲೆ ವಿಶ್ವಾಸವನ್ನಿಟ್ಟೇ

ಒಳಗೆ ಪ್ರವೇಶಿಸುವರು. ಈ ಸಂದರ್ಭದಲ್ಲಿ ಒಂದೊಂದು ಸಲ ದೇವರೂ ವಿಶ್ವಾಸಘಾತುಕನಾಗಬೇಕಾಗುವುದು: ದೇವರ ಕಣ್ಣುಗಳನ್ನು ಕೂಡ ತಪ್ಪಿಸಿ, ನಾಯಿರಾಯರು ಹೊಂಚುಹಾಕಿ ಯಾವುದಾದರೊಂದು ಜೋಡಿಗೆ "ಖಾರ" ಕೊಟ್ಟೇಕೊಡುತ್ತಾರೆ. ಅಥವಾ ಭಕ್ತರಲ್ಲಿಯೇ ಕೆಲವರು ಅಪ್ಪಿ-ತಪ್ಪಿ, ಅಥವಾ ಮೆಚ್ಚಿ-ಒಪ್ಪಿ, ತಮ್ಮ ಜೋಡಿನ ಬದಲಿಗೆ ಇನ್ನೊಬ್ಬರ ಜೋಡನ್ನು ಸಿಕ್ಕಿಸಿಕೊಂಡು ಹೋಗಿಬಿಡುತ್ತಾರೆ. ಭಕ್ತ ಮಹಾಶಯರಲ್ಲಿ ಕೆಲವರು, ಜೋಡಿಲ್ಲದೆ ಹಾಗೆಯೇ ದೇವಾಲಯಕ್ಕೆ ಬರುವುದೂ ಇದೆ. ಆದರೆ, ಹೋಗುವ ಗಡಿಬಿಡಿಯಲ್ಲಿ, ಕಾಲಿಗೊಂದೊಂದರಂತೆ ಒಳ್ಳೆ ಜೋಡುಗಳನ್ನಾರಿಸಿ ಸಿಕ್ಕಿಸಿಕೊಂಡು ಹೋಗುವ ಕ್ರಮವೂ ಇದೆ! ಹೀಗೆ ಜೋಡು ಕಾಣೆಯಾಯಿತೆಂದರೆ, ಜೋಡನ್ನು ಕಳೆದುಕೊಂಡ ಭಕ್ತರ ಗೋಳೇ ಗೋಳು; ದೇವರ ಮೇಲೆ ಬೈಗಳಿನ ಸುರಿಮಳೆ! "ಏನಯ್ಯಾ! ದೇವರಿಗೆ ಕಣ್ಣಿಲ್ಲವೆ? ದೇವರೆದುರಿನಲ್ಲಿಯೂ ಕಳವಾಗುವುದೆಂದರೆ, ಲೋಕವು ಉರುಟಾಗಿಹೋಯಿತೆ? ಜೋಡು ಹಣ್ಣುಕಾಯಿಗಳ ಹರಕೆ ಹೊತ್ತರೂ ದೇವರಿಗೆ ಕರುಣೆಯಿಲ್ಲವೆಂದಾದರೆ, ಇಂಥಾ ದೇವರು ಊರಲ್ಲಿದ್ದರೇನು,........ರೇನು!"...........ಪಾಪ, ದೇವರು ಈ ಬೈಗಳುಗಳನ್ನೆಲ್ಲಾ ಹೊತ್ತುಕೊಂಡು, ಹರಕೆಯ ಸಾಲವನ್ನು ತೀರಿಸುವುದಕ್ಕಾಗಿ ಕಾಣೆಯಾದ ಜೋಡಿನ "ತಲಾಶಿ"ಗೆ ಹೊರಡಲೇಬೇಕು ಮರ್ಯಾದೆ ಬೇಕಿದ್ದರೆ! ಇಲ್ಲವಾದರೆ ಹಣ್ಣುಕಾಯಿ ನಾಮ! ಒಂದು ದಿನ ಒಬ್ಬ ಮಹಾಶಯರು, ನಾಯಿಯು ಜೋಡು ತಿಂದುದಕ್ಕಾಗಿ ನಾಯಿಗೆ "ಎಕ್ಕಡ-ಪೂಜೆ" ಮಾಡುತ್ತಾ ಬೈಯುತ್ತಿದ್ದರು—"ಮಂಗ, ಕತ್ತೆ" ಎಂದು! ಪುಣ್ಯಾತ್ಮರಿಗೆ ಸಿಟ್ಟಿನ ಆವೇಶದಲ್ಲಿ, ನಾಯಿಯು ಮಂಗ ಅಥವಾ ಕತ್ತೆಯಾಗುವುದಿಲ್ಲವೆಂಬ ಆಲೋಚನೆಯು ಕೂಡ ಹೊಳೆಯಲಿಲ್ಲವೋ ಏನೋ! ಮಂಗ, ಕತ್ತೆಗಳು ಚರ್ಮವನ್ನು ತಿನ್ನುವುದಿಲ್ಲವೆಂಬುದೂ ಬಹುಶಃ ನೆನಪಿಗೆ ಬರಲಿಲ್ಲ!

ದೇವರಿಗೆ ಜೋಡು ಹಣ್ಣುಕಾಯಿ ಎಂಬುದರ ಅರ್ಥ—ದೇವರಿಗೆಂದಲ್ಲ, ದೇವರ ಪ್ರತಿನಿಧಿ ಅಥವಾ "ರಿಜಿಸ್ಟರ್ಡ್ ಏಜಂಟ"ರಾದ ಪೂಜೆ ಭಟ್ಟರಿಗೆ! ದೇವರ ಮಾನಾಪಮಾನಗಳೆಲ್ಲಾ ಇರುವುದು ಭಟ್ಟರ

ಕೈಯಲ್ಲಿ. ಅವರು ಏನು ಮಾಡಿದರೂ, ದೇವರು ಪಾಪ, ಕಣ್ಣು ಪಿಳಿ ಪಿಳಿ ಮಾಡಿ ನೋಡಿಯೇ ಕುಳಿತಿರಬೇಕು! ಸಿಕ್ಕಿದ ಹಣ್ಣುಕಾಯಿ, ದಕ್ಷಿಣೆಗಳನ್ನೆಲ್ಲಾ ಭಟ್ಟರು "ಅಸ್ತ್ರಾಯಾ ಫಟ್" ಮಾಡಿ ದೇವರಿಗೊಂದು ಉದ್ದದ ನಾಮ ಎಳೆದುಬಿಡುವರು. ದೇವರಿಗೆ "ಒಂದೇ ನಾಮವು ಸಾಲದೇ.......?" ಮತ್ತೆಷ್ಟು ಬೇಕು?

ಜೋಡು-ಮರ್ಯಾದೆಗೆ ದೇವಸ್ಥಾನದಲ್ಲಿ ಮಾತ್ರವಲ್ಲ, ಸಮಾಜದಲ್ಲಿಯೂ ಬೆಲೆ ಹೆಚ್ಚು. ಜೋಡು-ಮರ್ಯಾದೆ ಇಲ್ಲದೆ, ಮದುವೆ-ಮುಂಜಿಗಳು ನಡೆಯಲಾರವು; ಊರಿನ ಗೌಡರು ದಿಬ್ಬಣಕ್ಕೆ ಹೊರಡಬೇಕಾದರೆ, ಊರ ಪಂಚಾಯತಿಗೆಗೆ ಚಿತ್ತೈಸಬೇಕಾದರೆ, ಜೋಡು ಸೀಯಾಳ, ಜೋಡಡಕೆ, ಜೋಡು-ಎಲೆಸೂಡಿಗಳ ಮರ್ಯಾದೆಯು ಸಲ್ಲಲೇ ಬೇಕು. ಜೋಡು-ಮರ್ಯಾದೆಗೆ ಬಗ್ಗದವನು ಯಾರೂ ಇಲ್ಲ— ".......ಯೋ, ಅಥವಾ ಜೋಡು ಮರ್ಯಾದೆ ಬೇಕೋ?" ಎಂದು ಕೇಳಿದರೆ ಸರಿ. ಅದರಲ್ಲಿಯೂ, ಹಳೆ ಎಕ್ಕಡವಾದರೆ, ಅದಕ್ಕಿನ್ನೂ ಹೆಚ್ಚು ಮಹತ್ವ.

ಎಕ್ಕವಡವೆಂಬುದು ಜೋಡಿನ ಇನ್ನೊಂದು ಹೆಸರು. ಅದು ಪಾದಗಳನ್ನು ರಕ್ಷಿಸುವ ಕಾರಣ, "ಪಾದರಕ್ಷೆ, ಪಾದತ್ರಾಣ" ಎಂಬ ಹೆಸರುಗಳನ್ನು ಪಡೆದಿದೆ. ಜೀವನದ ಕಂಟಕಗಳನ್ನು ದೂರಗೊಳಿಸುವ ಸಾಧನವಾದುದರಿಂದ 'ಕಂಟಕಾರಿ" ಎಂದು ಪ್ರಖ್ಯಾತವಾಗಿದೆ. ಪಾದು, ಪಾದುಕೆ, ಹಾವುಗೆ, ಪಾದಪೀಠ, ಪಾದರಕ್ಕೆ ಎಂದು ಹಲವು ಉಪನಾಮಗಳನ್ನು ಪಡೆದಿದೆ. ಹಿಂದಿನ ಕಾಲದಲ್ಲಿ "ಪಾದುಕಾಸಿದ್ಧಿ"ಯನ್ನು ಪಡೆದ ಕೆಲವು ಯೋಗಿಗಳೂ ಇದ್ದರಂತೆ. ಈಗಿನ ಕಾಲದಲ್ಲಿ ಪಾದುಕಾ-ಸಿದ್ಧಿಯೋಗವು ಲಭಿಸುತ್ತಿದ್ದರೆ "ಅಣು-ಬಾಂಬಿ"ನ ಶಕ್ತಿಯನ್ನು ಮೀರಬಹುದಿತ್ತು! ಆದರೆ "ಪಾದುಕಾ-ಸಿದ್ಧಿಯಿದ್ದರೂ, ನಾರೋದು ತಪ್ಪೀತೆ?" ಜೋಡಿನ ಹೆಸರುಗಳು ಇಷ್ಟಕ್ಕೇ ಮುಗಿಯಲಿಲ್ಲ: ಕೆರ, ಕೆರವು, ಕೆರಹು, ಕೆರ್ಪು, ಚೆರುಪ್ಪು, ಚೆರಿಪ್ಪು, ಚೆರ್ಪು, ಚೆಪ್ಪು, ಮೆಟ್ಟು—ಇವೆಲ್ಲಾ ಅದರ ನಾಮಮಾಲೆಯ ಮಣಿಗಳಾಗಿವೆ. "ಅಟ್ಟೆಯು ಕೆರವಂ ಮೆಟ್ಟಲು ಅಶ್ವವೇರಿದಂತಾಯ್ತು" ಎಂಬ ಕಾವ್ಯನುಡಿಯು "ಅಟ್ಟೆ" ಎಂಬ ಅದರ ಇನ್ನೊಂದು ಹೆಸರನ್ನು

ಸೂಚಿಸುತ್ತದೆ. ಇಂಗ್ಲಿಷರು ಅದನ್ನು "ಬೂಟ್ಸ್, ಶೂಸ್, ಸ್ಲಿಪ್ಪರ್ಸ್, ಸೇಂಡಲ್ಸ್" ಎನ್ನುತ್ತಾರೆ. ಇಂಗ್ಲಿಷ್-ಜೋಡುಗಳಿಗೆ ಯಾವಾಗಲೂ ಬೆಲೆ ಹೆಚ್ಚು, ಮರ್ಯಾದೆ ಹೆಚ್ಚು. ಅದೇಕೆಂದರೆ, ಇಂಗ್ಲಿಷ್-ಚರ್ಮವು ಉತ್ತಮ ಚರ್ಮವಂತೆ. ಜೋಡುಗಳಲ್ಲಿಯೂ "ಲೇಡೀಸ್, ಜೆಂಟ್ಸ್" ಎಂಬ ಭೇದ ಗಳಿವೆ. ಆದರೆ, ಶುನಕರಾಯರಿಗೆ ಇವೆಲ್ಲವುಗಳ ಮೇಲೆ ಸಮದೃಷ್ಟಿ.

"ಜೋಡು ಇದ್ದರೆ ನಾಡು ತಿರುಗಬಹುದು" ಎಂಬುದು ಹಳಬರ ಒಂದು ಗಾದೆ. ಆದರೆ, ನಾಡು ತಿರುಗುವಾಗ ಜೋಡು ಇದ್ದರೆ, ಸ್ವಲ್ಪ ಉಪದ್ರವವಾಗುವುದೂ ಉಂಟು. ಜೋಡು ಕೈಬಿಟ್ಟುಹೋಗದಂತೆ ಕಾದು ಕೊಳ್ಳುವುದು ದೊಡ್ಡ ಕಠಿಣವಾದ ಕೆಲಸ. ಅದು "ನೀರು ಕಂಡಲ್ಲಿ ಹಾರುವ ಕುದುರೆ"ಯಂತೆ; ಆದುದರಿಂದ ಹೊಳೆ-ಹಳ್ಳಗಳು ಸಿಕ್ಕಿದಾಗ ಅದನ್ನು ಕೈಯಲ್ಲಿ ಹೊರಲೇಬೇಕು. ಕೈಯಲ್ಲಿ ಎಕ್ಕವಡ ಹಿಡಿದೊಡ ನೆಯೇ, ನೋಡುವವರಿಗೆ ಸ್ವಲ್ಪ ಅನುಮಾನವಾಗುವುದು. ಬಸ್ಸಿಗೆ ಹತ್ತು ವುದಕ್ಕಾಗಿ ಓಡುವಾಗ ಕಾಲಿನಲ್ಲಿ ಕೆರವಿದ್ದರೆ ತೊಡಕಾಗುವುದೆಂದು, ಕಳಚಿ ಕೈಯಲ್ಲಿ ಹಿಡಿದುಕೊಂಡು ಓಡಿದರೆ, "ಸರಿ, ಯಾರಿಗೋ ಈ ಸಲ ಜೋಡು-ಮರ್ಯಾದೆಯಾಗುತ್ತದೆ" ಎಂದು ಎಲ್ಲರೂ ಕುತೂಹಲದೃಷ್ಟಿ ಯಿಂದ ಆ ಆಸಾಮಿಯ ಕಡೆಗೇ ನೋಡತೊಡಗುವರು. ಒಂದೊಂದು ಸಲ ದಾರಿನಡೆಯುವಾಗ ಜೋಡಿನ ಬಾರವು ತುಂಡಾಗಿಬಿಟ್ಟರೆ ಜೋಡೇ ಭಾರವಾಗುವುದು, ಮುಂದೆ ನಡೆಯಲು ಕಾಲೇ ಬಾರದಾಗು ವುದು. ಉಳಿದ ಒಂದು ಎಕ್ಕವಡನನ್ನು ಕಾಲಿನಲ್ಲಿಟ್ಟುಕೊಳ್ಳುವುದಕ್ಕೂ ಅಲ್ಲ, ಕೈಯಲ್ಲಿ ಹಿಡಿಯುವುದಕ್ಕೂ ಅಲ್ಲ; ಒಂದು ಕೆರವನ್ನು ಕೈಯಲ್ಲಿ ಹಿಡಿದುಕೊಂಡರೂ ನಗುವರು, ಕಾಲಿಗೆ ಹಾಕಿಕೊಂಡರೂ ನಗುವರು. ಕೊನೆಗೆ ಶಾಲು-ರುಮಾಲುಗಳಿಂದ ಅಲಂಕರಿಸಿ ಬಗಲೊಳಗಿಟ್ಟುಕೊಂಡು ನಡೆಯಬೇಕಾಗಿ ಬರುವುದು. ಅದೇ ರೀತಿಯ ಗಂಟು ಕಂಕುಳಲ್ಲಿ ಬೇರೊಂದಿದ್ದರೆ, ಗಡಿಬಿಡಿಯಲ್ಲಿ ಅದಲುಬದಲಾಗಿ ಅನರ್ಥವಾಗುವ ಸಂಭವವೂ ಉಂಟು! ಆದುದರಿಂದ ಈ ಎಲ್ಲಾ "ಫಜೀತಿ"ಗಳಿಗೆ ಸಿಲುಕಿ ತೊಂದರೆಪಡುವುದರ ಬದಲು, ಜೋಡಿದ್ದ ವ್ಯಕ್ತಿಗಳು ತಮ್ಮೊಂದಿಗೆ ಸಮ ಗಾರನನ್ನೂ ಕರೆದೊಯ್ಯುವುದು ಎಷ್ಟೋ ಲೇಸು.

ಸಮಗಾರನೆಂದರೆ ಜೋಡಿನ ಸೃಷ್ಟಿಕರ್ತ. ಮೆಟ್ಟುಕಟ್ಟುವುದು ಮತ್ತು ಹೊಲಿಯುವುದು, ಹೀನವೃತ್ತಿ ಎಂದು ಕೆಲವರ ಅಭಿಪ್ರಾಯ. ಆದರೆ, ಮಹಾ ಮಹಾ ಮಾನವಂತರನ್ನು ಕೂಡ ಸಮಗಾರನು ಕುಳಿತಲ್ಲಿಯೇ ತನ್ನ ಬಳಿಗೆ ಬರಮಾಡುವನು. ಮೆಟ್ಟಿನ ಬಾರವು ತುಂಡಾದಾಗ, ಕಾಲಿಗೆ ರಕ್ಷೆಯಿಲ್ಲದೆ ಕಲ್ಲು-ಮುಳ್ಳುಗಳು ತಗಲಿದಾಗ, ಮೆಟ್ಟಿನ ಎಡೆಯಲ್ಲಿ ಕಲ್ಲಿನ ಹರಳು ತೂರಿಕೊಂಡಾಗ ಸಮಗಾರನ ನೆನಪು ಮಾಡಿಕೊಳ್ಳದವರಾರು? "ಮೆಟ್ಟಿನೊಳಗಿನ ಕಲ್ಲು ನೆಂಟರೊಳಗಿನ ಸಾಲಕ್ಕೆ ಸರಿ" ಎಂದು ಬಲ್ಲವರೆನ್ನುವುದು ಸುಳ್ಳಲ್ಲ. ಜನರನ್ನು ಸುಗಮವಾಗಿ, ಸುಖವಾಗಿ ನಡೆಯಿಸುವ ಕೆಲಸವು ಸಮಗಾರನದಾದುದರಿಂದ, ಆತನನ್ನು ಜನರ ಸಂಚಾಲಕನೆನ್ನಬಹುದು. ಅವನು ಹಳ್ಳಿಯ ಜನರ ಜೀವಾಳ, ಶಹರ ನಿವಾಸಿಗಳ ಸರ್ವಸ್ವ. ಸಮಗಾರನಿಗೆ ಸಮನಾದವನು ಸಮಗಾರನೇ ಸರಿ. ಅವನು ಜೋಡು-ಮಾಡುವುದರಲ್ಲಿ ಜೋಡಿಲ್ಲದವನು. ಊರಿಗೇ ಜೋಡನ್ನೊದಗಿಸಿಕೊಡುವುದು ಅವನ ಕೆಲಸವಾಗಿದ್ದರೂ, ಅವನು ಮಾತ್ರ ಜೋಡನ್ನು ಉಪಯೋಗಿಸದಿರುವುದು ಆಶ್ಚರ್ಯ! ಇದೀಗ ಆದರ್ಶ-ನಿಸ್ವಾರ್ಥ! ಅಕ್ಕಸಾಲಿಗನು ಹಗಲೂರಾತ್ರೆ ಚಿನ್ನವನ್ನು ತಟ್ಟುತ್ತಿದ್ದರೂ, ಅವನ ಮೈಯಲ್ಲಿ ಚಿನ್ನದ ಚೂರೂ ಇರುವುದಿಲ್ಲ; ಅಗಸನು ಊರನ್ನೇ ಮಡಿ ಮಾಡುತ್ತಾನಾದರೂ, ಆತನ ಬಟ್ಟೆಯಲ್ಲಿ ಊರಿನ ಕೊಳೆಯೆಲ್ಲಾ ಸೇರಿರುವುದು; ಕೆಲಸಿಗಂತೂ ತನ್ನ ಗಡ್ಡವನ್ನು ತೆಗೆದುಕೊಳ್ಳಲು ಸಮಯಕ್ಕೇ ಕೊರತೆ; ಅಮಲು ಪದಾರ್ಥಗಳನ್ನು ಮಾರುವವನು ಅಮಲು ಹಾಕಿಕೊಳ್ಳುವುದು ಅಪರೂಪ. ಬಹುಶಃ ಇವರೆಲ್ಲಾ— "ಬೇಲಿ ಹೊಲವನ್ನೇ ಮೇದರೆ ಹೇಗಾದೀತು?" ಎಂಬ ಗಾದೆಯಿಂದ ತುಂಬಾ ಪಾಠವನ್ನು ಕಲಿತಿರಬೇಕು. ಆದುದರಿಂದ ಸಮಗಾರನು ಜೋಡನ್ನು ಉಪಯೋಗಿಸದಿರುವುದು ನ್ಯಾಯಕ್ಕೆ ಸಮವೇ ಆಗಿದೆ.

ಸಮಗಾರನು ಮೆಟ್ಟು ಹಾಕಿಕೊಳ್ಳದಿರುವುದಕ್ಕೆ ಇನ್ನೂ ಒಂದು ಕಾರಣವಿದೆ. ಅವನಿಗೆ ನಡೆಯುವ ಕೆಲಸವೇ ಇಲ್ಲ, ನಡೆಯಲು ಸಮಯವೂ ಇಲ್ಲ. ಆದುದರಿಂದ ಎಲ್ಲರೂ ಅವನ ಬಳಿಗೇ ಹೋಗಿ ಕೈಕಟ್ಟಿ ನಿಲ್ಲುವರು. ನಾವು ಹೊಸಮೆಟ್ಟುಗಳನ್ನು ಕೊಂಡುಕೊಳ್ಳುವಾಗ ಅವನು

ಬಹಳ "ಶಿಫಾರಸು" ಮಾಡುವನು, ಮೆಟ್ಟಿನ ಆಣೆಕೊಟ್ಟು, ಬೇಕಾದಷ್ಟು ವರ್ಷ "ಗ್ಯಾರಂಟಿ" ಕೊಡುವನು. ಆದರೆ ಕೆಲವೇ ದಿನಗಳಲ್ಲಿ ಮೆಟ್ಟಿನ ಬಾರ ತುಂಡಾಗಿ, ಇಲ್ಲವೆ ಅದರ ಚಕ್ಕಳವೆದ್ದು ಅಥವಾ ಹೊಲಿಗೆಯು ಬಿಚ್ಚಿ, ಪುನಃ ಆ ಪುಣ್ಯಾತ್ಮನ ಸನ್ನಿಧಿಗೆ ಓಡಬೇಕಾಗುವುದು. ಆ ಸಂದರ್ಭ ದಲ್ಲಿಯೂ ಆತನು ಸೋಲುವಂತಿಲ್ಲ. ರಂಪಿಗೆಯಂತಹ ನಾಲಗೆಯನ್ನು ತಿರುಗಿಸಿ, "ಏನು ಸ್ವಾಮಿ, ನೀವು ಆಗಾಗ ಬಾರದಿದ್ದರೆ ನಮ್ಮಂಥವರ ಹೊಟ್ಟೆತುಂಬುವುದು ಹೇಗೆ?" ಎಂದು ನಮ್ಮನ್ನು ಸಮಾಧಾನ ಮಾಡಿ ಬಿಡುವನು. "ಹಲವು ಸಮಗಾರರು ಕೂಡಿ ತೊಗಲಿನ ಹದವನ್ನೇ ಕೆಡಿಸಿಬಿಡುವರ"ಂತೆ. ಆದುದರಿಂದ ಜೋಡು-ರಿಪೇರಿಗೆ ಒಬ್ಬ ಸಮಗಾರ ನನ್ನೇ ಒಲಿಸಿಕೊಳ್ಳುವುದು ಲೇಸಲ್ಲವೆ? ಆದರೆ, ಒಬ್ಬೊಬ್ಬ ಸಮಗಾರನು ಕಾಲಿನ ಅಳತೆಗೆ ಕೆರವನ್ನು ಕೊಯ್ಯುವುದರ ಬದಲು, ಕೆರದ ಅಳತೆಗೇ ಕಾಲನ್ನು ಕೊಯ್ದುಬಿಡುತ್ತಾನೆ! ಬಹುಶಃ ಈ ಅನುಭವವನ್ನು ಪಡೆದ ಮಹನೀಯರೇ "ಕೆರದ ಅಳತೆಗೆ ಕಾಲು ಕೊಯ್ಸಿದ ಹಾಗೆ" ಎಂಬ ಗಾದೆಯನ್ನು ಮಾಡಿರಲೂಬಹುದು.

ಮೆಟ್ಟುಹೊಲಿಯುವ ವೃತ್ತಿಯು ಪೂರ್ವಕಾಲದಲ್ಲಿ ದೇಶದ ಸಂಪತ್ತಾಗಿದ್ದಿತಂತೆ. ಪೂರ್ವಕಾಲವೆಂದರೆ—ಮಾಂಧಾತರಾಯನ ಯುಗ ವಲ್ಲ—ಬ್ರಿಟಿಷ್ ಸರಕಾರವು ನಮ್ಮ ದೇಶದ ಪಾಲನೆ-ಪೋಷಣೆಯ ಭಾರ ವನ್ನು ಹೊರುವುದಕ್ಕಿಂತ ಮೊದಲಿನ ಕಾಲ. ಬ್ರಿಟಿಷ್ ಸರಕಾರವು ಸಮ ಗಾರರ ಮೇಲೂ ತನ್ನ "ಸಮತಾವಾದ"ದ ನೀತಿಯನ್ನು ಹೊರಿಸಿ, ಅವರ ಅನ್ನಕ್ಕೆ "ಚಕ್ಕರ್" ಕೊಟ್ಟಿತು. ಎಷ್ಟೋ ಸಮಗಾರರು ತಮ್ಮ "ಹೀನ ವೃತ್ತಿ"ಯನ್ನು ಬಿಟ್ಟು, "ಉತ್ತಮವೃತ್ತಿ"ಯು ಸಿಗದೆ, ತ್ರಿಶಂಕು-ಸ್ವರ್ಗ ವನ್ನೇರಿದರು!

ಸರಕಾರೀ "ಆಫೀಸು"ಗಳೊಳಗೆ ಹೋಗುವಾಗ ಜೋಡು ಹಾಕಿ ಕೊಂಡು ಹೋಗಬಾರದಂತೆ; ಆದರೆ, "ಬೂಟ್ಸ"ನ್ನು ತಲೆಯ ಮೇಲೆ ಬೇಕಾದರೂ ಹೊತ್ತುಕೊಂಡು ಹೋಗಬಹುದು—ಇದು ಇಂಗ್ಲಿಷ್ ಸರಕಾರದ ಶಿಷ್ಟಾಚಾರದ ಒಂದು ಕಾನೂನು! ಹಿಂದೂ-ಚರ್ಮಕ್ಕೂ, ಇಂಗ್ಲಿಷ್-ಚರ್ಮಕ್ಕೂ ಅಷ್ಟೊಂದು ಅಭ್ಯಂತರವಿದೆ! ಸತ್ತು ಒಣಗಿದ

ಚರ್ಮಗಳೊಳಗೂ ಇಷ್ಟೊಂದು ಭೇದವನ್ನು ಕಾನೂನಿನ ಮೂಲಕ ಪ್ರಕಟಗೊಳಿಸಿದ ಜನಾಂಗವನ್ನು ಸೃಷ್ಟಿಮಾಡಿದ ದೇವರಿಗೆ ನಿಜವಾಗಿಯೂ ಜೋಡಿಲ್ಲವೆನ್ನಬೇಕು! ಆದರೆ, ಸಮಗಾರನು ಹಿಂದೂ-ಇಂಗ್ಲಿಷ್ ಚರ್ಮಗಳೆರಡನ್ನೂ ಸಮವಾಗಿ ಸೇರಿಸಿ, ಐಕ್ಯತೆಯನ್ನು ಸಾಧಿಸಿಬಿಡುತ್ತಾನೆ. ಪರಸ್ಪರ ವೈರಿಗಳಾಗಿದ್ದು ಬೇರೆ ಬೇರೆ ವರ್ಣದವರಾಗಿದ್ದರೂ, ಬೇಕಾದಷ್ಟು ಪೆಟ್ಟುತಿಂದು, ಕಷ್ಟಗಳನ್ನನುಭವಿಸಿ ಹದಬಂದರೆ, ಕೊನೆಗೆ ಹೇಗೆ ಒಟ್ಟಾಗುತ್ತಾರೆಂಬುದನ್ನು ಸಮತಾವಾದಿಯಾದ ಸಮಗಾರನು ಜೋಡಿನ ಮೂಲಕ ಲೋಕಕ್ಕೇ ತೋರಿಸಿಕೊಡುವನು. ಹದಬಾರದ ಜೋಡುಗಳನ್ನು ಅವನು ಜನರ ಕಾಲುಗಳಿಂದ ತುಳಿಸಿ, ಮೆತ್ತಗೆ ಮಾಡಿಸುವನು. ಕೆಲವು ಜೋಡುಗಳು ಎಷ್ಟು ತುಳಿದರೂ, ಮಾತು ಕೇಳುವಂತಿಲ್ಲ. ಒಂದೊಂದು ಸಲ ಸಿಟ್ಟುಗೊಂಡು ಕಚ್ಚಿಯೇಬಿಡುತ್ತವೆ. “ದೊಣ್ಣೆಗೆ ದೊಣ್ಣೆ, ಕತ್ತಿಗೆ ಕತ್ತಿ” ಎಂಬ ಮುಯ್ಯಿಗೆ ಮುಯ್ಯಿ ತೀರಿಸುವ ನೀತಿಯು ಇಲ್ಲಿ ವ್ಯರ್ಥವಾಗುವುದು: ಮೆಟ್ಟು ಕಚ್ಚಿತೆಂದು, ಮೆಟ್ಟನ್ನು ಕಚ್ಚುವವರು ಯಾರೂ ಇಲ್ಲ. ಅಂತಹ ಕಠೋರಸ್ವಭಾವದ ಮೆಟ್ಟುಗಳಿಗೆ ಎಣ್ಣೆ-ಗಿಣ್ಣೆ ಹಾಕಿ ಸಮಾಧಾನಪಡಿಸಿ, ಕೆಲವು ದಿನ ರಜೆ ಕೊಡಬೇಕಾಗುತ್ತದೆ. ಆದರೆ, ಹೆಚ್ಚು ದಿನ ರಜೆಕೊಟ್ಟರೆ, ರಜೆಯಮೇಲೆ ಹೋಗಿ ಪುನಃ ಕೆಲಸಕ್ಕೆ ಸೇರುವ ಸರಕಾರೀ “ಆಫೀಸರ”ರಂತೆ ಅವು ಮರಳಿ ಒರಟಾಗಿ ಬಿಡುತ್ತವೆ. ಆದುದರಿಂದ ಮರ್ದನವೇ ಅವುಗಳ ಗುಣವನ್ನು ವರ್ಧನ ಮಾಡುವ ಮದ್ದು. ನಡೆದಷ್ಟೂ, ತುಳಿದಷ್ಟೂ ಅವುಗಳ ಸ್ವಭಾವವು ಮೃದುವಾಗುವುದರಿಂದ, ದೇವಾಲಯ, ಸರಕಾರೀ “ಆಫೀಸು” ಮೊದಲಾದ ಸ್ಥಳಗಳಿಗೆ ಅವುಗಳನ್ನು ಹಾಕಿಕೊಂಡು ಹೋಗಬಾರದೆನ್ನುವುದು ತಪ್ಪಲ್ಲವೆ? ನಮ್ಮ ಜೀವನದ ಸಂಗಾತಿಯಾದ ಜೋಡಿನ ಮೇಲೆ ಹೀಗೆ ನಿಷೇಧವನ್ನು ಹೊರಿಸಿದರೆ, ನಾವು ಜೋಡಿಗೆ ಏನು ಬೆಲೆಕೊಟ್ಟಂತಾಯಿತು?

ಆದರೆ ಈಗೀಗ ಜೋಡಿನ ಬೆಲೆಯು ಏರುತ್ತಾ ಹೋಗುತ್ತಿರುವುದು ಸಂತೋಷದ ವಿಷಯ. (ಗಿರಾಕಿಗಳಿಗಲ್ಲ, ಸಮಗಾರರಿಗೆ ಮತ್ತು ಮೆಟ್ಟಿನ ವ್ಯಾಪಾರಿಗಳಿಗೆ ಮಾತ್ರ.) ಕಾರಣವೇನೆಂದರೆ, ಜೋಡು ಮರ್ಯಾದೆಗೆ ಲೋಕದಲ್ಲಿ ಮನ್ನಣೆ ಹೆಚ್ಚು. ಎತ್ತಿನ ಜೋಡಿಲ್ಲದೆ, ರೈತನ ಕೆಲಸವು

ಸಾಗದು; ಜೋಡು ಚಕ್ರವಿಲ್ಲದೆ, ಗಾಡಿಯು ನಡೆಯದು; ಓಲೆ-ಜೋಡು ಹಿಂದೂ ಮಹಿಳೆಯ ಸೌಭಾಗ್ಯದ ಗುರುತು; ಗಂಡು-ಹೆಣ್ಣುಗಳ ಜೋಡು ಗೃಹಸ್ಥಾಶ್ರಮದ ಧರ್ಮ. ಇನ್ನು--ಜೋಡುಕಾಣಿಕೆ, ಜೋಡುಆರತಿ, ಜೋಡುಬಳೆ........ಇತ್ಯಾದಿಗಳೆಲ್ಲಾ ಜೋಡಿನ ಕೀರ್ತಿಯ ಕಿರಣಗಳಾಗಿವೆ. ಒಂದು ಬದಿಯಲ್ಲಿ ಮಾತ್ರ ಮೀಸೆಯಿಟ್ಟರೆ, ಒಂದೇ ಕಾಲಿಗೆ ಮೆಟ್ಟು ಹಾಕಿದರೆ, ಒಂದೇ ಕಣ್ಣಿಗೆ ಕಣ್ಣುಕ್ರವನ್ನಿಟ್ಟರೆ, ನಗುವಿಗೀಡಾಗಲೇಬೇಕಾಗುವುದು. ಹೀಗೆಂದು, ಎಲ್ಲವನ್ನೂ ಜೋಡಾಗಿ ಮಾಡಿದರೆ ಸಂಕಟಕ್ಕೀಡಾಗಬೇಕಾಗುವುದು—ಜೋಡುಮದುವೆ ಮಾಡಿಕೊಂಡರೆ, ಒಂದೇ ಮನೆಗೆ ಜೋಡುಯಜಮಾನರಿದ್ದರೆ, ಒಂದೇ ರಾಜ್ಯದಲ್ಲಿ ಎರಡು ರಾಜ್ಯಾಧಿಕಾರಿಗಳಿದ್ದರೆ—ಜೋಡುದೋಣಿಗೆ ಕಾಲಿಟ್ಟಂತಾಗುವುದು. ಈಗೀಗ ನಮ್ಮಲ್ಲಿ "ಇಜ್ಜೋಡೂ" ತಲೆಯೆತ್ತಿದೆ! ಜೋಡು-ನಾಲಗೆಯಿದ್ದವರಿಗಂತೂ ಲೋಕವೇ ಅಂಜುವುದು! ಆದುದರಿಂದ ಜೋಡನ್ನು ಬೇಕಾದಲ್ಲಿ ಮಾತ್ರ ಉಪಯೋಗಿಸಿಕೊಳ್ಳುವುದೊಳ್ಳೆಯದು.